# ಅಧ್ಯಾಯ–೦೩

# ಲಿಂಗತಾರತಮ್ಯದ ಹಿನ್ನೆಲೆಯಲ್ಲಿ ಶೋಷಣೆ

ಮಾನವರು ಶಿಕ್ಷಿತರಾದಂತೆ ಅಸಮಾನತೆಯ ಅಡ್ಡಗೋಡೆಗಳು ತನ್ನಿಂದ ತಾನೇ ಏರ್ಪಡುತ್ತವೆ. ಸ್ತ್ರೀ ವಿಷಯದಲ್ಲಿ ಇದು ಸಲ್ಲದು. ಸಮಾಜದಲ್ಲಿ ತಾಂಡವವಾಡುತ್ತಿರುವ ವರ್ಗ, ವರ್ಣಾಧಾರಿತ ಅಸಮಾನತೆಗಳಿಗಿಂತ ಲಿಂಗ ಅಸಮಾನತೆಯು ಬಲಿಷ್ಠವಾಗಿದೆ. ಪುರುಷಪ್ರಧಾನ ಸಮಾಜದ ಅಮಾನವೀಯ ಕ್ರೌರ್ಯಗಳಿಂದ ಲಿಂಗ ತಾರತಮ್ಯ ನೆಲೆನಿಂತಿದೆ. ಈ ಅಸಮಾನತೆಯ ನೆಲೆಯಲ್ಲಿ ಹೆಣ್ಣನ್ನು ನಿರಂತರವಾಗಿ ಶೋಷಿಸುತ್ತ ಬರಲಾಗಿದೆ. ಅವಳ ಶೋಷಣೆಯು ಜನನದಿಂದ ಪ್ರಾರಂಭವಾಗಿ ಮರಣದಲ್ಲಿ ಅಂತ್ಯಗೊಳ್ಳುತ್ತದೆ. "ಹೆಣ್ಣು ಭ್ರೂಣ ಹತ್ಯೆಯಂತಹ ಆಧುನಿಕ ರೂಪ ಪಡೆದುಕೊಂಡಿರುವ ಲಿಂಗತಾರತಮ್ಯದ ತುದಿಯಿಂದ ಹಿಡಿದು ಮಹಿಳೆಯ ಬಾಲ್ಯ, ಯೌವ್ವನ, ವೃದ್ಧಾಪ್ಯಗಳೆಲ್ಲವನ್ನು ಅದು ಆವರಿಸಿಕೊಂಡಿದೆ. ವಿವಾಹ, ದಾಂಪತ್ಯ, ಕೌಟುಂಬಿಕ ಜೀವನ, ಸಾಮಾಜಿಕ ಸ್ಥಾನಮಾನಗಳು ಇತ್ಯಾದಿಗಳೆಲ್ಲವೂ ಈ ಪರಿಧಿಯೊಳಗೇ ಬಂದು ನಿರ್ಧಾರಿತವಾಗುತ್ತವೆ"[೧] ಎಂದು ಲೇಖಕಿ ಡಾ. ಎಂ.ಎಸ್.ವೇದಾ ಅವರು ಅಭಿಪ್ರಾಯಿಸಿದ್ದಾರೆ. ಅವರ ಈ ಅಭಿಪ್ರಾಯವು ಸರ್ವಕಾಲೀಕವಾದದ್ದಾಗಿದೆ.

ಕಾಡು ಮನುಷ್ಯನಾಗಿದ್ದಾಗ ಇಲ್ಲದ ಅಸಮಾನತೆ ನಾಗರಿಕತೆ ಬೆಳೆದಂತೆ ಹೆಚ್ಚಾಗುತ್ತ ಹೋಗಿದೆ. ಅಲೆಮಾರಿ ಜೀವನದಲ್ಲಿ ಮಾತೃಪ್ರಧಾನ ವ್ಯವಸ್ಥೆ ಅಸ್ತಿತ್ವದಲ್ಲಿದ್ದರು ಪುರುಷನನ್ನು ಕೀಳಾಗಿ ಕಾಣುತ್ತಿರಲಿಲ್ಲ. ಇದರಿಂದಲೆ 'ಸ್ತ್ರೀ' ಎಷ್ಟು ಉದಾರ ಮನಸ್ಸಿನವಳೆಂಬುದು ಅರಿವಾಗುತ್ತದೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಅಧಿಪತ್ಯ ಸ್ಥಾಪಿಸಿರುವ ಪುರುಷ, ಹೆಣ್ಣನ್ನು ಅಧೀನಳಾಗಿ ನೋಡುತ್ತಿದ್ದಾನೆ.

ಪ್ರಕೃತಿಯಲ್ಲಿ ಸ್ತ್ರೀ–ಪುರುಷರ ದೇಹರಚನೆ, ಬುದ್ಧಿ, ಅವಯವಗಳು ಸಮಾನವಾಗಿವೆ. ಇವರಿಬ್ಬರ ಮೆದುಳು, ನರಗಳು ಸಮಾನವಾಗಿ ಕೆಲಸ ಮಾಡುತ್ತವೆ. ಗಂಡಿನಲ್ಲಿ ದೈಹಿಕ ಶಕ್ತಿ ಹೆಚ್ಚಿದ್ದರೆ 'ಸ್ತ್ರೀ' ತಾಯ್ತನ ಹೊಂದುವಲ್ಲಿ ಪುರುಷನಿಗಿಂತ ಒಂದು ಕೈ ಮೇಲೆಯೆ ಇದ್ದಾಳೆ. ಸ್ತ್ರೀ ಪುರುಷನಷ್ಟೇ ಸರಿಸಮಾನಳು ಎಂಬುದು ಇದರಿಂದ ಅರಿವಾಗುತ್ತದೆ. ಪುರುಷಪ್ರಧಾನ ಸಮಾಜ ಅವಳ ತಾಯ್ತನವನ್ನೆ ಅಸ್ತ್ರವಾಗಿಟ್ಟುಕೊಂಡು, ತನ್ನ ಸ್ವಾಮ್ಯತ್ವ ಸ್ಥಾಪಿಸುತ್ತಾ ಬಂದಿದೆ. ಹೆಣ್ಣನ್ನು ಬಂಧನಕ್ಕೆ ಒಳಪಡಿಸಿ ಬುದ್ಧಿಹೀನಳಂತೆ ಕಾಣಲಾಗುತ್ತಿದೆ. ಆರ್ಥಿಕವಾಗಿ ನಿರ್ಗತಿಕಳನ್ನಾಗಿ ಮಾಡಿ

ಗಂಡ, ಮನೆ, ಮಕ್ಕಳ ಲಾಲನೆ–ಪಾಲನೆಯಲ್ಲೆ ಜೀವ ಸವೆಸುವಂತೆ ಕುಟುಂಬದ ಒಳಗು ಕುಟುಂಬದ ಹೊರಗು ಎಲ್ಲಾ ರಂಗದಲ್ಲೂ ತಾರತಮ್ಯವೆಸಗುತ್ತಿದೆ.

## ೩.೧ ಸಾಮಾಜಿಕ ನೆಲೆ

'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಲ್ಲಿ ನಾರಿಯರನ್ನು ಪೂಜಿಸಲಾಗುತ್ತದೊ ಅಲ್ಲಿ ದೇವರು ನೆಲೆ ನಿಲ್ಲುತ್ತಾನೆ ಎಂದು ಹೇಳಿದ ಮನು 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಹೆಣ್ಣಿನ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಿದ್ದಾನೆ. ಸಮಾಜದಲ್ಲಿ ಹೆಣ್ಣಿನ ಸ್ಥಾನವೇನೆಂದು ಇದರಿಂದಲೆ ತಿಳಿಯುತ್ತದೆ. ಸಮಾಜ ಹೆಣ್ಣಿನ ಶೋಷಣೆಯ ಮೇಲೆ ನಿಂತತೆ ಭಾಸವಾಗುತ್ತದೆ. ವೇದಗಳ ಕಾಲದಲ್ಲಿ ಮಹಿಳೆಯರಿಗೆ ಇದ್ದಂತಹ ಸ್ವಾತಂತ್ರ್ಯ ಇಂದು ಇಲ್ಲವಾಗಿದೆ. ಪುರುಷ ಸ್ವಾತಂತ್ರ್ಯದ ಮೂರ್ತಿಯಾಗಿ ಅಧಿಕಾರ ಚಲಾಯಿಸಿದರೆ, ಅವನ ಸ್ವಾತಂತ್ರ್ಯದ ಸುಳಿಯಲ್ಲಿ ಸಿಲುಕಿ ಉಸಿರುಗಟ್ಟುವಂತಹ ಸ್ಥಿತಿಯಲ್ಲಿ 'ಸ್ತ್ರೀ' ಇದ್ದಾಳೆ.

ಪುರುಷಪ್ರಧಾನ ವ್ಯವಸ್ಥೆ ಹೆಣ್ಣಿನ ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸಿ ಪರಾವಲಂಬಿ ಜೀವನಕ್ಕೆ ಒಳಪಡಿಸಿದೆ. ಹೆಣ್ಣೆಂದರೆ ಪುರುಷನ ಅಧೀನವಾಗಿರಬೇಕೆಂಬ ಚೌಕಟ್ಟು ನಿರ್ಮಿಸಿ ಗುಲಾಮಳಂತೆ ನಡೆಸಿಕೊಳ್ಳುತ್ತಿದೆ. ತಾಯಿಯಾಗಿ, ಮಗಳಾಗಿ, ಸೊಸೆಯಾಗಿ, ಅತ್ತಿಗೆಯಾಗಿ, ನಾದಿನಿಯಾಗಿ, ಅತ್ತೆಯಾಗಿ ಪಾತ್ರ ನಿರ್ವಹಿಸುವ ಹೆಣ್ಣಿನ ಮೇಲೆ ಬಂಧನದ ನಿಯಮಗಳನ್ನು ಹೇರಿ ಅವುಗಳನ್ನು ಪಾಲಿಸುವತ್ತ–ಉಳಿಸಿಕೊಂಡು ಬರುವ ಜವಾಬ್ದಾರಿಯನ್ನು ಹೊರಿಸಿದೆ.

ಹೆಣ್ಣು ಸಮಾಜದಲ್ಲಿ ಪುರುಷನ ಆಶ್ರಯದಲ್ಲಿರಬೇಕೆಂಬಂತೆ ನಿಯಮಗಳನ್ನು ಸೃಷ್ಟಿಸಲಾಗಿದೆ. ತಂದೆ, ಗಂಡ, ಮಗನ ಆಶ್ರಯದಾತಳಾಗಿರಬೇಕೆಂದೆ ಮನುಸ್ಮೃತಿಯಲ್ಲಿಯೂ ಹೇಳಿದೆ. ಇದರಿಂದ ಹೆಣ್ಣು ಮನೆಗೆ ಸೀಮಿತವಾದವಳು ಎಂಬ ಅಭಿಪ್ರಾಯ ಸಮಾಜದಲ್ಲಿ ಮನೆಮಾಡಿಕೊಂಡಿದೆ. ಅವಳು ಜೀವನಪರ್ಯಂತ ಮನೆಯ ಚಾಕರಿ ಮಾಡಿಕೊಂಡು ಮನೆ, ಸಂಸಾರ ಇಷ್ಟರಲ್ಲೆ ಜೀವನ ಸವೆಸುವಂತೆ ಅವಳ ಬದುಕು ಸೀಮಿತವಾಗಿದೆ. ಇದನ್ನು ನಮ್ಮ ಸಮಾಜವು ಅವಳಿಗೆ ಹೇರಿರುವ ಒತ್ತಡವೂ ಆಗಿದೆ. ಪ್ರತಿಯೊಂದು ಹೆಣ್ಣು ಅದರೊಳಗೆ ಕರಗಿ ಹೋಗುತ್ತಿದ್ದಾಳೆ. "ಪತ್ನಿ ತನ್ನ ಗಂಡನ ಜೊತೆಯಲ್ಲಿ ವಾಸಿಸುವುದು ಕಡ್ಡಾಯ ಮತ್ತು ಅವಳು ಅವನ ಅಧಿಕಾರಕ್ಕೆ ತನ್ನನ್ನು ತಾನು ಒಪ್ಪಿಸಿಕೊಳ್ಳಬೇಕು. ಅವನ ರಕ್ಷಣೆಯಲ್ಲಿರುವುದು ಪತ್ನಿಯ ಮೊದಲ ಕರ್ತವ್ಯ ಎಂಬ ಭಾವಕ್ಕೆ ಒಳಗಾಗಿದ್ದಾಳೆ".[೨] ಹೀಗೆ ಗಂಡ, ಮಕ್ಕಳು ಹಾಗೂ ಕುಟುಂಬದ

ಹಿತಾಸಕ್ತಿಗಳೇ ಹೆಣ್ಣಿನ ಹಿತಾಸಕ್ತಿಯೆಂದು ಯಾರು ಭಾವಿಸುತ್ತಾರೋ ಅವರೇ ಆದರ್ಶ ಗೃಹಿಣಿಯರು ಎಂಬ ಆದರ್ಶಕ್ಕೆ ತಲೆಬಾಗುತ್ತಿದ್ದಾಳೆ.

ಮಹಿಳೆಯ ಬದುಕಿನ ಅಸ್ತಿತ್ವದ ಎಲ್ಲ ನೆಲೆಗಳಲ್ಲಿಯೂ ಸಾಮಾಜಿಕ ಚೌಕಟ್ಟಿನ ಬಂಧನ ಅವಳನ್ನು ಸುತ್ತುವರಿದಿದೆ. ಮಾತೃದೇವೋಭವ, ಮಾತೃಸ್ವರೂಪಿಣಿ, ಸಹನಾಮಯಿ, ಕರುಣಾಮಯಿ ಎಂದೆಲ್ಲಾ ಹೊಗಳುತ್ತಾ ಸ್ತ್ರೀಯರನ್ನು ತುಳಿಯುವ, ದಮನ ಮಾಡುವ ಶೋಷಕ ಪ್ರವೃತ್ತಿ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಪರಂಪರಾಗತವಾಗಿ ಬೇರೂರಿದೆ. ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳೇ ತುಂಬಿರುವ ಇಂಥ ನೆಲೆಗಟ್ಟಿನಲ್ಲಿ ಮಹಿಳೆಯರು ಪುರುಷರೊಂದಿಗೆ ಸಮಾನ ಸ್ಥಾನಮಾನಗಳನ್ನು ಹೊಂದಿಲ್ಲ. ಆಧುನಿಕತೆಯ ತುತ್ತ ತುದಿಯಲ್ಲಿರುವ ಸಮಾಜಗಳಲ್ಲಿರುವವರೂ ಸಹ ಲಿಂಗ ಸಂಬಂಧಿ, ಪೂರ್ವಗ್ರಹ ಪೀಡನೆ, ದೌರ್ಜನ್ಯ, ಕಿರುಕುಳಗಳಿಗೆ ಈ ಶತಮಾನದಲ್ಲು ಈಡಾಗುತ್ತಿರುವುದು ದುರ್ದೈವ. ಸಂಪ್ರದಾಯ, ಆಚಾರ-ವಿಚಾರಗಳ ನೆವದಲ್ಲಿ ಹೆಣ್ಣನ್ನು ಶೋಷಿಸಲಾಗುತ್ತಿದೆ. ಅವುಗಳಲ್ಲಿ ವೈಧವ್ಯ, ಬಂಜೆತನ, ದೇವದಾಸಿಯಂಥ ಸಾಮಾಜಿಕ ಕಟ್ಟಳೆಗಳಲ್ಲಿ ಸ್ತ್ರೀಯರು ನಲುಗುತ್ತಿರುವುದನ್ನು ಕಾಣಬಹುದು.

## ವೈಧವ್ಯ

'ಸ್ತ್ರೀ' ಹುಟ್ಟಿನಿಂದ ಸಾಯುವವರೆಗು ಪುರುಷಪ್ರಧಾನ ವ್ಯವಸ್ಥೆಯಲ್ಲಿ ಚಾಲ್ತಿಯಲ್ಲಿರುವ ಆಪಾದನೆಗಳಿಗೆ ಗುರಿಯಾಗುತ್ತಿದ್ದಾಳೆ. ಪತಿಯ ಮರಣದಿಂದ ಆಕೆಗೆ ಬಯಸದೆ ಬರುವ ಪಟ್ಟ ವೈಧವ್ಯ. ಗಂಡನಿಲ್ಲದ ಹೆಣ್ಣಿಗೆ ಯಾವ ಸ್ಥಾನಮಾನವು ಸಿಗದಂತೆ ಅವಳನ್ನು ಅಪಶಕುನವೆಂಬಂತೆ ಸೃಷ್ಟಿಸಲಾಗಿದೆ. ವಿಧವೆ ತನ್ನೆಲ್ಲಾ ಭೌತಿಕ ಸುಖಗಳನ್ನು ಕಳೆದುಕೊಂಡು ಏಕಾಂಗಿಯಾಗಿ ಬದುಕುವಂತೆ ಕಾಯ್ದುಕೊಂಡಿದೆ. ವಿಧವೆಯ ಉಡುಗೆ-ತೊಡುಗೆ, ಊಟ-ಉಪಚಾರ, ಆಚಾರ-ವಿಚಾರಗಳೆಲ್ಲದಕ್ಕೂ ಅಡೆತಡೆಯೊಡ್ಡಿದೆ. 'ಗಂಡನಿಂದಲೆ ಜೀವನ', 'ಗಂಡನಿಲ್ಲದ ಬದುಕು ನಶ್ವರ'; ಎಂಬಂತೆ ವಿಧವೆಯನ್ನು ಕಾಣಲಾಗುತ್ತಿದೆ. ವಿಧವೆಯಾದ ಹೆಣ್ಣು ಸ್ವಾತಂತ್ರ್ಯ ಹಿಣತೆಯಲ್ಲಿಯೇ ಬದುಕಬೇಕೆಂಬ ಲಕ್ಷ್ಮಣ ರೇಖೆ ಹಾಕಿದೆ.

ವಿಧವೆಯಾದ ಹೆಣ್ಣು ಮೊದಲಿಗೆ ಸೌಮಂಗಲ್ಯ ಚಿಹ್ನೆಗಳೆಂದು ಗುರುತಿಸಿಕೊಂಡಿರುವ ಅರಿಶಿನ, ಕುಂಕುಮ, ಬಳೆ, ಹೂ, ತೊಡುವಂತಿಲ್ಲ. ಇವು ಎಲ್ಲಾ ವಿಧವೆಯರು ಅನುಸರಿಸಬೇಕಾದ ನಿಯಮ. ಆದರೆ ಜಾತಿ ಉತ್ತಮವಾದಷ್ಟು ವಿಧವೆಯ ಆಚರಣೆಗಳು ಅಮಾನವೀಯವಾಗಿವೆ. ಬ್ರಾಹ್ಮಣ ಜನಾಂಗದಲ್ಲಿ ಕೇಶಮುಂಡನ, ಬಿಳಿಸೀರೆ ತಲೆ ಮೇಲೆ ಹೊದ್ದುವುದು, ಹೊಟ್ಟೆ ತುಂಬ

ಊಟ ಮಾಡದಿರುವುದು. ಪೂಜೆ–ಪುನಸ್ಕಾರ ಮಾಡಿಕೊಂಡು ಕಾಲ ಕಳೆಯುವುದು ಇವು ದಿನನಿತ್ಯದ ವಿಧವೆಯರ ಜೀವನಕ್ರಮವಾಗಿದೆ. ಜಾತಿ ಯಾವುದೆ ಆದರು ವಿಧವೆಗೆ ಇರುವ ನಿಯಮಗಳು ಅಸಂಬದ್ಧವಾದವು. ಇಂಥ ಕ್ರೂರ ಪದ್ಧತಿಯ ಹಿಂದೆ ಹೆಣ್ಣು ಸೌಂದರ್ಯವತಿಯಾಗಿ ಕಾಣಬಾರದು, ಮತ್ತೊಬ್ಬ ಪುರುಷನಿಗೆ ಆಕೆಯ ಮೇಲೆ ಪ್ರೀತಿ ಹುಟ್ಟಬಾರದು ಎಂಬ ಪುರುಷಪ್ರಧಾನ ವ್ಯವಸ್ಥೆಯ ಸ್ವಾರ್ಥತೆ ಕಂಡುಬರುತ್ತದೆ. ಈ ರೀತಿಯ ಆಚರಣೆಗಳಾವುವು ವಿದುರನಿಗಿರುವುದಿಲ್ಲ. ಹೆಂಡತಿಯನ್ನು ಕಳೆದುಕೊಂಡವನನ್ನು ಸಾಮಾನ್ಯನಂತೆಯೆ ನೋಡಲಾಗುತ್ತದೆ. ಯಾವುದೆ ಅಡೆತಡೆಯಿಲ್ಲದೆ ವಿದುರ ಮರು ಮದುವೆಯಾಗಬಹುದು. ಸತಿಯ ಮರಣಾನಂತರ ಉತ್ತರ ಕ್ರಿಯಾದಿಗಳನ್ನು ಮುಗಿಸಿ ಪುತ್ರೇಚ್ಛೆಯಿಂದ, ಇನ್ನಿತರ ಕಾರಣಗಳಿಂದ ಮರುವಿವಾಹ ಮಾಡಿಕೊಳ್ಳುವ ಸ್ವಾತಂತ್ರ್ಯ ನೀಡಿದೆ. ವಿದುರನಿಗಿಲ್ಲದ ಕಠಿಣ ಆಚರಣೆಗಳು ವಿಧವೆಯರಿಗೆ ಮಾತ್ರ ಏಕೆ? ಎಂಬ ಪ್ರಶ್ನೆ ಮೂಡುವುದು ಸಹಜ.

ವೇದಕಾಲದಲ್ಲಿ ವಿಧವೆಯರ ದುಃಸ್ಥಿತಿಯ ಬಗ್ಗೆ ಉಲ್ಲೇಖಗಳು ದೊರೆತಿಲ್ಲ. ನಂತರದಲ್ಲಿ ವಿಧವೆಯರಿಗೆಂದೆ ಬಿಗಿ ವಾತಾವರಣ ಸೃಷ್ಟಿಯಾಗಿರುವಂತೆ ತೋರುತ್ತದೆ. ಹಂತ–ಹಂತವಾಗಿ ಹೆಣ್ಣಿನ ಸ್ವಾತಂತ್ರ್ಯದ ಸುತ್ತ ಕಡಿವಾಣಗಳ ಬೇಲಿ ಹಾಕುತ್ತ ಅವಳ ಜೀವನವನ್ನು ಗಂಡು ನಿರ್ಧರಿಸುತ್ತ ಬಂದಿದ್ದಾನೆ. 'ಹೆಣ್ಣಿನ ಅಸ್ತಿತ್ವ ಗಂಡಿನಿಂದಲೇ' ಎಂದು ಹೇಳುವ ಧರ್ಮಶಾಸ್ತ್ರಕಾರರು ಕಟ್ಟುಪಾಡುಗಳನ್ನು ಪಾಲಿಸುವಂತೆ ಮಾಡಿದ್ದಾರೆ. "ಸ್ತ್ರೀಯು ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ವೈಧವ್ಯದಲ್ಲಿ ಮಕ್ಕಳ ಅಧೀನದಲ್ಲಿ ಬದುಕಬೇಕಲ್ಲದೆ ಸ್ವತಂತ್ರವಾಗಿ ವ್ಯವಹರಿಸಬಾರದು"[೩] ಎಂದು ಗಂಡಿನ ಆಶ್ರಯದಲ್ಲಿರಬೇಕೆಂಬಂತೆ ಮನುಸ್ಮೃತಿ ಹೇಳಿದೆ. ಮಕ್ಕಳಿಲ್ಲದ ವಿಧವೆ ಬೇರೆ ಗಂಡಿನ ಆಶ್ರಯ ಬಯಸಿದರೆ, ಅದನ್ನು 'ಪತಿವ್ರತಾ' ಹೆಸರಿನಲ್ಲಿ ಬಂಧಿಸಿದೆ. ಒಟ್ಟಾರೆ ಹೆಣ್ಣು ದಿನಕ್ಕೊಂದು ಹೊಸ ಬಂಧನದ ನಿಯಮಗಳ ಅಡಿಯಲ್ಲಿ ಬದುಕುತ್ತಿದ್ದಾಳೆ.

ಕೌಟುಂಬಿಕ ಸಮಾಜದಲ್ಲಿ ಪತಿ ಮರಣಾ ನಂತರವು ಸ್ತ್ರೀಯು ಬ್ರಹ್ಮಚಾರಿಣಿಯಾಗಿ ಉಳಿದು ವಿಧವಾ ಆಚರಣೆಗಳನ್ನು ಪಾಲಿಸುವವಳಾಗಿರುತ್ತಾಳೆ. ಇಲ್ಲದಿದ್ದರೆ ಸಮಾಜದ ಆಪಾದನೆಗಳಿಗೆ ಗುರಿಯಾಗಬೇಕಾಗುತ್ತದೆ. ಈ ರೀತಿಯ ಭಯ, ಆತಂಕಗಳಿಂದ ವೈಧವ್ಯಕ್ಕೊಳಪಟ್ಟ ಕೆಲ ವಿಧವೆಯರು ಜೀವನಪೂರ್ತಿ ತಮ್ಮ ಇಷ್ಟಕ್ಕೆ ವಿರುದ್ಧವಾಗಿ ಒತ್ತಡಗಳಿಗೆ ಮಣಿದು ಬದುಕುತ್ತಿದ್ದಾರೆ. ಹಿಂದೆ ಸಹಗಮನ ಪದ್ಧತಿಗಳಲ್ಲಿ ಪುರುಷ ರಾಜಕಾರಣವಿದ್ದರು ವಿಧವೆಯಾದ

ಹೆಣ್ಣು ಸಮಾಜದ ಹೇಯ ಕೃತ್ಯಗಳಿಗೆ ಬಲಿಯಾಗಿ ಸತ್ತಂತೆ ಬದುಕುವುದಕ್ಕಿಂತ ಪತಿಯ ಚಿತೆ ಏರುತ್ತಿದ್ದಳು. ಇದರಿಂದಲೆ ವೈಧವ್ಯ ಜೀವನದಲ್ಲಿ ಪ್ರತೀದಿನ ಸಾಯುವುದಕ್ಕಿಂತ ಒಂದೇ ದಿನ ಸಾಯುವ ನಿರ್ಧಾರದಂತೆ ಕಂಡುಬರುತ್ತದೆ.

ಇಂದು ವಿಧವೆಯರ ಜೀವನದಲ್ಲಿ ಸುಧಾರಣೆ ಕಂಡುಬರುತ್ತಿದೆಯಾದರೂ ಸ್ವಾತಂತ್ರ್ಯಪೂರ್ವ–ಕಾಲದಲ್ಲಿ ವಿಧವೆಯರ ಜೀವನ ಹೇಗಿತ್ತು ಎಂಬುದನ್ನು ಎಂ.ಕೆ.ಇಂದಿರಾರವರ 'ಫಣಿಯಮ್ಮ' ಕಾದಂಬರಿಯಲ್ಲಿ ಕಾಣಬಹುದು. ವಿಧವೆಯಾದವರಲ್ಲು ಬಾಲ್ಯ, ಪ್ರೌಢ ಎಂಬ ರಿಯಾಯಿತಿ ಇಲ್ಲ. ಕನ್ಯೆಯಾಗಿದ್ದರೂ ಅವಳು ವಿಧವೆಯರಿಗಿದ್ದ ನಿಯಮಗಳನ್ನು ಪಾಲಿಸಬೇಕಾಗಿತ್ತು. ಇಂತಹ ಕ್ರೂರ ಆಚರಣೆಗೆ ಫಣಿಯಮ್ಮ ಬಲಿಯಾಗುತ್ತಾಳೆ. ಈ ಕಾದಂಬರಿಯಲ್ಲಿ "ಬ್ರಾಹ್ಮಣ ಬಾಲವಿಧವೆಯರ ಬದುಕಿನ ಬವಣೆಯ ಕಥೆಯ ಜೊತೆಗೆ ಶೋಷಣೆಯ ಆಗರವಾಗಿದ್ದ ಪುರುಷಪ್ರಧಾನ ಸಮಾಜ ಹೆಣ್ಣನ್ನು ಹೆಜ್ಜೆ ಹೆಜ್ಜೆಗೂ ಹೇಗೆ ಪೀಡಿಸುತ್ತದೆ. ಎನ್ನುವ ನೈಜ ಘಟನೆಗಳ ಚಿತ್ರಣವಿದೆ".[೪] ಹೆಣ್ಣೆಂದರೆ ತಾಯ್ತನ ಗೃಹಿಣಿತ್ವ, ಪತಿವ್ರತೆ, ಶೀಲಪಾವಿತ್ರ್ಯತೆ, ವೈಧವ್ಯಗಳಂತಹ ಆಚರಣೆಗಳನ್ನು ಪಾಲಿಸುವವಳು ಮಾತ್ರವೆಂದೆ ಆಕೆಯನ್ನು ಸೃಷ್ಟಿಸಿ, ಅವಳ ಮೇಲಿ ಹಿಡಿತ ಸಾಧಿಸುವ ಪುರುಷಷಾಹಿ ಸಮಾಜದ ಕ್ರೂರತನ ಈ ಕಾದಂಬರಿಯಲ್ಲಿ ಕಾಣಿಸುತ್ತದೆ. ಬಾಲ್ಯ ವಿವಾಹದಂತಹ ಪದ್ಧತಿಯಿಂದ ತಮ್ಮ ತಮ್ಮ ಸ್ವಾರ್ಥಗಳಿಗೆ ಅವಳನ್ನು ಬಲಿಕೊಡುವವರು ಬಾಲವೈಧವ್ಯಕ್ಕೆ ಕಾರಣೀಭೂತರಾಗಿರುವುದಕ್ಕೆ ಒಪ್ಪಿಕೊಳ್ಳದೆ ಅದನ್ನು ಹೆಣ್ಣಿನ ಮೇಲೆ ಹೊರಿಸುವ ಅನಾಗರಿಕತೆಯ ಎಳೆಗಳು ಚಿತ್ರತವಾಗಿವೆ.

ಬುದ್ಧಿ ಬಲಿಯುವ ಮೊದಲೆ ಬಾಲ ವಿಧವೆಯಾಗಿದ್ದ ಫಣಿಯಮ್ಮ ವೈಧವ್ಯವ ಸಿಹಿ–ಕಹಿ ಅನುಭವಗಳನ್ನು ಪಡೆದವಳಾಗಿರುತ್ತಾಳೆ. ಹುಟ್ಟಿದವಳಿಗೆ 'ಅಮೃತಘಳಿಗೆ' ಎಂದು ಹೇಳಿ ವಿಧವೆಯಾದವಳಿಗೆ 'ಹಣೆಬರಹ' ಎಂಬ ಹಣೆ ಪಟ್ಟಿ ಕಟ್ಟಿ 'ಗಂಡನನ್ನು ತಿಂದುಕೊಂಡವಳು' ಎಂದು ಆಪಾದಿಸುತ್ತ, ನಡೆಯುವ ಎಲ್ಲಾ ಅಹಿತಕರ ಘಟನೆಗಳಿಗೂ ಹೆಣ್ಣನ್ನು ಗುರುಪಡಿಸುತ್ತಾ ಸಮಾಜ ನಿರ್ಮಾಣವಾಗಿದೆ. ಹಾವು ಕಚ್ಚಿ ಸತ್ತ ನಂಜುಂಡನ ಸಾವಿಗೆ ಫಣಿಯಮ್ಮಳನ್ನು ಕುರಿತು "ಹುಡುಗಿಯ ಕಾಲ್ಗುಣ ಒಳ್ಳೆಯದಲ್ಲ. ಮದುವೆಯಾಗಿ ಎರಡು ತಿಂಗಳೊಳಗೆ ಗಂಡನನ್ನು ನುಂಗಿತು"[೫] ಎಂದು ದೂಷಿಸುವುದು, ಸಾವು ಯಾರ ಕೈಯಲ್ಲು ಇಲ್ಲದಿದ್ದರು ಆಗುವ ಅವಘಡಗಳಿಗೆ ಕಾರಣೀಭೂತಳಾಗುವವಳು ಹೆಣ್ಣು ಎಂಬುದು ಎಲ್ಲಾ ಕಾಲದಲ್ಲು ನೆಲೆ ನಿಂತಿದೆ.

ಸಂಪ್ರದಾಯದ ಹೆಸರಿನಲ್ಲಿ ಮೂಢನಂಬಿಕೆಯ ಆಗರವಾಗಿರುವ ಕಟ್ಟುಪಾಡುಗಳು ವಿಧವೆಯರಿಗೆ ಮಾತ್ರವಾಗಿವೆ. ಸಮಾಜದಲ್ಲಿ ಮೊದಲ ದರ್ಜೆಯಲ್ಲಿರುವ ಪುರುಷ,

ಸಂಪ್ರದಾಯಗಳನ್ನು ಹೆಣ್ಣಿನ ಮೇಲೆ ಹಾಕಿ ಯಾವ ವಿಧವೆಯೂ ಹೊರತಾಗದಂತೆ ಶೋಷಿಸುವಲ್ಲಿ ಎಚ್ಚರವಹಿಸುತ್ತಿದ್ದಾನೆ. ಫಣಿಯಮ್ಮ ಕನ್ಯೆಯಾಗಿದ್ದರು ವಿಧವೆ ಎಂದು ಪರಿಗಣಿಸಿ ಶೃಂಗೇರಿಯ ಆಜ್ಞೆಯಂತೆ ಒಂಭತ್ತು ವರ್ಷ ಪ್ರಾಯದಲ್ಲೆ ಶಾಶ್ವತ ವಿಧವೆ ಪಟ್ಟ ಕಟ್ಟುವಂತಹ ಕ್ರೂರತನ ಕಂಡುಬರುತ್ತದೆ. ಗಂಡ ಸತ್ತ ಹನ್ನೊಂದನೆ ದಿನಕ್ಕೆ ಸೌಮಂಗಲ್ಯದ ಚಿಹ್ನೆಗಳನ್ನು, ತಲೆಗೂದಲನ್ನು ತೆಗೆದು ಬಿಳಿ ಸೀರೆ ಉಡುವಂತಹ ಪದ್ಧತಿಗೆ ಫಣಿಯಮ್ಮ ಬಲಿಯಾಗುತ್ತಾಳೆ.

ಸಮಾಜದಲ್ಲಿ ಮದುವೆ, ಗಂಡ, ಮನೆ, ವಿಧವೆ, ಇವುಗಳ ಯಾವುದರ ಅರಿವಿರದ ಫಣಿಯಮ್ಮ ಹಿರಿಯರ ಆಚರಣೆಗೆ ಬಲಿಯಾಗಿ ಕೈತುಂಬ ತೊಟ್ಟಿದ್ದ ಹೂವಿನ ಬಳೆ ಒಡೆದಾಗ ಮಾತ್ರ ಅಳುವ ಅವಳ ಮುಗ್ಧತನ ಬಾಲವಿಧವೆಯರ ಜೀವನವನ್ನು ಪರಿಚಯಿಸುತ್ತದೆ. ವಯಸ್ಸಿಗೆ ಬರುವಷ್ಟರಲ್ಲಿ ಮುಗ್ಧತನ ಕಳಚಿ ಆಲೋಚಿಸುವ ಶಕ್ತಿ ಬೆಳೆಸಿಕೊಂಡಿದ್ದ ಹದಿನಾಲ್ಕರ ಪ್ರಾಯದ ಫಣಿಯಮ್ಮಳ ಇಷ್ಟಾರ್ಥಗಳನ್ನು ಕೇಳದೆ ನಿಯಮಿತ ಜೀವನ ಸಾಗಿಸುವ 'ಮಡಿ ಪದ್ಧತಿ'ಗೆ ಒಳಪಡಿಸುವಂತಹದ್ದು ಅಸಮಾನತೆಯನ್ನು ತೋರಿಸುತ್ತದೆ. ವಿದುರನಿಗಿಲ್ಲದ ಇಂಥ ಮಡಿ ಆಚರಣೆಯು ಹೆಣ್ಣಿಗೆ ಮಾತ್ರ ಸೀಮಿತಗೊಳಿಸಿರುವ ಸಮಾಜ ಆಕೆಯಲ್ಲಿ ಯಾವ ಬಯಕೆಗಳು ಬರದಂತೆ ತಡೆ ಹಿಡಿಯುವ ಪದ್ಧತಿಯಾಗಿದೆ.

ಎಂ.ಕೆ.ಇಂದಿರಾ ಅವರ ಕಾದಂಬರಿಯ ನಾಯಕಿ ಫಣಿಯಮ್ಮ ಯಾವುದರ ವಿರುದ್ಧವೂ ಪ್ರತಿಕ್ರಯಿಸಿದವಳಲ್ಲ. ಪ್ರತಿಯೊಂದು ಹೆಣ್ಣು ಸಾಮಾಜಿಕ ವ್ಯವಸ್ಥೆಯೊಳಗೆ ಬಂಧಿಯಾಗಿ ಬದುಕುವಂತೆ ಸಮಾಜ ರಚನೆಯಾಗಿದೆ. ಸಮಾಜದ ವಿರುದ್ಧ ನಡೆದರೆ ಬಹಿಷ್ಕಾರದಂತಹ ಆತಂಕಗಳನ್ನು ಹೇರಿ ಪಾಲಿಸಲೇಬೇಕಾದಂತಹ ಒತ್ತಡವನ್ನು ಹೆಣ್ಣಿನ ಮೇಲೆ ಹಾಕಿದೆ. ಮಾನಸಿಕವಾಗಿ ಸಿದ್ಧವಾಗುವ ಫಣಿಯಮ್ಮ "ಬದುಕಿರುವವರೆಗೂ ಒಪ್ಪತ್ತೂಟ ಉಂಡು, ಮುಂಡೆಯಾಗಿ ಬಾಳಬೇಕು"[೬] ಗಂಡನ ಸಾವಿಗೆ ಯಾರೇನು ಮಾಡುತ್ತಾರೆ ಎಂಬ ನಿರ್ಧಾರಕ್ಕೆ ಬರುತ್ತಾಳೆ. ಈ ನಿರ್ಣಯದ ಹಿಂದೆ ಶೃಂಗೇರಿ ಮಠದ ಬಹಿಷ್ಕಾರದ ಆತಂಕದ ಛಾಯೆ ಕಾಣಿಸುತ್ತದೆ. ಇಲ್ಲಿ ಬೆದರಿಕೆಯನ್ನೊಡ್ಡಿ ಹೆಣ್ಣಿನ ಸ್ವಾತಂತ್ರವನ್ನು ಕಸಿದುಕೊಳ್ಳುತ್ತಿರುವ ಪುರುಷಪ್ರಧಾನತೆ ಕಾಣುತ್ತದೆ.

ಕಾದಂಬರಿಯಲ್ಲಿ ಚಿತ್ರಿಸಿರುವಂತೆ ಸದಾ ಸಂತೋಷದಿಂದ ಮನೆಯನ್ನು ಓರಣವಾಗಿ ಸ್ವಚ್ಛವಾಗಿಟ್ಟುಕೊಳ್ಳಬೇಕೆಂದು ಹೇಳುವ ಮನುಸ್ಮೃತಿಯಂತಹ ಹೇಳಿಕೆಗಳನ್ನು ಆಧರಿಸಿಯೇ ಎಂಬಂತೆ ವಿಧವೆಯರನ್ನು 'ಮಡಿ' ಆಚರಣೆಗೆ ಒಳಪಡಿಸಿದೆ. 'ಮಡಿ' ಆದವಳನ್ನು ಕೀಳಾಗಿ ಕಾಣುತ್ತಿದೆ. ಪವಿತ್ರವೆನಿಸಿದ ಹಾಲನ್ನು ಕುಡಿಯಲು ಯೋಗ್ಯಳಲ್ಲವೆಂಬಂತೆ ಹೀನಾಯವಾಗಿ

ಚಿತ್ರಿಸಿದೆ. ಪ್ರತಿದಿನ ಮಡಿಯುಟ್ಟು, ಒಂದ್ಹೊತ್ತು ಊಟಮಾಡಿ ನಾಲ್ಕುಗೋಡೆಗಳ ಮಧ್ಯೆ ಕಳೆಯುವ ಫಣಿಯಮ್ಮ ಸದಾ ದೇವರ ಪೂಜೆಯಲ್ಲಿ ತಲ್ಲೀನಳಾಗಿರುತ್ತಾಳೆ. ತುಳಸಿಪೂಜೆ, ದೇವರ ಪೂಜೆ ಮಾಡಿಕೊಳ್ಳುತ್ತ ಗೀತಪಾರಾಯಣ ಮಾಡುವುದು, ಸಂಕ್ಷಿಪ್ತರಾಮಾಯಣ ಹೇಳಿಕೊಡುವುದು, ಕೈ ತುಂಬಾ ಕೆಲಸ ಮಾಡುತ್ತ ಜೀವನ ಸಾಗಿಸುವುದು ಮೊದಲಾದವು ಮನಸ್ಸು ಚಂಚಲವಾಗದಿರಲೆಂದು ಸಮಾಜ ನಿಯಮಿಸಿರುವ ಜೀವನಕ್ರಮವಾಗಿದೆ. ವಿಧವಾ ಹೆಂಗಸರು ಪರಪುರುಷನನ್ನು ಆಕರ್ಷಿಸಬಾರದೆಂದೆ ತಲೆಬೋಳಿಸಿ, ಬಿಳಿಸೀರೆ ಉಡಿಸುವುದು ಒಂದೆಡೆಯಾದರೆ, ಯಾವ ಖರ್ಚಿಲ್ಲದೆ ಊಟ-ಬಟ್ಟೆಗೆ ಸೀಮಿತವಾಗಿ ಬೇರೆಯವರಿಗೆ ಹೊರೆಯಾಗಬಾರದೆಂಬುದು ಮತ್ತೊಂದು ಕಾರಣವಾಗಿದೆ. ಇದಕ್ಕೆ ಫಣಿಯಮ್ಮ ಸಾಕ್ಷಿಯಾಗಿದ್ದಾಳೆ. ಒಂದ್ಹೊತ್ತು ಊಟ, ವರ್ಷಕ್ಕೆ ಎರಡು ಬಿಳಿಸೀರೆ ಹೆಚ್ಚು ಖರ್ಚಿಲ್ಲದ ಜೀವನ ಫಣಿಯಮ್ಮಳದ್ದಾಗಿದೆ.

ಬಾಲವಿಧವೆಯಿಂದ ಅನುಭವಸ್ಥ ವಿಧವೆಯಾಗಿ ವೈಧವ್ಯದಲ್ಲೇ ತೃಪ್ತಿಪಟ್ಟಿಕೊಳ್ಳುವ ಫಣಿಯಮ್ಮ ಅಂದಿನ ಸಮಾಜಕ್ಕೆ ಒಗ್ಗಿಕೊಳ್ಳಲೇಬೇಕೆಂಬುದು ಅನಿವಾರ್ಯವಾಗಿ ತೋರುತ್ತದೆ. ವಿಧವೆ ಸಮಾಜದ ನಿಯಮ ಪಾಲಕಳಂತೆ ತನ್ನೆಲ್ಲ ಆಸೆ-ಆಕಾಂಕ್ಷೆಗಳನ್ನು ಬದಿಗೊತ್ತಿ ಬದುಕುವುದು ಸಾಮಾನ್ಯವಾಗಿದ್ದಿತು. ಪುರುಷಪ್ರಧಾನ ಸಮಾಜದ ವಾತಾವರಣದಲ್ಲಿ ಬೆಳೆಯುವ ಫಣಿಯಮ್ಮಳಂತಹ ಅನೇಕರು ನಿರ್ಜೀವ ಮೂರ್ತಿಯಂತೆ ಬದುಕುವಂತಾಗಿದೆ.

'ಫಣಿಯಮ್ಮ' ಕಾದಂಬರಿಯಲ್ಲಿ ಮಡಿ ಪದ್ಧತಿಗೆ ಒಳಗಾದ ಹೆಣ್ಣಿನ ಶೋಷಣೆ ಬಿಂಬಿತವಾಗಿದೆ. ಈ ಪದ್ಧತಿಗೆ ಒಳಗಾಗದ ವಿಧವೆಯರ ಅಸಮಾನತೆಯನ್ನು ಸ.ಉಷಾರವರ 'ಕಸೂತಿ' ಕಾದಂಬರಿ ಒಳಗೊಂಡಿದೆ. ವಿಧವೆಯಾದ ಮಾತ್ರಕ್ಕೆ ತನ್ನದಲ್ಲದ ತಪ್ಪಿಗೆ ನೋವುಂಡು ಬದುಕುವಂತಹ ಸಂಪ್ರದಾಯದಲ್ಲಿ ಮಡಿ ಪದ್ಧತಿಗೆ ಒಳಗಾಗದ ಸುಬ್ಬಿ 'ಕೂದಲು ತೆಗೆಸಿಕೊಂಡರೆ ಒಪ್ಪತ್ತು ಊಟಬಿಡ್ಬೇಕು' ಎನ್ನುವ ಮಾತು ವಿಧವೆಯರಿಗಿದ್ದ ಕಠಿಣ ಶಿಕ್ಷೆಯಾಗಿ ತೋರುತ್ತದೆ. 'ಮಡಿ' ಆಗದಿದ್ದರೂ ಮತ್ತೊಂದು ರೀತಿಯಲ್ಲಿ ಹೀನವಾದ ಸ್ಥಿತಿಗೆ ವಿಧವೆ ಒಳಗಾಗಬೇಕಾಗುತ್ತದೆ. ಮನೆಯಲ್ಲಿ ಆಕೆಗೆ ಯಾವ ಸ್ಥಾನಮಾನವು ಇರುವುದಿಲ್ಲ. ಮಡಿ ಪದ್ಧತಿಗೆ ಒಳಗಾಗಿಲ್ಲ ಎಂಬ ಕಾರಣದಿಂದಲೆ ಶಾಮಣ್ಣ ತಂಗಿ (ಸುಬ್ಬಿ) ಮಾಡಿದ ಅಡುಗೆಯನ್ನು ತಿನ್ನುವಂತಿರಲಿಲ್ಲ ಎಂಬುದು ವಿದ್ಯಾವಂತರು ಕೂಡ ಸಮಾಜ ಹುಟ್ಟು ಹಾಕಿರುವ ಕೆಟ್ಟ ಸಂಪ್ರದಾಯಗಳಿಗೆ ಬದ್ಧವಾಗುವುದು ವಿಧವೆಯನ್ನು ಮತ್ತುಷ್ಟು ಕುಗ್ಗುವಂತೆ ಮಾಡಿದೆ.

ಕಾಲ ಬದಲಾವಣೆಯಾದಂತೆ ಸಮಾಜದ ಮನಸ್ಥಿತಿಗಳು ಬದಲಾವಣೆಯಾಗಬೇಕು. ಆಧುನಿಕ ಕಾಲಕ್ಕೆ ಕಾಲಿಡುತ್ತಿದ್ದರೂ ಹಿಂದಿನ ಮೌಢ್ಯಗಳನ್ನು ಹಾಗೆ ಇಟ್ಟುಕೊಂಡು, ಬೇರೆಯವರ

ಮೇಲೆ ಒತ್ತಡ ಹೇರಲಾಗುತ್ತಿದೆ. ಶಾಮಣ್ಣನವರ ಮಗಳಾದ ಸಾತು(ಸಾವಿತ್ರಿ) ಮೈನೆರೆಯುವ ಮೊದಲೆ ವಿಧವೆಯಾಗುತ್ತಾಳೆ. ಬೇರೆ ಊರಿಗೆ ಹೋಗಿ ವಿದ್ಯಾಭ್ಯಾಸ ಕೊಡಿಸಿ ಆರ್ಥಿಕವಾಗಿ ಸದೃಢಳಾಗುವಲ್ಲಿ ಸಾತುವಿಗೆ ಶಾಮಣ್ಣ ದಾರಿ ದೀಪವಾಗುತ್ತಾರೆ. ವಿಧವೆಯರ ಸಂಕಷ್ಟ ಅರಿತಿದ್ದರಿಂದ ಮಗಳ ಜೀವನ ರೂಪಿಸುವುದು ಸಂಪ್ರದಾಯ ವಿರೋಧಿಯಾಗಿ ಕಂಡುಬರುವುದಿಲ್ಲ. ಗಂಡ ಸತ್ತ ಹತ್ತನೇ ದಿನಕ್ಕೆ ಸುಮಂಗಲಿ ಚಿಹ್ನೆಗಳನ್ನು ತೆಗೆದು ವಿಧವೆ ಎಂಬ ಸಂಕಷ್ಟಗಳಿಗೆ ದೂಡುವುದನ್ನು ಒಪ್ಪಿಕೊಂಡಿರುವ ಅದೇ ಊರಿನಲ್ಲಿ ವಿದ್ಯಾಭ್ಯಾಸ ಕೊಡಿಸದೆ ಬೇರೆ ಊರಿಗೆ ಕರೆದುಕೊಂಡು ಹೋಗುವುದು ಇಲ್ಲಿನ ಸಂಪ್ರದಾಯಸ್ಥ ಸಮುದಾಯದವರ ವಿರುದ್ಧ ನಡೆದುಕೊಳ್ಳಲಾಗದೆ ಇರುವುದನ್ನು ಕಾಣಬಹುದು. ಅದಕ್ಕೆ "ಸಾತುವಿನ ಕೂದಲು ತೆಗೆಸಿ ಮಡಿ ಮಾಡಿಸಿಬಿಡಬೇಕೆಂದೂ, ಅಡುಗೆ ಮನೆಯ ಕೆಲಸಕ್ಕೆ ಆಗ ಅವಳು ಯೋಗ್ಯಳಾಗುವಳೆಂದೂ"[೭] ಬೆನ್ನಟ್ಟಿ ಬಂದಿದ್ದ ಮಾತುಗಳು ಸಾಕ್ಷಿಯಾಗಿವೆ. ವಿದ್ಯಾವಂತೆಯಾಗಿರಲಿ, ಅವಿದ್ಯಾವಂತೆಯಾಗಿರಲಿ ವಿಧವೆಯಾದ ಹೆಣ್ಣು ತನ್ನೆಲ್ಲಾ ಬಯಕೆಗಳನ್ನು ಬದಿಗೊತ್ತಿ ನಡೆಯುವಂತೆ ಕಾಣುತ್ತಿದೆ. ಸಾತು ಬೋಳು ಹೊದ್ದುಕೊಂಡಿಲ್ಲವೆಂಬುದನ್ನು ಬಿಟ್ಟರೆ ಉಳಿದ ವಿಧವಾ ನಿಯಮಗಳನ್ನು ಪಾಲಿಸಬೇಕಿತ್ತು. ಅಂಚಿನ ಸೀರೆ ಉಡುವ ಆಸೆಯಿದ್ದರು ಉಟ್ಟರೆ ಎಲ್ಲರೂ ಆಡಿಕೊಳ್ಳುತ್ತಾರೆಂದು ಕಣ್ಣೀರು ಸುರಿಸುವುದು ಸಾಮಾಜಿಕ ವ್ಯವಸ್ಥೆಯಲ್ಲಿ ವಿಧವೆಗೆ ಬಿಡುಗಡೆಯಿಲ್ಲದಿರುವುದನ್ನು ತೋರಿಸುತ್ತದೆ.

ವಿಧವಾ ಹೆಣ್ಣು ಪರರ ಆಶ್ರಯದಲ್ಲಿರಬೇಕಾದವಳು ಎಂಬುದನ್ನು ಸಂಪ್ರದಾಯವಾದಿ ರಾಯರು ತ್ರಿವೇಣಿಯವರ 'ಹಣ್ಣೆಲೆ ಚಿಗುರಿದಾಗ' ಕಾದಂಬರಿಯಲ್ಲಿ ಹೇಳಿದ್ದಾರೆ. ಪುರುಷಪ್ರಧಾನ ವ್ಯವಸ್ಥೆಗೆ ಅಂಟಿಕೊಂಡಿರುವ ತಂದೆಯ ಸಂಪ್ರದಾಯಗಳನ್ನು ಮೀರಿ ನಡೆಯಲಾಗದ ವಿಧವಾ ಹೆಣ್ಣಿನ ಅಸಮಾನತೆ ಈ ಕಾದಂಬರಿಯಲ್ಲಿ ಎದ್ದುಕಾಣುತ್ತದೆ. ಮಾಲತಿ ಇಪ್ಪತ್ತರ ಹರೆಯಕ್ಕೆ ವಿಧವೆಯಾಗುತ್ತಾಳೆ. ಮಗಳ ಮೇಲೆ ಅತಿಯಾದ ಪ್ರೀತಿ, ಮಮಕಾರವಿದ್ದರು ಅವಳ ಭವಿಷ್ಯಕ್ಕಾಗಿ ತನ್ನತನ ಬಿಟ್ಟುಕೊಡುವಲ್ಲಿ ರಾಯರು ಹಿಂಜರಿಯುತ್ತಾರೆ. 'ಹೆಣ್ಣೆಂದರೆ ಸಮಾಜದ ನಿಯಮಗಳಿಗೆ ತಲೆಬಾಗಿ ಬದುಕುವಂತೆ ಇರಬೇಕು' ಎಂಬ ಚೌಕಟ್ಟಿನೊಳಗೆ ಬದುಕುತ್ತಿದ್ದವರು. ಅವಳನ್ನು ಪರಾವಲಂಬಿಯಾಗಿ ಬದುಕುವಂತೆ ಒತ್ತುಕೊಟ್ಟು ಬೆಳೆಸುವವರಾಗಿರುತ್ತಾರೆ.

ವೃತ್ತಿಯಲ್ಲಿ ವಕೀಲರಾಗಿದ್ದು ಗಂಡು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿರುವ ರಾಯರು ನಾಗರಿಕರಾಗಿದ್ದರು ಮಗಳ ವಿಷಯದಲ್ಲಿ ಅನಾಗರಿಕರಂತೆ ವರ್ತಿಸುತ್ತಾರೆ. ಪುರುಷಪ್ರಧಾನ ವ್ಯವಸ್ಥೆಯ ಬೇರುಗಳನ್ನೆ ಅಲುಗಾಡಿಸುವಂತೆ ಮಾಧವ, ಶಿವು, ಅನಂತನ ಮಾತುಗಳು ರಾಯರಿಗೆ

ಇಷ್ಟವಾಗುತ್ತಿರಲಿಲ್ಲ. ತಂದೆ–ಮಕ್ಕಳ ನಡುವೆ ಕಾಲಾಂತರವಿದ್ದು ಸಮಾಜಕ್ಕೆ ಮಾರಕವಾದ ವಿಷಯಗಳ ಬಗ್ಗೆ ಮಾತನಾಡುವ ಧೈರ್ಯ, ಹಕ್ಕು ಗಂಡುಮಕ್ಕಳಿಗಿರುವುದನ್ನು ಲೇಖಕಿ ಸ್ಪಷ್ಟಪಡಿಸಿದ್ದಾರೆ. ಹೇಳಿದ್ದಾರೆ. ಹೆಂಗಳೆಯರಿಗೆ ಯಾವ ವಿಷಯವನ್ನೂ ಕುರಿತು ಎದುರಾಡುವ ಸ್ವಾತಂತ್ರ್ಯವಾಗಲಿ, ಧೈರ್ಯವಾಗಲಿ ಇರುವುದಿಲ್ಲ. ಇಷ್ಟವಿರಲಿ, ಇಲ್ಲದಿರಲಿ ಮನೆಯ ಹಿರಿಯರು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿರುವಂತೆ ಪಾಲಿಸುವುದು ಸ್ತ್ರೀ ಧರ್ಮವಾಗಿರುತ್ತದೆ.

ಈ ರೀತಿಯ ಲಿಂಗ ತಾರತಮ್ಯ ವಾತಾವರಣದಲ್ಲಿ ಬೆಳೆದ ಮಾಲತಿಯು ಸಮಾಜದ ಬಗ್ಗೆ, ಜೀವನದ ಬಗ್ಗೆ ಅರಿವಿರದೆ ತಂದೆಯ ಆಜ್ಞಾ ಪರಿಪಾಲಕಳಾಗಿರುತ್ತಾಳೆ. ಚಿಕ್ಕಂದಿನಿಂದ ರಾಯರ ಸಂಪ್ರದಾಯದ ಆಚರಣೆಗಳ ವಾತಾವರಣ ಹೆಣ್ಣೆಂದರೆ ಆಶ್ರಯದಾತಳು ಎಂಬಂತೆ ಸೃಷ್ಟಿಸಿರುತ್ತದೆ. ಮಾಲತಿಯು ವಿಧವೆಯಾದ ಕೂಡಲೆ ತಂದೆಯ, ಅಣ್ಣಂದಿರ ಆಶ್ರಯದಲ್ಲಿರುವವಳು. ತನ್ನನ್ನು ನಿರ್ಲಕ್ಷ ಮಾಡಿದರೇನು ಗತಿ ಎಂದು ಯೋಚಿಸಿ "ಇನ್ನೊಬ್ಬರ ಕೃಪಾಛತ್ರದಲ್ಲಿರುವ ತನಗೆ ಅವರನ್ನು ನೋಯಿಸುವ ಹಕ್ಕಾದರೂ ಎಲ್ಲಿದೆ"?[೮] ಎಂದುಕೊಳ್ಳುತ್ತಾಳೆ. ಇವಳ ಈ ನಿರ್ಧಾರಕ್ಕೆ ಹುಟ್ಟಿದಾಗಿನಿಂದ ಬೆಳೆಯುವ ಮನೆ ಮದುವೆಯಾದ ಕೂಡಲೆ ಹೆಣ್ಣಿಗೆ ಪರಮನೆಯಂತೆ ಸೃಷ್ಟಿಸಿರುವ ಪುರುಷ ಷಾಹಿ ಸಮಾಜ ಗಂಡ ಸತ್ತ ಹೆಣ್ಣಿಗೆ ನೆಲೆಯೆ ಇಲ್ಲವೆಂಬಂತೆ ಪರಾವಲಂಬಿಯಾಗುವಂತೆ ನಡೆಸಿಕೊಂಡು ಬರುತ್ತಿರುವುದೇ ಆಗಿದೆ.

ವಿಧವೆಯಾದ ಹೆಣ್ಣಿನ ಜೀವನ ಶೂನ್ಯವೆಂಬಂತೆ ಸೃಷ್ಟಿಯಾಗಿರುವ ಸಮಾಜದಲ್ಲಿ ಮಾಲತಿಗೆ "ಈಗ ದು:ಖವಿಲ್ಲ, ಸಂತೋಷವಿಲ್ಲ, ಬದುಕಬೇಕೆಂಬ ಆಸೆಯಿಲ್ಲ, ಸಾಯುವ ಇಚ್ಛೆಯಿಲ್ಲ, ದೇವರು ಕೊಟ್ಟ ಆಯಸ್ಸು ಇರುವವರೆಗೆ ಇದ್ದು ಒಂದು ದಿನ ಕಂತೆ ಒಗೆದು ಹೊರಟು ಹೋಗುವ ಮನೋಭಾವ ಅವಳಲ್ಲಿತ್ತು".[೯] ಅಂದರೆ ಸಮಾಜ ವಿಧವೆ ಹೆಣ್ಣಿಗೆ ನೀಡಿದ್ದ ಸ್ಥಾನಮಾನ ಅರಿವಾಗುತ್ತದೆ. ಮದುವೆಗೆ ಮುಂಚೆ ಲವಲವಿಕೆಯಿಂದಿದ್ದವಳು ಸಂಸಾರ ಎಂಬ ನೊಗ ಹೊರಲು ಸಿದ್ಧವಾಗಿ ಬೇಕಾದ ಪೂರ್ವಯೋಜಿತ ತಯಾರಿ ಮಾಡಿಕೊಳ್ಳುತ್ತಿದ್ದವಳು "ಇನ್ನು ಅವುಗಳನ್ನು ಕಲಿತೇನು ಮಾಡಬೇಕು? ಯಾರಾದರೂ ದಯೆ ತೋರಿ ತನಗೆ ಒಪ್ಪತ್ತು ಅನ್ನ ಹಾಕಿದರೂ ತನ್ನ ಕತೆ ಮುಗಿಯುತ್ತದೆ. ಸಂಸಾರದ ತೇರನ್ನೆಳೆಯಲು ಸಿದ್ಧಳಾಗಿದ್ದ ಮಾಲತಿ ಈಗ ಪಾಳುಗುಡಿಯ ಪೂಜಾರಿಣಿಯಾಗಿದ್ದಳು"[೧೦] ಎಂದು ಸ್ವತ: ಲೇಖಕಿಯೆ ಹೇಳುವ ಮಾತುಗಳಲ್ಲಿ ಹೆಣ್ಣಿನ ಜೀವನ ವೈಧವ್ಯಕ್ಕೆ ಕಾಲಿಡುತ್ತಿದ್ದಂತೆ ಮುಗಿಯುತ್ತದೆ ಎಂಬ ಭಾವನೆ ತಳೆದಿರುವುದನ್ನು ಹೇಳಿರುವುದಾಗಿದೆ.

ಹೆಣ್ಣಿನ ಜೀವನ ನಿರ್ಧರಿಸುವವರು ಪುರುಷರೆ ಎಂಬುದು ಕಾದಂಬರಿಯಲ್ಲಿ ಬಿಂಬಿತವಾಗಿದೆ. ಪುರುಷಪ್ರಧಾನ ಮೌಲ್ಯಗಳ ಒಳಗೆ ಸಿಲುಕಿದ ಮಾಲತಿ ತನ್ನ ಜೀವನಕ್ಕೆ

ಸಾಧಕವಾಗಿರಲಿ, ಮಾರಕವಾಗಿರಲಿ, ವಿರುದ್ಧವಾಗಿ ಮಾತನಾಡುವುದಿಲ್ಲ. ಮನೆಯ ಹಿರಿಯರು ತೋರಿಸುವ ಹಾದಿಯಲ್ಲಿ ನಡೆಯುವ ಮನೋಭಾವದವಳಾಗಿರುತ್ತಾಳೆ. ಅಣ್ಣನ ಕಾಲೇಜಿಗೆ ಸೇರಿಸುವ ತೀರ್ಮಾನಕ್ಕೆ "ಇನ್ನು ಮುಂದೆ ಎಂದಿದ್ದರೂ ನಾನು ಪರಾವಲಂಬಿ. ನಾನು ನಿಮ್ಮ ಆಶ್ರಯದಾತಳು. ನೀವು ಹೇಳಿದ ಹಾಗೆ ಕೇಳಬಾಕಾದುದು ನನ್ನ ಕರ್ತವ್ಯ, ಧರ್ಮ"[೧೧] ಎಂಬ ಉತ್ತರದಲ್ಲು ಕಾಲೇಜಿಗೆ ಸೇರಿ ತನ್ನ ಸ್ವತಂತ್ರ ಬದುಕು ಕಟ್ಟಿಕೊಳ್ಳಬಹುದು ಎಂಬುದಕ್ಕಿಂತಲು ಅಧೀನಳಾಗಿರುವ ತಾನು ಅವರು ಹೇಳಿದಂತೆ ಕೇಳುವುದು, ಅವರ ವಿರುದ್ಧ ತಾನು ನಡೆದರೆ ತನಗೆ ಆಶ್ರಯ ನೀಡುವುದಿಲ್ಲವೇನೋ ಎಂಬ ಆತಂಕವು ಕಾಣಿಸುತ್ತದೆ.

ವೈಧವ್ಯಕ್ಕೊಳಗಾದ ಹೆಣ್ಣು ಪುರುಷಪ್ರಧಾನ ವ್ಯವಸ್ಥೆಯ ಚೌಕಟ್ಟನ್ನು ಮೀರಬಾರದೆಂಬ ಬಂಧನದಲ್ಲಿರುತ್ತಾಳೆ. ಬಾಲವಿಧವೆಯಾಗಲಿ, ಪ್ರೌಢವಿಧವೆಯಾಗಲಿ ಸಂಕಷ್ಟಗಳಿಗೆ ಒಳಗಾಗುವಂತೆ ಅವಳ ಸ್ವಾತಂತ್ರವನ್ನು ಕಸಿದುಕೊಂಡಿದೆ. ವಿದುರನಿಗಿಲ್ಲದ ವೈಧವ್ಯ ಪದ್ಧತಿ, ಆಚರಣೆಗಳು ಹೆಣ್ಣಿಗೆ ಮಾತ್ರ ಸೀಮಿತಗೊಳಿಸುವುದರಲ್ಲೆ ಹೆಣ್ಣಿನ ಸ್ಥಾನ ಯಾವ ಮಟ್ಟದಲ್ಲಿದೆ ಎಂಬುದು ಅರಿವಾಗುತ್ತದೆ. ಬಾಲ್ಯವಿವಾಹವಾಗಿ ಗಂಡಸತ್ತರೆ ಬಾಲವಿಧವೆಯೆಂದು ದೂಷಿಸುವ ಸಮಾಜದಲ್ಲಿ ಹೆಂಡತಿ ಸತ್ತರೆ ಬಾಲವಿಧುರ ಎಂಬ ಮಾತು ಇದುವರೆಗು ಕೇಳಿಲ್ಲದ ಶಬ್ದವಾಗಿದೆ. ಬಾಲ ವಿಧುರನಾದರು ಆತನನ್ನು ವಿಧುರನೆಂದು ಪರಿಗಣಿಸದೆ ಅವನ ಸ್ವತಂತ್ರ ಬದುಕಿಗೆ ಸಹಾಯಕವಾಗಿ ಪುರುಷಪ್ರಧಾನ ಸಮಾಜವೇ ನಿಲ್ಲುತ್ತದೆ.

## ದೇವದಾಸಿ

ದೇವರಿಗೆ ಅಧೀನಳಾಗಿರುವವಳನ್ನು 'ದೇವದಾಸಿ' ಎಂದು ಕರೆಯುವ ವಾಡಿಕೆ ಇದೆ. ಪ್ರಾಚೀನ ಕಾಲದಿಂದಲೂ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ದೇವತೆಗಳ ಸೇವೆಗಾಗಿ ಎಂಬಂತೆ ಕೆಳಜಾತಿಯ ಹೆಣ್ಣುಮಕ್ಕಳನ್ನು ದೇವರೊಂದಿಗೆ ಮದುವೆ ಮಾಡುವ ಪದ್ಧತಿಯೆ ದೇವದಾಸಿ ಪದ್ಧತಿ. ದೇವರೊಂದಿಗೆ ಮದುವೆಯಾದವಳನ್ನು 'ದೇವದಾಸಿ' ಎಂದು ಕರೆದು ಪುರುಷಷಾಹಿ ಸಮಾಜ ತಮ್ಮ ಕಾಮ ಕ್ರೀಡೆಗಳಿಗಾಗಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯವೆಸಗುತ್ತಿದೆ. ಹೀನರ್ಥ ಕಲ್ಪಿಸಿರುವ 'ವೇಶ್ಯೆ', 'ಸೂಳೆ' ಎಂಬ ಪದಗಳಿಂದ ನಮ್ಮ ಸಮಾಜ ದೇವದಾಸಿಗೊಳಪಟ್ಟ ಹೆಣ್ಣನ್ನು ನಿಂದಿಸುತ್ತಿದೆ. ದೇವದಾಸಿ ಪದ್ಧತಿ ಆರಂಭವಾದ ಕಾಲದ ಬಗ್ಗೆ ಮಾಹಿತಿ ದೊರಕಿಲ್ಲವಾದರು ಇದರ ಇತಿಹಾಸ ಎರಡು ಸಾವಿರ ವರ್ಷಗಳಷ್ಟು ಹಳೆಯ ಪದ್ಧತಿಯಾಗಿದೆ. ಇದು ಭಿನ್ನ-ಭಿನ್ನ ಆಚರಣೆಗಳಿಂದ ನಡೆದುಕೊಂಡು ಬಂದಿದೆ. ಈ ಪದ್ಧತಿಗೆ ಸಂಬಂಧಿಸಿದಂತೆ ಮತ್ಸ್ಯಪುರಾಣ,

ವಿಷ್ಣುಪುರಾಣ, ಕೌಟಿಲ್ಯನ ಅರ್ಥಶಾಸ್ತ್ರಗಳಲ್ಲಿ ದೇವದಾಸಿಗೆ ಸಮೀಪವಾಗಿ ನಡೆಸುತ್ತಿದ್ದ ಆಚರಣೆಗಳ ಮಾಹಿತಿಗಳು ಸಿಗುತ್ತವೆ. ಆರು ಸಾವಿರ ವರ್ಷಗಳ ಹಿಂದೆ ಇದ್ದ ಆರ್ಯ ಸಮಾಜದಲ್ಲಿ ಹುಟ್ಟಿದ ಹೆಣ್ಣುಮಕ್ಕಳನ್ನು ದೇವರ ಸೇವೆಗೆಂದು ಬಿಡುತ್ತಿದ್ದರು. ದೇವ ಸಮಾಜದ ಬಲಾಢ್ಯದಿಂದ ಆರ್ಯ ಸಮಾಜದ ಹೆಣ್ಣು ಮಕ್ಕಳು ಅಧೀನರಾದರು. ಹೀಗೆ ಈ ಸಮಾಜಗಳು ಕಣ್ಮರೆಯಾದ ಮೇಲೆಯೂ 'ದೇವದಾಸಿ' ಹೆಸರಿನಲ್ಲಿ ಈ ಆಚರಣೆಗಳು ನಡೆದುಕೊಂಡು ಬಂದಿರಬಹುದೆಂದು ಊಹಿಸಲಾಗಿದೆ.

ದೇವದಾಸಿಯಾದವಳಿಗೆ ಪ್ರಾಚೀನ ಕಾಲದಿಂದ ಆಧುನಿಕ ಸಮಾಜದವರೆಗೂ ನಿತ್ಯ ಸುಮಂಗಲಿ ಸ್ಥಾನವಿದೆ. ಸಭೆ, ಸಮಾರಂಭಗಳಲ್ಲಿ ಪಾಲ್ಗೊಳ್ಳುವಂತೆ, ಮದುವೆ ಕಾರ್ಯಗಳಲ್ಲಿ ಮುಂದಾಳತ್ವ. ತಂದೆ–ತಾಯಿ ಸತ್ತಾಗ ಗಂಡು ಮಕ್ಕಳಿಗೆ ಸೀಮಿತವಾಗಿದ್ದ 'ಘಟಶ್ರಾದ್ಧ' ಮಾಡುವ ಹಕ್ಕುಗಳಿವೆ. ತಮ್ಮ ಹಕ್ಕುಗಳ ಜೊತೆಗೆ ಈ ಪದ್ಧತಿಗೆ ಒಳಪಡುವ ಹೆಣ್ಣು ಕೆಲವು ನಿಬಂಧನೆಗಳಿಗೂ ಒಳಪಟ್ಟಿರುತ್ತಾಳೆ. "ಹೆರಿಗೆಯಾದ ಮನೆಯಲ್ಲಿ ದೇವದಾಸಿಯಾದವಳು ಒಂದು ತಿಂಗಳು ಕಾಲ ಊಟ ಮಾಡಬಾರದು. ಶ್ರಾದ್ಧದ ಊಟವನ್ನು ಮಾಡಬಾರದು. ಹಳ್ಳಿಯಲ್ಲಿ ಯಾರಾದರೂ ಮರಣಿಸಿದರೆ ಸ್ನಾನ ಮಾಡಿ, ಹೊಸ ನೀರಿನಿಂದ ಅಡುಗೆ ಮಾಡಿ ತಿನ್ನಬೇಕು. ಮದುವೆಯಾಗುವ ಹಂಬಲವನ್ನು ಬದುಕಿನಲ್ಲಿ ಎಂದಿಗೂ ವ್ಯಕ್ತಮಾಡಬಾರದು"[೧೨] ಇವು ದೇವದಾಸಿ ಪಾಲಿಸಲೇಬೇಕಾದ ಕರ್ತವ್ಯಗಳು.

ದೇವದಾಸಿಗೆ ಒಳಗಾದ ಹೆಣ್ಣು ಹೇಗೆ ಕಾಮುಕರ ವಸ್ತುವಾದಳು ಎಂಬುದನ್ನು ನೋಡುವುದಾದರೆ, ದೇವರ ಹೆಸರಿನಲ್ಲಿ ಎತ್ತುಗಳನ್ನು 'ಬಸವ' ಬಿಡುವ ಪದ್ಧತಿ, ಹೆಂಗಳೆಯರನ್ನು 'ಬಸವಿ' ಬಿಡುವ ಪದ್ಧತಿಯಾಗಿ ಮಾರ್ಪಡಿಸಿದೆ. ದೇವರ ಸೇವೆಗೆಂದು ದೇವರೊಂದಿಗೆ ಮದುವೆಯಾಗುತ್ತಿದ್ದ ಹೆಣ್ಣು ದೇವಾಲಯದ ಕೆಲಸಗಳನ್ನು ಮಾಡಿಕೊಂಡಿದ್ದಳು. ದೇವಾಲಯಕ್ಕೆ ಬರುವ ಆದಾಯದಲ್ಲಿ ಪಾಲು ಪಡೆದು ವರ್ಷಕ್ಕೊಮ್ಮೆ ರಾಜನಿಂದಲು ಆದಾಯ ಪಡೆದು ಆರ್ಥಿಕ ಭದ್ರತೆಯಿಂದ ನೆಮ್ಮದಿ ಜೀವನ ಕಾಣುತ್ತಿದ್ದಳು. ನಂತರ ದೇವದಾಸಿ ದೇವಾಲಯದ ಮೇಲೆ ಅಧಿಪತ್ಯ ಸ್ಥಾಪಿಸಿದ ರಾಜನ ಭೋಗದ ವಸ್ತುವಾದಳು. ಬರುಬರುತ್ತ ದೇವಾಲಯದ ಆದಾಯವು ನಶಿಸಿದ್ದರಿಂದ, ರಾಜನು ಆಸೆ ತೀರಿಸಿಕೊಂಡು ಬಿಟ್ಟು ಹೋಗುತ್ತಿದ್ದರಿಂದ ನಿರ್ಗತಿಕಳಾಗಿ ಕಾಮುಕರ ಕೆಂಗಣ್ಣಿಗೆ ಪಾಲಾದಳು. ದೇವರ ಹೆಸರಿನಲ್ಲಿ ಕಾಮುಕರ ಸೇವೆ ಎಂಬಂತೆ ಪ್ರಚಲಿತವಾಯಿತು. ಧನವಂತರು ಕೆಳಜಾತಿಯ ಹೆಣ್ಣು ಮಕ್ಕಳನ್ನು ಪ್ರಾಯಕ್ಕೆ ಬರುವ ಮೊದಲೆ ಆರ್ಥಿಕ ಆಸರೆಯ ಆಸೆ ತೋರಿಸಿ ಕಾಯ್ದಿರಿಸಿಕೊಳ್ಳುವಂತಾಯಿತು. ಮುಂದೆ ಆರ್ಥಿಕ ಆಸರೆಯಿಲ್ಲದೆ ಮನೆಯ ಜವಾಬ್ದಾರಿ ಹೊತ್ತಿದ್ದ ಜೋಗಣೇರು ನಗರಕ್ಕೆ ಪ್ರವೇಶಿಸಿ ವೇಶ್ಯೆಯರ ಬದುಕು ಬದುಕುವಂತಾಯಿತು. ಈ

ಪದ್ಧತಿಯ ಆಚರಣೆಯ ಅರಿವಿದ್ದದರು ಕೆಳಜಾತಿಯ ಹೆಣ್ಣುಮಕ್ಕಳು ಬಲಿಯಾಗಲು ಮುಖ್ಯಕಾರಣ ಬಡತನ, ಮೂಢನಂಬಿಕೆ, ಧನವಂತರ ಕೈವಾಡ, ಹಿಂದಿನಿಂದ ಪಾಲಿಸಿಕೊಂಡು ಬಂದಿರುವ ಆಚರಣೆಗಳ ಪಾಲಿಸುವಿಕೆಗಳಿಂದ ಮತ್ತು ಗಂಡ ಬಿಟ್ಟವಳನ್ನು ನೋಡಿಕೊಳ್ಳಲು ಯಾರು ದಿಕ್ಕಿಲ್ಲದಿದ್ದರೆ, ಅಂಗವಿಕಲೆಯಾಗಿದ್ದರೆ, ಬಂಜೆತನ, ಜೋಗಣೀರ ಮಗಳು ಜೋಗತಿಯಾಗಬೇಕೆಂಬ ಪುರುಷರ ಕಾನೂನು ಇವುಗಳೆಲ್ಲವುಗಳಿಂದ ಇಷ್ಟವಿರಲಿ, ಇಲ್ಲದಿರಲಿ ಮನೆಯ ಜವಾಬ್ದಾರಿಯನ್ನು ಹೊತ್ತು ಸಾಗಿಸಲು ದೇವದಾಸಿ ಪದ್ಧತಿಗೆ ಒಳಗಾಗಿದ್ದಾಳೆ. ಜೋಗಣಿಗೊಳಗಾದ ಹೆಣ್ಣು ತರಡಿಹೊತ್ತು, ಕೊರಳಲ್ಲಿ ಮುತ್ತು ಹಾಕಿಕೊಂಡು ಚಾಡಕಿ ಬಾರಿಸುತ್ತ, ಹಾಡುತ್ತ, ಕುಣಿಯುತ್ತ ಜೋಗ ಬೇಡಿಕೊಂಡು ಹಗಲು ಕಳೆದರೆ, ರಾತ್ರಿಯ ವೇಳೆ ದೈಹಿಕ ಯಾತನೆಗಳಿಗೆ ಒಳಪಡುವ ವ್ಯವಸ್ಥೆಯಲ್ಲಿದ್ದಾಳೆ. ಸಂಪೂರ್ಣ ಪುರುಷಷಾಹಿ ಸಮಾಜದ ವಶದಲ್ಲಿ ನಡೆಯುತ್ತಿರುವ 'ದೇವದಾಸಿ' ಬಿಡುವ ಆಚರಣೆ ಕೆಳಜಾತಿಯ ಹೆಣ್ಣನ್ನು ಶೋಷಿಸುತ್ತಿದೆ. ಇಂಥದ್ದೊಂದು ವಿಷಯವನ್ನಿಟ್ಟುಕೊಂಡು ಗೀತಾ ನಾಗಭೂಷಣರವರು 'ಬದುಕು' ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಯು ಪುರುಷನ ಕಪಿಮುಷ್ಠಿಗೆ ಸಿಲುಕಿ ಜೋಗಣಿಯ ಪಟ್ಟವೇರಿದವರು ಅನುಭವಿಸುವ ಸಂಪೂರ್ಣ ಮಾಹಿತಿಯನ್ನೊಳಗೊಂಡಿದೆ. ಇಲ್ಲಿನ ಬಹುತೇಕ ಸ್ತ್ರೀಯರು ತಮಗಿಷ್ಟವಿಲ್ಲದೆ ಕಾಮುಕರ ಭೋಗದ ವಸ್ತುವಾಗಿ ಜೋಗಣಿ ಪಟ್ಟವೇರುವ ಅಮಾನುಷದ ಸಂಗತಿಗಳನ್ನೊಳಗೊಂಡಿದೆ.

ಜೋಗತಿ ಬಿಡಲು ಕಾರಣಗಳು ಅನೇಕವಾದರು, ಜೋಗತಿ ಪಟ್ಟವೇರುವ ಹೆಣ್ಣಿನ ಶೋಷಣೆ ಮಾತ್ರ ಒಂದೆ ಆಗಿರುತ್ತಿತ್ತು. ಬಂಜೆತನ ನೀಗಿಸುವಂತೆ ಮಾನಿಂಗಪ್ಪ ಮಾಳವ್ವ ಚುಂಚೂರಿನ ಮಾಪುರ ತಾಯಿಗೆ ಬೇಡಿಕೆಯನ್ನಿಡುತ್ತಾರೆ. ಪ್ರತಿಫಲವಾಗಿ 'ಗಂಡಾದರೆ ತಾವೆ ಇಟ್ಟುಕೊಳ್ಳುವಂತೆಯು, ಹೆಣ್ಣು ಹುಟ್ಟಿದರೆ ದೇವರ ಸೇವೆಗೆ ಬಿಡುವೆವು' ಎನ್ನುವಲ್ಲಿ ಹೆಣ್ಣೆಂಬ ಕೀಳುಭಾವನೆಯ ತಾರತಮ್ಯವಿದೆ. ಕಾಕತಾಳೀಯವೆಂಬಂತೆ ಮಾಳವ್ವನಿಗೆ ದುರ್ಗಿ, ಮರ್ಗಿ ಎಂಬ ಇಬ್ಬರು ಹೆಣ್ಣು ಮಕ್ಕಳು ಹುಟ್ಟುತ್ತಾರೆ. ಇವರಿಬ್ಬರು ಅವಳಿಯಾದ್ದರಿಂದ ಯಾರನ್ನು ಜೋಗತಿ ಬಿಡುವುದು ಎಂಬ ದ್ವಂದ್ವಕ್ಕೆ ಪುರುಷಪ್ರಧಾನ ಸಮಾಜ ಇಬ್ಬರನ್ನು ಜೋಗಣಿಗೆ ಬಿಡುವಂತಹ ತೀರ್ಮಾನ ನೀಡುತ್ತದೆ.

ಶ್ರೀಮಂತರು ಕೆಳಜಾತಿಯ ಹೆಣ್ಣು ಮೈನೆರೆಯುವ ಮೊದಲೆ ಗುರುತು ಮಾಡಿಕೊಂಡು "ಒಂದಿಷ್ಟು ರೊಕ್ಕ ರುಪೈ, ಒಂದೆಡ್ಡು ಸೀರೆಕುಪ್ಪಸ, ಭಾಳಂದರೆ ಒಂದೆಡ್ಡು ಸಣ್ಣಪುಟ್ಟ ವಡವೆ ವಸ್ತ್ರ ಮಾಡಿಸಿಕೊಟ್ಟು ಅವಳ ಕನ್ಯತ್ವ"[೧೩] ಕಳೆಯುತ್ತಿದ್ದರು. ಇಂಥ ದುಷ್ಟ ಪುರುಷರ ಕಾಮುಕ ಕೆಂಗಣ್ಣಿನ

ಶೋಷಣೆಗೆ ಒಳಗಾದವಳು ನೀಲವ್ವ. ತಾನು ಮದುವೆಯಾಗಿ, ಗರತಿಯಾಗಿ ಬಾಳಬೇಕೆಂಬ ಕನಸು ಕಂಡಿದ್ದವಳು. ಮತ್ತೊಬ್ಬಳು 'ಮರಗಿ'. ಇವಳ ಗಂಡನಿಗೆ ಆರೋಗ್ಯ ಸರಿಯಿಲ್ಲದನ್ನೆ ನೆವ ಹೂಡಿದ ಪುರುಷಪರ ಪಾಲಕನಾದ ಪುರೋಹಿತ "ನಿನ್ ಮಗಳಿಗಿ ನನ್ ಸೇವಾಕ್ಕ ಬಿಡು. ಅಕಿಗಿ ಜೋಗಣಿ ಮಾಡು. ನಿನ್ ಗಂಡಗ ನಾ ಉಗಳಿ ಬಿಟಾಕ್ತೀನಿ! ಇಲ್ಲಂದ್ರ ಬಾಳಿಹಣ್ಣು ನುಂಗಂಗ ಭರಮ್ಯಾಗ ನುಂಗಿ ಬಿಡ್ತೀನೀ..... ನಿನ್ನ ಮನ್ಯಾಗ ರಗತದ ಹಳ್ಳಾ ಹರಸ್ತೀನೀ.... ಹೆಣಗೋಳ ರಾಶಿ ಒಟ್ಟತೀನೀ ಹುಷಾರ್..."[೧೪] ಮಾನವೀಯತೆ ಇಲ್ಲದೆ ಪೂಜಾರಿ, ಶ್ರೀಮಂತರ ಮಧ್ಯವರ್ತಿಯಾಗಿ ನಡೆದುಕೊಳ್ಳುವುದು ದೇವರ ಹೆಸರಿನಲ್ಲಿ ನಡೆಸುವ ದಂಧೆಯಾಗಿದೆ. ಮಗಳನ್ನು ಜೋಗಣಿ ಬಿಡುವ ನಿರ್ಧಾರ ಮಾಡಿದ ಮೇಲಂತು ಚಿಕ್ಕ ವಯಸ್ಸಿನ ಹೆಣ್ಣಿನ ದೈಹಿಕ ಚಲನವಲನಗಳನ್ನು ಅರಿಯದೆ ಅವಳ ಕನ್ಯತ್ವ ಕಳೆಯಲು ಆತುರ ಪಡುವ ಪುರುಷರು ದುಷ್ಟರಾಗಿರುತ್ತಾರೆ. ಮೈನೆರೆದು ಮೂರು ತಿಂಗಳಾಗಿದ್ದ ನೀಲವ್ವಳನ್ನು ಅನುಭೋಗಿಸಲು ತಾವು ಕೇಳುವ ದಿನವೇ ಆಗಬೇಕೆಂದು ಅಧಿಕಾರ ಚಲಾಯಿಸುವ ಪುರುಷರ ದಬ್ಬಾಳಿಕೆ ಅತಿರೇಕವಾಗಿ ಕಂಡುಬರುತ್ತದೆ. ತುಕರಾಮನನ್ನು ಪ್ರೀತಿಸಿ ಗರತಿಯಾಗಿ ಬಾಳುವ ಕನಸನ್ನು ಕಂಡಿದ್ದ ನೀಲವ್ವಳ ಕನ್ಯತ್ವವನ್ನು ಬಲವಂತವಾಗಿ ಕಸಿದುಕೊಳ್ಳುವ ಪುರುಷವರ್ಗ ಒಂದೆಡೆಯಾದರೆ, ಕನ್ಯತ್ವ ಕಳೆದುಕೊಂಡವಳನ್ನು ತಿರಸ್ಕರಿಸುವ ತುಕರಾಮನಂತಹವನು ಮತ್ತೊಂದೆಡೆ. ಇಲ್ಲಿ ನೀಲವ್ವಳು ಪುರುಷರಿಂದ ನಡೆಯುವ ಅತ್ಯಾಚಾರಗಳಿಗೆ ಬಲಿಯಾಗುತ್ತಾಳೆ. ಪರಪುರುಷರ ಅಕ್ರಮಗಳಿಂದ ಕನ್ಯತ್ವ ಕಳೆದುಕೊಂಡರೆ, ತುಕಾರಾಮನಂತಹವರು ಹೃದಯವನ್ನೇ ಕಳೆದುಕೊಳ್ಳುತ್ತಾರೆ. ನೀಲವ್ವ ತುಕ್ಕಪ್ಪ(ತುಕರಾಮ) ಒಬ್ಬರಿಗೊಬ್ಬರು ಮದುವೆಯಾಗುವ ತೀರ್ಮಾನ ಮಾಡಿಕೊಂಡಿರುತ್ತಾರೆ. ನೀಲವ್ವಳ ಜೋಗಣಿಯಿಂದ ಬೇರೆಯವರಿಗೆ ಮೀಸಲಾದ ಅವಳ ದೇಹವನ್ನು ತುಕ್ಕಪ್ಪ (ತುಕರಾಮ) ಒಪ್ಪಿಕೊಳ್ಳಲು ನಿರಾಕರಿಸುತ್ತಾನೆ. ಹೆಣ್ಣಿನ ಕನ್ಯತ್ವ ಕಳೆಯಲು ಪುರುಷರಲ್ಲೆ ಪೈಪೋಟಿ ಬೆಳೆದು ತಮ್ಮ-ತಮ್ಮ ದ್ವೇಷ, ಸ್ವಾರ್ಥಗಳಿಂದ ನಿಷ್ಠುರ ಭಾವನೆ ತಾಳಿದರೆ ಶಿಕ್ಷೆಗೆ ಒಳಪಡುವವಳು ಸ್ತ್ರೀ. ಸಂಸಾರಿಯಾಗಬೇಕೆಂದುಕೊಂಡಿದ್ದ ನೀಲವ್ವ ತುಕಾರಾಮನ ಮಾತುಗಳಿಂದ ಸಾವಿನ ಪಾಲಾಗುವುದು ದುರಾದೃಷ್ಟ. ಶೀಲ ಕಳೆಯುವವರ ನಡುವೆ ಶೀಲ ಕಳೆದುಕೊಂಡವಳಿಗೆ ಬೆಲೆ ಇಲ್ಲವಾಗಿದೆ.

'ಜೋಗತಿ'ಯಾಗಲು ಇಷ್ಟವಿಲ್ಲದ ಹೆಣ್ಣುಮಕ್ಕಳ ಭಾವನೆಗಳಿಗೆ ಯಾವ ಬೆಲೆಯೂ ಇಲ್ಲದೆ ಬಲವಂತವಾಗಿ ಈ ಪದ್ಧತಿಗೆ ಒಳಪಡಿಸುತ್ತಿದ್ದದ್ದು ಅಮಾನವೀಯ. ಕೆಲವು ಸ್ತ್ರೀಯರು ಹಿಂದಿನಿಂದ ಬಂದ ಆಚರಣೆಗಳಿಗೆ ಮಾನಸಿಕವಾಗಿ ಸಿದ್ಧರಾಗುವುದು ಸಮಾಜ ಸೃಷ್ಟಿಸಿರುವ

ಆತಂಕದ ಮೂಢನಂಬಿಕೆಗಳಿಂದ. ಜೋಗಣಿ ಬಿಡುವ ಮನದಿಂಗಿತ ಬದಲಾದರೆ 'ದೇವಿ ರಕ್ತಕಾರಿಸುತ್ತಾಳೆ, ಮನೆ ಮಂದಿಗೆಲ್ಲ ದೊಡ್ಡ ಬ್ಯಾನಿಬರಸ್ತಾಳೆ, ಗಂಡಸರ ಗಂಡಸ್ತನ ಕಳೀತಾಳೆ, ಮನ್ಯಾಗ ರಗತದ ಹೊಳೀನೇ ಹರಸ್ತಾಳೆ' ಎಂಬ ಭಯದಿಂದ ಒಪ್ಪಿಕೊಳ್ಳುವವರಿದ್ದರು. ಈ ಭಯದ ಹಿಂದಿರುವ ಪುರುಷರ ಕೈವಾಡ ಯಾರು ಅರಿಯರು. ಕಾಮದ ವಸ್ತುವಾಗಿ ಬಳಸಿಕೊಳ್ಳುತ್ತಿರುವ 'ಜೋಗಣೇರ ಸಂತತಿ ಕಡಿಮೆಯಾಗಬಾರದೆಂದೆ ಅವರನ್ನು ಭಯದ ವಾತಾವರಣದಲ್ಲಿಟ್ಟಿದೆ. ದೇವಿ ಶಿಕ್ಷಿಸದಿದ್ದರು ತಮ್ಮ ಕೈವಾಡಗಳಿಂದ ಶಿಕ್ಷಿಸುವ ಪುರುಷವರ್ಗ ಹೆಂಗಳೆಯರನ್ನು ಶೋಷಿಸುತ್ತಿದೆ.

'ನಿಂಬೆವ್ವ' ತಾನು ಜೋಗಣಿಯಾಗಿ ಪುರುಷ ಕ್ರೌರ್ಯಗಳನ್ನು ಅನುಭವಿಸಿದ ಮೇಲೆ ಸ್ವತಃ ಜೋಗಣೇರ ಬವಣೆಯ ಅರಿವನ್ನು ಮೂಡಿಸಿಕೊಂಡಳು. ತುಳಜಾಳ ಪ್ರತಿಭಟನಾ ಜೀವನಕ್ಕೆ ನಾಂದಿ ಹಾಡಿದವಳೆಂದರೆ ಈ ನಿಂಬೆವ್ವ. ಜೋಗತಿಯಾಗುವವಳಿದ್ದ ತುಳಜ್ವಾಳಿಗೆ 'ಜೋಗತಿ'ಯಾಗದಂತೆ ಕೋರುತ್ತಾಳೆ. "ಹೆಣ್ಣು ದೇವರೇ ಹೆಣ್ಣ ಮಕ್ಕಳು ಮರ್ವಾದಿ ಬಿಟ್ಟು ಸೂಳೇರಾಗ್ರಿ ಅಂತ ಯಾವ ಬಾಯಿಲಿಂದ ಹೇಳ್ತದೆ? ತನ್ನ ಹೆಸರಿನ ಮ್ಯಾಲ ಹಾದರದ ಧಂಧಾ ಮಾಡ್ರಿ ಅಂತ ಯಾ ದೇವರೂ ಹೇಳಂಗಿಲ್ಲ. ಮದಿ ಮಾಡ್ಕೊಂಡು ಒಬ್ಬ ಗಂಡನ ಹೆಣ್ತ್ಯಾಗಿ, ಗರತಿ ಆಗಿ ಬಾಳ್ಯಾ ಮಾಡ್ರಿ ಅಂತ ಹೇಳ್ತಾವ ಎಲ್ಲಾ ದೇವರಗೋಳು..... ನಮ್ಮಂತ ಕೆಳಗಿನ ಜಾತಿ ಹೆಂಗಸರಿಗಿ ಜೋಗಣಿ ಆಗಿ ಊರ ಸೂಳೇರು ಆಗ್ರಿ ಅಂತಾದೇನು? ಆ ದೇವರು ಅದು ಕಟ್ಟಿಗಿ ಗೊಂಬಿ ಅದಾ ಪಾಪ"[೧೫] ಎಂಬ ನಿಂಬೆವ್ವಳ ಮಾತು ಸತ್ಯಕ್ಕೆ ದೂರವಾದದ್ದಲ್ಲ. ತುಳಜವ್ವ ಒಲ್ಲೆ ಎಂದರು ಬಲವಂತದಿಂದ ಹದಿಮೂರರ ಹರೆಯದ ಹೆಣ್ಣನ್ನು ಜೋಗತಿ ಪಟ್ಟಕ್ಕೆ ಹಾಕುತ್ತಾರೆ. ಇಂಥ ಕ್ರೂರ ವ್ಯವಸ್ಥೆಯಲ್ಲಿ ಹುಸನಪ್ಪನಂತಹವರು ಪುರುಷಜಾತಿಯಿಂದ ಹೊರಬಂದು ತುಳಜಾಳನ್ನು ಮದುವೆಯಾಗುತ್ತಾನೆ. ಎರಡು ವರ್ಷಗಳ ನಂತರ ತಂದೆ-ತಾಯಿ ನೋಡಲು ಬಂದ ತುಳಜಾ-ಹುಸನಪ್ಪ ಪುರುಷವಾದಿಗಳ ಕುತಂತ್ರದ ಮೋಸದ ಬಲೆಗೆ ಸಿಲುಕುತ್ತಾರೆ.

ಪುರುಷಪ್ರಧಾನ ವ್ಯವಸ್ಥೆಯಲ್ಲಿ ಶ್ರೇಷ್ಠರೆನಿಸಿಕೊಂಡ ಪುರುಷರು, ಸ್ತ್ರೀಯರನ್ನು ಕನಿಷ್ಠರೆಂದೆ ನೋಡುತ್ತಿದ್ದಾರೆ. ಜೋಗತಿಯಾದ ಹೆಣ್ಣನ್ನು ಕನಿಷ್ಠಕ್ಕಿಂತಲು ಕಡೆ ಎಂಬಂತೆ ಕಾಣುವ ಸಮಾಜದಲ್ಲಿ ಅವಳಿಗೆ ಬಾಳು ಕೊಡುವಂತಹ ಪ್ರಸಂಗವೆ ಕಡಿಮೆ. ಮುಂದೆ ಬಂದವನು ಸಮಾಜದ ನಿಂದನೆ, ಆಪಾದನೆಗೊಳಗಾಗಬೇಕೆಂದೆ ಹಿಂದೆ ಸರಿಯುತ್ತ ಬೇರೆಯವನನ್ನೇ ನಿಂದಿಸುವವನಾಗಿರುತ್ತಾನೆ. ಹುಸನಪ್ಪ- ತುಳಜಾಳ ಜೀವನದಲ್ಲಿ ಮದುವೆಯಾಗಿ ಸಂತಸ ತಂದರೆ, ಚುಂಚೂರಿನ ಗೌಡ "ಜೋಗಣಿ ಕೊಳ್ಳಾಗ ತಾಳಿಕಟ್ಟಲಿಕ್ಕ ಅಂವಗೇನು ಬ್ಯಾರೆ ಹೆಣ್ಣಗೋಳೇ ಸಿಕ್ಕಿಲೇನು? ಬಿಕನಾಸಿಗಿ

ತಂದು ನಡುಮನ್ಯಾಗಿಟ್ಟರಂತ... ಹಂಗಾಯ್ತು. ಅದ್ಯಾವಾದದು ಬುದ್ದಿಗೇಡಿ.. ಹಳಸಿದ್ದಕ್ಕ ಹಸಿದಿದ್ದಕ್ಕ ಗಂಟು ಬಿದ್ದಾದ ಬಿಡು?"[೧೬] ಎಂದು ಹೆಣ್ಣನ್ನು ತುಚ್ಛೀಕರಿಸಿ, ಅಂಥ ಹೆಣ್ಣನ್ನು ಮದುವೆಯಾಗುವವನು ಬುದ್ಧಿ ಇಲ್ಲದವನು ಎನ್ನುತ್ತಾನೆ. ಬುದ್ಧಿ ಇದ್ದ ಪುರುಷ ಈ ರೀತಿ ಮಾಡುವುದಿಲ್ಲವೆಂದು ಸಮರ್ಥನೆ ಕೊಡುತ್ತಾ ಮಹಿಳಾ ಶೋಷಣೆಯನ್ನು ವಿರೋಧಿಸುವವರನ್ನು ಹಣಿಯುವ ಪ್ರಯತ್ನ ಮಾಡುತ್ತಾನೆ.

ಮೂಢನಂಬಿಕೆಯ ಸಂಪ್ರದಾಯಗಳಿಗೆ ಒಗ್ಗಿಹೋಗಿದ್ದ ಸುತ್ತ-ಮುತ್ತಲಿನ ಊರಿನವರೆಲ್ಲಾ ತುಳಜಾಳ ಬದುಕನ್ನು ನೋಡಿ ಸಂತಸಿಸುವುದಿಲ್ಲ. ಮಹಾಪರಾಧ ಮಾಡಿದವಳಂತೆ ನಿಂದಿಸುತ್ತಾರೆ. ತುಳಜಾಳನ್ನು ಮಾತ್ರವಲ್ಲದೆ ಅವಳ ತಂದೆತಾಯಿ, ಮದುವೆಯಾದ ಹುಸನಪ್ಪನನ್ನು ತೆಗಳುತ್ತಾ 'ಜೋಗತಿ ಮದುವೆಯಾಗೋದುಂಟ, ಆ ದೇವಿನೆ ಸರಿಯಾದ ಶಿಕ್ಷೆ ಕೊಡುತ್ತಾಳೆ ಆಕೆಗೆ' ಎಂದು ಸ್ತ್ರೀಯಾದಿಯಾಗಿ ಆಡುವ ಮಾತುಗಳು ಪುರುಷನಡಿಯಲ್ಲಿಂದ ಬಂದವುಗಳಾಗಿರುತ್ತವೆ. ಕಾಮದೃಷ್ಟಿಯಿಂದ ಕೈ ಜಾರಿದ ಹೆಣ್ಣನ್ನು ಸಹಿಸದ ಪುರುಷರು 'ತುಳಜಾಳ ಮೇಲಿನ ಕೋಪಕ್ಕಿಂತ ಉಳಿದ ಹೆಣ್ಣುಮಕ್ಕಳು ತುಳಜಾಳ ಹಾದಿ ಹಿಡಿದರೆ ತಮಗೆ ದೊರಕುತ್ತಿದ್ದ ಜೋಗತೀರ ಸಂತತಿ ನಶಿಸುತ್ತದೆ ಎಂಬ ಆತಂಕದಿಂದ ಪೂಜಾರಪ್ಪ, ಗೌಡನ ಕುಮ್ಮಕ್ಕಿನಿಂದ ತುಳಜಾಳ ಕುಟುಂಬವನ್ನು ನಾಶ ಪಡಿಸಲೆಂದೆ ಗುಡಿಸಲಿಗೆ ಬೆಂಕಿ ಹಚ್ಚುತ್ತಾರೆ. ಅದನ್ನು ದೇವಿಯ ಮೇಲೆ ಹೊರಿಸಿ ದೇವಿ ಕೋಪಗೊಂಡಿದ್ದಾಳೆಂದು ಜನರಲ್ಲಿ ನಂಬಿಕೆ ಮೂಡಿಸುವಲ್ಲಿ ಸಫಲರಾಗುತ್ತಾರೆ. ನ್ಯಾಯ ಸೇರಿಸಿ "ತುಳಜಾ ತಾನು ಮಾಡಿದ ತಪ್ಪಿಗೆ ಪಾನಸೆ ರುಪೈ ದಂಡಾಕಟ್ಟಿ ತಪ್ಪಾಯ್ತಂತ ಪೂಜಾರೆಪ್ಪನ ಪಾದಕ್ಕೆ ಬಿದ್ದು ಮಾಫಿ ಬೇಡ್ಬೇಕು.... ಮತ್ತಕಿ ತನ್ನ ಕೊಳ್ಳಾಗಿನ ತಾಳಿ ಕಿತ್ತಿ ಮಾಪುರತಾಯಿ ಭಾಂವ್ಯಾಗ ಹಾಕಿ, ಮತ್ತ ಹಿಂದಿನಂಗೇ ಜೋಗಣ್ಯಾಗ್ಬೇಕು"[೧೭] ಇಂಥ ಮಗಳ ಹೆತ್ತ ತಪ್ಪಿಗೆ ಅಪ್ಪನಾದ ಪರಪ್ಪನೂ ೧೦೧ ರುಪೈ ದಂಡಾ ಕೊಡುವಂತ ತೀರ್ಪು ನೀಡುತ್ತದೆ. ಪುರುಷಷಾಹಿ ಪಂಚಾಯ್ತಿ ತೀರ್ಮಾನಕ್ಕೆ ಹೆಚ್ಚು ಮಾನ್ಯತೆ ಇರುವುದರಿಂದ ಪಾಲಿಸಲೇಬೇಕೆಂಬ ಅಧಿಕಾರ ಚಲಾಯಿಸುತ್ತದೆ. ತಪ್ಪಿ ನಡೆದಲ್ಲಿ ಊರಿಂದ ಹೊರಹಾಕುವ ಬೆದರಿಕೆಯೊಡ್ಡುತ್ತದೆ. ತುಳಜಾ ಅವರ ತೀರ್ಮಾನಕ್ಕೆ ಸವಾಲೆಸೆದು ಕುಟುಂಬ ಸಮೇತ ಊರಿಂದ ತಾನೆ ಹೊರಹೋಗುವ ಮೂಲಕ ಪ್ರತಿಭಟಿಸುತ್ತಾಳೆ.

ಜೋಗತಿ ಪಟ್ಟಕ್ಕೇರುವ ಹೆಂಗಸರಲ್ಲಿ ಬಹುತೇಕರು ತಮಗಿಷ್ಟವಿಲ್ಲದೆ ಇಂಥ ದೌರ್ಜನ್ಯಕ್ಕೆ ಒಳಗಾದವರಾಗಿರುತ್ತಾರೆ. ಹದಿಹರೆಯದ ಹೆಣ್ಣಿನ ಕನ್ಯತ್ವ ಕಳಚಿ ತಮ್ಮ ಬಯಕೆ ಈಡೇರಿದ ನಂತರ ಕೈಬಿಡುವ ಶ್ರೀಮಂತರ ಕಪಿಮುಷ್ಟಿಯೊಳಗೆ ಹೆಣ್ಣು ಸಿಲುಕಿದ್ದಾಳೆ. ಈ ರೀತಿಯ ಶೋಷಣೆಗೆ

ಒಳಪಡುವ ಬಡ ಹೆಂಗಳೆಯರು ಭದ್ರ ನೆಲೆ ಇಲ್ಲದೆ ಒದ್ದಾಡುತ್ತಾರೆ. ಪ್ರಾಯ ಇರುವವರೆಗೂ ಗಂಡಸಿನ ಮಗ್ಗುಲಲ್ಲಿ ಇಷ್ಟವಿಲ್ಲದಿದ್ದರು ಮಲಗಿ, ಈ ದಂಧೆಗೆ ಒಳಗಾಗಿ ಬದುಕುತ್ತಿದ್ದು ವಯಸ್ಸಾಗುತ್ತಿದ್ದಂತೆ ಇವರ ಸ್ಥಿತಿ ಅತಂತ್ರವಾಗುತ್ತದೆ. ವಯಸ್ಸಾದ ಜೋಗತೀರಿಂದ ಯಾವ ಸುಖವು ಸಿಗದೆಂದು ಅವರನ್ನು ಮೂಲೆಗುಂಪು ಮಾಡುವುದು ಸಾಮಾನ್ಯವಾಗಿದೆ. ಈ ಬಲೆಯೊಳಗೆ ಸಿಲುಕಿದ ಹೆಣ್ಣು ಕೌಟುಂಬಿಕ ಭದ್ರತೆ ಇಲ್ಲದೆ, ಬೇರೆ ವೃತ್ತಿಯೂ ಇಲ್ಲದೆ, ಲೈಂಗಿಕ ಕ್ರಿಯೆಗಳಿಂದ ರೋಗ-ರುಜಿನಕ್ಕೆ ಒಳಗಾಗಿ ಸಾಯುವಂತಹ ಸ್ಥಿತಿಗೆ ತಲುಪಬೇಕಾಗಿದೆ. ಇದಕ್ಕೆ ಸಾಕ್ಷಿ ಎಂಬಂತೆ ಲೇಖಕಿ ಮಲವ್ವ, ಭೂದೇವ್ವ, ಗೊರವ್ವಾಯಿ, ಲಕ್ಕವ್ವರ ಜೀವನದಲ್ಲಿ ಅನುಭವಿಸಿದ ನೋವುಗಳನ್ನು ತುಳಜವ್ವಳ ಮಾತುಗಳಿಂದ ಅಭಿವ್ಯಕ್ತಿಸಿದ್ದಾರೆ.

'ದೇವದಾಸಿ' ದೇವರ ಹೆಸರಿನಲ್ಲಿ ನಡೆಯುವ ಪುರುಷಪ್ರಧಾನ ವ್ಯವಸ್ಥೆಯ ಕೈವಾಡ ಎಂಬುದನ್ನು ಲೇಖಕಿ ಸ್ಪಷ್ಟ ಪಡಿಸಿದ್ದಾರೆ. ತುಳಜಾ ಜೋಗತಿಯಾಗದಂತೆ ತಡೆಯಲು ನಿಂಬೆವ್ವ ಹೇಳಿದ ಮಾತುಗಳು ಸತ್ಯವಾಗಿದ್ದವು. ತುಳಜಾಳ ವಿಷಯದಾಗೆ ಮಾಪುರದೇವಿ ಏನು ತೊಂದರೆ ಕೊಡುತ್ತಿಲ್ಲವಲ್ಲ ಎಂಬ ಮಾರ್ಮಿಕವಾದ ಮಾತಿಗೆ ಗೌಡ "ನಾವು ಕೂಡಸಿರಾ ಕಟಗಿಗೊಂಬಿ ಅದು ಅದಕ್ಕ ಸೀರಿ, ಕುಬಸಾ ತೊಡ್ಸಿ, ದಂಡಿಕಟ್ಟಿ, ಕುಂಕಮ ಭಂಡಾರ ಹಚ್ಚಿ ದೇವರಂತ ಮಾಡಿ ಕೂಡ್ಸ್ಯಾರ ನಮ್ಮ ಹತ್ತು ತೆಲಿ ಹಿಂದಿನ ಹಿರೇರು. ಪಾಪ ಆ ನಿನ್ನ ದೇವರೇನು ಮಾಡ್ತದ ಬಿಡು, ಪೂಜಾ ಮಾಡದ್ರ ಮಾಡಸ್ಕೊಂಡು ದೇವರಾಗ್ತದ. ತಗ್ದು ಎತ್ತೊಯ್ದು ಹೊರಗ ಬಿಟಾಕದರ ಕಟಗಿ ಗೊಂಬಿ ಆಗಿ ಪಾರಗೋಳ ಕೈಯಾಗಿನ ಆಟದ ಸಾಮಾನಾಗ್ತದ"[೧೮] ಎನ್ನುತ್ತಾ ಪೂಜಾರಿಯನ್ನು ಕುರಿತು 'ನಿನಗೆ ದೇವರು ಬರುವುದೇ' ಎಂಬ ಅಪಹಾಸ್ಯ ಪುರುಷರ ಅಟ್ಟಹಾಸವನ್ನು ಪ್ರದರ್ಶಿಸುತ್ತದೆ. ಇದು ಸತ್ಯವಾಗಿದ್ದರಿಂದಲೆ ಪೂಜಾರಪ್ಪನಂತಹ ಚೇಲಗಳು ಶ್ರೀಮಂತರ ಹಣಕ್ಕೆ ಆಸೆಪಟ್ಟು ತಮ್ಮ ಜಾತಿಯ ಹೆಣ್ಣು ಮಕ್ಕಳನ್ನೆ ಬಲಿತೆಗೆದುಕೊಳ್ಳುವಂತಹ ದುಷ್ಟರಾಗಿದ್ದಾರೆ.

ಜೋಗತಿ ಪದ್ಧತಿ ದೇವರ ಹೆಸರಿನಲ್ಲಿ ಹೆಣ್ಣಿನ ಮೇಲೆ ನಡೆಸುತ್ತಿರುವ ಅಮಾನವೀಯ ಶೋಷಣೆ. ಇಷ್ಟವಾದ ಹೆಣ್ಣನ್ನು ಅನುಭೋಗಿಸವುದು ಸಮಾಜಕ್ಕೆ ಮಾರಕವಾದ್ದರಿಂದ ಅದನ್ನು ದೇವರ ಹೆಸರಿನಲ್ಲಿ ರೀತಿ-ರಿವಾಜುಗಳ ಪಡಿಹಚ್ಚು ಹಾಕಿ ಇಂಥ ಆಚರಣೆ ತಂದಿರುವುದು ಪುರುಷಷಾಹಿ ಸಮಾಜ. ಜೋಗಣೇರು ಅರಿಯದ ವಯಸ್ಸಿನಲ್ಲಿ ಈ ಪಟ್ಟಕ್ಕೇರಿ ಬುದ್ಧಿ ಬಲಿಯುವಷ್ಟರಲ್ಲಿ ಎಲ್ಲವನ್ನು ಕಳೆದುಕೊಂಡು ವಿಧಿಯಿಲ್ಲದೆ ಬದುಕಬೇಕಾಗುತ್ತದೆ. ಪುರುಷನ ಕ್ರೌರ್ಯ ಅರಿತಿದ್ದ ನಿಂಬೆವ್ವನಂತಹ ಅನೇಕ ಜೋಗತೀರು ವ್ಯವಸ್ಥೆಯ ವಿರುದ್ಧ ಮಾತನಾಡಲಾಗದೆ ಮೂಕ ಪ್ರಾಣಿಗಳಂತೆ ಬದುಕುತ್ತಿದ್ದಾರೆ. ತುಳಜಾಳಂತೆ ಹೆಂಗಳೆಯರು ವ್ಯವಸ್ಥೆಯನ್ನು

ಧಿಕ್ಕರಿಸಿದಾಗಲೆ ದೇವದಾಸಿ ಹೆಸರಿನಲ್ಲಿ ನಡೆಯುವ ಹೆಣ್ಣಿನ ಶೋಷಣೆಯನ್ನು ತಪ್ಪಿಸಬಹುದಾಗಿದೆ. ಸೂಕ್ಷ್ಮವಾಗಿ ಗಮನಿಸಿದಾಗ ತುಳಜಾಳಂತಹವಳು ಮದುವೆಯಾಗಿ 'ಗಂಡಿನ' ಆಶ್ರಯ ಸಿಕ್ಕಿದ್ದರಿಂದ ಧೈರ್ಯದಿಂದ ಹೊರಬರುವುದು ಅರಿವಾಗುತ್ತದೆ. ಸೂಕ್ತ ಆಶ್ರಯವಿಲ್ಲದ, ಆರ್ಥಿಕ ಭದ್ರತೆ ಇಲ್ಲದ ಜೋಗತೀರು ಪುರುಷಪ್ರಧಾನ ವ್ಯವಸ್ಥೆಯ ಶೋಷಣೆಗೆ ಒಳಗಾಗುತ್ತಿದ್ದಾರೆ. ಬದುಕು ಕಾದಂಬರಿಯಲ್ಲಿ ಜೋಗತಿ ಬಿಡುವುದು ಪುರುಷರ ಕೈವಾಡ ಎಂಬ ಸ್ಪಷ್ಟ ನಿಲುವಿದೆ. ಇಂತಹ ಅಮಾನವೀಯ ಆಚರಣೆಯ ಮುಖ್ಯ ಉದ್ದೇಶ ಹೆಣ್ಣನ್ನು ಭೋಗದ ವಸ್ತುವಾಗಿ ನೋಡುತ್ತಿರುವುದು. ದೇವರ ಸೇವೆಗೆ ಹೆಣ್ಣು, ಗಂಡು ಇಬ್ಬರನ್ನು ಬಿಡುವ ಪದ್ಧತಿ ಇದೆ. ಹೆಚ್ಚಾಗಿ ಹೆಣ್ಣು ಈ ಕೃತ್ಯಗಳಿಗೆ ಬಲಿಯಾಗಿದ್ದಾಳೆ. ಗಂಡನ್ನು ಜೋಗ ಬಿಟ್ಟರು ಆತ ಕಳೆದುಕೊಳ್ಳುವುದೇನು ಇರುವುದಿಲ್ಲ. ಅಲ್ಲಿಯೂ ಹೆಂಗಳೆಯರೇ ಜೋಗನ ಕೈಗೆ ಸಿಕ್ಕಿ ನಲುಗುವವರು. ಜೋಗ ಆದ ವ್ಯಕ್ತಿ ಪಟ್ಟಣ ಸೇರಿ ವೇಶ್ಯ ವೃತ್ತಿಯ ದಂಧೆಗೆ ನಿಲ್ಲುವ ಸಾಧ್ಯತೆ ಹೆಚ್ಚು. ಹೆಣ್ಣು ಜೋಗಣಿಯಾಗಿ ಹಿಂಸೆಗೆ ಒಳಪಡುವುದು ಒಂದು ತೆರನಾದರೆ, ಈ ಆಚರಣೆಯ ಹಿಂದಿನ ಸತ್ಯ ಸಂಗತಿ ತಿಳಿದು ಹೊರಬರಲು ತವಕಿಸಿದರೆ ಅಲ್ಲಿಯೂ ಮತ್ತೊಂದು ರೀತಿಯಲ್ಲಿ ಶೋಷಿತಳಾಗುತ್ತಾಳೆ. ತುಳಜಾ ಗರತಿಯಾಗಿ ಬಾಳುವುದನ್ನು ಸ್ವೀಕರಿಸದೆ ಆಕೆಯ ಮನೆಗೆ ಬೆಂಕಿ ಹಚ್ಚಿ, ಊರಿನಿಂದಲೇ ಹೊರ ಹಾಕುವ ಹುನ್ನಾರ ಮತ್ತಷ್ಟು ಜರ್ಜರಿತರನ್ನಾಗಿ ಮಾಡುವ ಕ್ರೌರ್ಯತೆಯನ್ನು ಪ್ರತಿನಿಧಿಸುತ್ತವೆ.

**ಬಂಜೆತನ**

ಹೆಣ್ಣು ಅನುಭವಿಸುವ ವೇದನೆಯಲ್ಲಿ ಈ ಪದ ಅರ್ಥಹೀನವಾದದ್ದು. ಸಮಾಜದಲ್ಲಿ ಹೆಣ್ಣು-ಗಂಡು ಎಂಬ ಎರಡು ಜಾತಿಯ ಬುದ್ಧಿ ಜೀವಿಗಳು ಸಮಾನವಾಗಿ ಬದುಕಬೇಕು. ಬದುಕ ಬೇಕಿರುವಂತಕಹವು. ಹೆಣ್ಣಿನಲ್ಲಿಲ್ಲದ ಶಕ್ತಿ ಗಂಡಿನಲ್ಲು, ಗಂಡಿನಲ್ಲಿಲ್ಲದ ಸಾಮರ್ಥ್ಯ ಹೆಣ್ಣಿನಲ್ಲು ಜೈವಿಕವಾಗಿ ಸ್ಥಾಪಿತವಾಗಿದೆ. ಇದರಿಂದ ಇಬ್ಬರು ಸಮಾನರು ಎಂಬುದನ್ನು ತಿಳಿಯಬಹುದು. ಪುರುಷಷಾಹಿ ಸಮಾಜ ಇದಕ್ಕೆ ವಿರುದ್ಧವಾಗಿ 'ಸ್ತ್ರೀ' ಎಂದರೆ ಕೇವಲವಾಗಿ ನೋಡುತ್ತದೆ. ಬಾಲ್ಯದಲ್ಲಿ ತಂದೆ ಆಶ್ರಯದಲ್ಲಿದ್ದವಳು, ಯೌವ್ವನದಲ್ಲಿ ಪತಿಯ ಆಶ್ರಯ ಪಡೆದು ಮಕ್ಕಳನ್ನು ಹೆರುವುದು ಅವಳ ಕರ್ತವ್ಯವೆಂಬಂತೆ ಕಾಣುತ್ತಿದೆ. ಅಲ್ಲಿಗೆ ಅವಳ ಜೀವನ ಸಾರ್ಥಕವೆಂಬಂತೆ ಸಮಾಜ ನಿರ್ಮಾಣವಾಗಿದೆ. ಮದುವೆಯಾಗದ ಹೆಣ್ಣು ಅದರಲ್ಲು ಮದುವೆಯಾಗಿ ಮಕ್ಕಳಾಗದ ಹೆಣ್ಣಿನ ಜೀವನ ಅಪೂರ್ಣವೆಂಬಂತೆ ಸೃಷ್ಟಿಯಾಗಿದೆ. ಹೆಣ್ಣನ್ನು 'ಹೆರುವ ಯಂತ್ರ' ಎಂಬಂತೆ ಕಾಣುವ ಸಮಾಜ 'ತಾಯಿ' ಸ್ಥಾನ ಪಡೆದವಳಿಗೆ ನೆಮ್ಮದಿಯಾಗಿ ಉಸಿರಾಡುವ ಅಧಿಕಾರ ನೀಡಿದೆ, ತಾಯ್ತನವಿಲ್ಲದ ಹೆಣ್ಣನ್ನು ಮಾನಸಿಕವಾಗಿ ಜರ್ಜರಿತವಾಗುವಂತೆ ಹಿಂಸಿಸುತ್ತಿದೆ. "ಮಹಿಳೆ ಎಂದರೆ

ಮಾನವರ ಗುಂಪಿನಲ್ಲಿಯ ಒಂದು ಜಾತಿಯ ವಿಚಿತ್ರ ಪ್ರಾಣಿ ಅದು ಗರ್ಭದಲ್ಲಿ ಭ್ರೂಣವನ್ನು ಧರಿಸಿ ಅದನ್ನು ಪ್ರಸವಿಸಿ ಅದಕ್ಕೆ ಹಾಲುಣಿಸುವುದು".[೧೯] ಮಾಡಬೇಕು ಇಲ್ಲದಿದ್ದರೆ 'ಹಾಸುಂಡು ಬೀಸಿ ಒಗೆವ ಬಾಳೆಲೆಯಂತೆ' 'ಬಂಜೆ' ಪಟ್ಟ ಕಟ್ಟಿ ಸಮಾಜ ಶೋಷಣೆಗೆ ಗುರಿ ಮಾಡುತ್ತದೆ. ಮಹಿಳೆಯನ್ನು 'ಚಲಿಸುವ ಭ್ರೂಣ'ವೆಂದೆ ಪರಿಗಣಿಸಿರುವ ಪುರುಷರು ಹೆಣ್ಣಿನ ತಾಯ್ತನಕ್ಕೆ ತಾನು ಕಾರಣವೆಂತಲು, ತಾನಿಲ್ಲದಿದ್ದರೆ ಆಕೆಗೆ ತಾಯ್ತನದ ಸೌಭಾಗ್ಯವಾದರು ಹೇಗೆ ಸಾಧ್ಯ ಎಂದು ಮೀಸೆ ತಿರುಗಿ ನಡೆಯುವವರ ದರ್ಪಕ್ಕೆ ಕಡಿಮೆ ಇಲ್ಲ. ಅದೇ ಪುರುಷ ತಾಯ್ತನವಿಲ್ಲದ ಹೆಣ್ಣಿನ ಬಂಜೆಗೆ ತಾನೂ ಕಾರಣನಾಗಿರುತ್ತೇನೆ ಎಂಬುದನ್ನು ನಿರಾಕರಿಸುತ್ತಾನೆ. ಎಲ್ಲಾ ಹೀನ ಅಪಮಾನಗಳನ್ನು ಹೆಣ್ಣಿಗೆ ಹೊರಸಿ ತಾನು ಮಾತ್ರ ನಿರುಮ್ಮನಾಗಿದ್ದಾನೆ. ಹೆಣ್ಣಿನ ಬಂಜೆತನಕ್ಕೆ ಪುರುಷನ ದೌರ್ಬಲ್ಯವು ಕಾರಣವಾಗಿರುತ್ತದೆ ಎಂಬುದನ್ನು ಸಮಾಜಕ್ಕೆ ತೋರ್ಪಡಿಸುವಂತೆ ಎಚ್.ಎಸ್.ಪಾರ್ವತಿಯವರ 'ಜಬಾಲಾ', ಬಿ.ಟಿ.ಲಲಿತಾ ನಾಯಕ್‌ರ 'ನೆಲೆ-ಬೆಲೆ' ಕಾದಂಬರಿಗಳಲ್ಲಿ ಚಿತ್ರಿತವಾಗಿದೆ. ಈ ಕೃತಿಗಳ ರಚನಾ ಸಂದರ್ಭದಲ್ಲಿ ಸಮಾಜದಲ್ಲಿ ಕಂಡ ಸಂಗತಿಗಳನ್ನು ಲೇಖಕಿಯರು ಚಿತ್ರಿಸಿದ್ದಾರೆ.

ಪುರುಷಪ್ರಧಾನ ವ್ಯವಸ್ಥೆಯಡಿಯಲ್ಲಿ ಬದುಕುತ್ತಿರುವ 'ಜಬಾಲಾ' ಕಾದಂಬರಿಯ ಇಂದಿರಮ್ಮ ಮಗನ ದೌರ್ಬಲ್ಯವನ್ನು ಅರಿಯದೆ ಸೊಸೆಯನ್ನು ಮಾತು ಮಾತಿಗು ನಿಂದಿಸುವುದು ಪರುಷತ್ವ ಸಮಾಜದ ಪರಿಪಾಲಕಳಾಗಿ ಆಡುವ ಮಾತುಗಳಾಗಿರುತ್ತವೆ. ವಂಶಪಾರಂಪರ್ಯವಿಲ್ಲದೆ ಮನೆತನ ಸಾಗುವುದಿಲ್ಲ. ಸತ್ತಾಗ, ಕೊಳ್ಳಿ ಇಡಲಾದರು ಮಕ್ಕಳು ಬೇಕು ಎಂಬಂತಹ ಮೌಢ್ಯಗಳಡಿಯಲ್ಲಿ ಬದುಕುತ್ತಿರುವ ಮಂದಿಯ ನಡುವೆ ಇಂದಿರಮ್ಮನವರು ನಿಂತಿದ್ದಾರೆ. ಅದನ್ನು ತನ್ನ ಸೊಸೆಯ ವಿಚಾರದಲ್ಲಿ ಸಂಬಂಧ ಪಡದ ವಿಷಯಗಳಿಗೆ "ಮದುವೆಯಾಗಿ ನಾಲ್ಕು ವರ್ಷವಾದರೂ ಒಂದು ಮಗೂನ ಹಡೆದು ಮನೆ ಬೆಳಗೋ ಯೋಗ್ಯತೆ ಇಲ್ಲದಿದ್ದರೂ ಈ ಬಿನ್ನಾಣಗಿತ್ತಿ ನಿನ್ನ ಹೀಗೆ ಕುಣಿಸ್ತಾಳಲ್ಲ; ಇನ್ನು ಮಕ್ಕಳು ಮರಿ ಆಗಿದ್ದಿದ್ರೆ ನನ್ನ ಮನೆ ಬಿಟ್ಟೇ ಓಡಿಸ್ತಿದ್ದಳೇನೋ?"[೨೦] ಎಂದು ಮಗನೊಂದಿಗೆ ಹೇಳುವುದು ಮಕ್ಕಳನ್ನು ಹೆತ್ತ ಹೆಣ್ಣಿಗೆ ಮಾತ್ರ ಮನೆಯ ಅಧಿಕಾರವಿರುತ್ತದೆ ಎಂಬುದನ್ನು ತಿಳಿಸುತ್ತದೆ.

ತಾಯಿಯ ಮಾತು ಕೇಳಿಯೂ ಸುಮ್ಮನಿರುವ ರಾಜಶೇಖರ ಜ್ವರದಿಂದ ಮಕ್ಕಳಾಗುವ ಶಕ್ತಿಯನ್ನು ಕಳೆದುಕೊಂಡಿರುವ ವಿಷಯ ತಿಳಿದಿದ್ದರು ಸಮಾಜಕ್ಕೆ ತೋರ್ಪಡಿಸುವುದಿಲ್ಲ. ತನ್ನ ದುರ್ಬಲತೆಯನ್ನು ಹೊರಗೆ ಹೇಳಿಕೊಳ್ಳುವ ಪ್ರಯತ್ನ ರಾಜಶೇಖರನು ಮಾಡುವುದಿಲ್ಲ. ಗೀತಾಳ ಬಂಜೆಗೆ ಕಾರಣವನ್ನು ತಿಳಿಯುವಂತಹ ತಾಳ್ಮೆಯು ಸಮಾಜಕ್ಕಿಲ್ಲವಾಯಿತು. ಈ ನಡುವೆ

ಗೀತಾಳದು ಯಾವ ತಪ್ಪು ಇಲ್ಲದಿದ್ದರು ಶೋಷಣೆಗೆ ಒಳಗಾದವಳು ಎಂಬ ಮಾತುಗಳು ಕಾದಂಬರಿಯಲ್ಲಿ ಬರುತ್ತವೆ.

ಮಕ್ಕಳನ್ನು ಹಡೆಯದ ಹೆಣ್ಣನ್ನು ಪುರುಷಪ್ರಧಾನ ವ್ಯವಸ್ಥೆಯು ಅಪಶಕುನದಂತೆ ಸೃಷ್ಟಿಸಿದೆ. ಮಕ್ಕಳಾಗದಿರಲು ಹೆಣ್ಣಿನ–ಗಂಡಿನ ದೌರ್ಬಲ್ಯತೆ ಇದ್ದರು ಶಿಕ್ಷೆ ಹೆಣ್ಣಿಗೆ ಮಾತ್ರ ಎಂಬಂತಹ ಸಮಾಜ ನಿರ್ಮಾಣವಾಗಿದೆ. ಗಂಡಿನ ಎಲ್ಲಾ ಆಪಾದನೆಗಳನ್ನು ಹೊರಲೆಂಬಂತೆ ಹೆಣ್ಣನ್ನು ಬಳಸಿಕೊಳ್ಳುತ್ತಿದೆ. ತಾಯ್ತನವಿಲ್ಲದ ಹೆಣ್ಣು ಶುಭ ಕಾರ್ಯಗಳಿಗೆ ಹೋಗುವಂತಿಲ್ಲ, ಬಸುರಿ–ಬಾಣಂತಿಯರಿಗೆ ತನ್ನ ಮುಖ ತೋರಿಸುವಂತಿಲ್ಲ, ಹಸುಮಕ್ಕಳನ್ನು ಮುಟ್ಟುವಂತಿಲ್ಲ. ಈ ರೀತಿಯ ಶಿಕ್ಷೆಗೆ ಗೀತಾ ಗುರಿಯಾಗಿರುತ್ತಾಳೆ. ಗರ್ಭಿಣಿಯಾದ ನಾದಿನಿ ಹಾಲು ಕೇಳಿದಳೆಂದು ಕೊಟ್ಟಿದ್ದಕ್ಕೆ ಇಂದಿರಮ್ಮ ತನ್ನ ಮಗಳಿಗೆ "ಗರ್ಭಿಣಿ ಹೆಂಗಸರು ಬಂಜೆ ಕೈಯ್ಯಿಂದ ಏನೂ ಇಸ್ಕೋಬಾರದು"[೨೧] ಎಂತಲೂ ಮಗಳ ಮಗುವಿಗೆ ಜ್ವರ ಬಂದರೆ "ಮಕ್ಕಳಿಲ್ಲದವರ ಕಣ್ಣು ಮನಸ್ಸು ಎರಡೂ ಚೆನ್ನಾಗಿರೊಲ್ಲ ಮಗೂಗೆ ದೃಷ್ಟಿಯಾಯ್ತು"[೨೨] ಎಂದು ಪೊರಕೆ ಕಡ್ಡಿ ನಿವಾಳಿಸಿ ತೆಗೆಯುವ ಮೌಢ್ಯಕ್ಕೆ ಅಂಟಿಕೊಂಡವಳಾಗಿರುತ್ತಾಳೆ.

ತಾಯಿಯಾಗುವ ಹಂಬಲ ಬಹುತೇಕ ಮಹಿಳೆಯರಲ್ಲಿ ಕಂಡುಬರುತ್ತದೆ. ಗೀತಾಳು ತಾನು ತಾಯಿಯಾಗುವ ಮಹಾದಾಸೆ ಹೊತ್ತವಳು. ತನಗಿಂತ ತಡವಾಗಿ ಮದುವೆಯಾದವರಿಗೆ ಮಕ್ಕಳಾಗುತ್ತಿದ್ದು ತನಗೆ ಮಾತ್ರ ಯಾಕಿಲ್ಲ ಎಂದು ಒಳಗೊಳಗೆ ಕೊರಗುತ್ತಲೆ ಸಮಾಜದ ನಿಂದನೆಯನ್ನು ಸಹಿಸಿಕೊಂಡವಳು. ಈ ವಿಷಯವಾಗಿ ಪತಿಯೊಂದಿಗೆ ಮಾತನಾಡಿದಾಗ 'ವಿದ್ಯಾವಂತೆಯಾದರು ಈ ರೀತಿಯ ಯೋಚನೆ ಬಿಡುವುದಿಲ್ಲ' ಎಂಬ ತಿರಸ್ಕಾರದ ಮಾತುಗಳಿಂದ ತಪ್ಪಿಸಿಕೊಳ್ಳುತ್ತಾನೆ. ಒಂದು ಹೆಣ್ಣು ಗಂಡಿನ ಆಸೆಯನ್ನು ಈ ರೀತಿಯಲ್ಲಿ ತಿರಸ್ಕರಿಸಿದಿದ್ದರೆ ಅವಳಿಗೆ ಸವತಿಯನ್ನು ತರುವಂತಹ ಕೆಲಸ ಮಾಡುತ್ತಿದ್ದ. ಗೀತಾ ಬಹಳ ತಾಳ್ಮೆಯಿಂದಲೆ ವೈದ್ಯರಿಂದ ಪರೀಕ್ಷಿಸಿಕೊಳ್ಳುತ್ತಾಳೆ. ತನ್ನಲೇನು ದೋಷವಿಲ್ಲದನ್ನು ದೃಢ ಮಾಡಿಕೊಂಡು ರಾಜಶೇಖರನಿಗೆ ಪರೀಕ್ಷೆ ಮಾಡಿಸಿಕೊಳ್ಳುವಂತೆ ಸೂಚಿಸಿದಾಗ ಸಿಟ್ಟಿನಿಂದ ತನ್ನ ಗುಟ್ಟನ್ನು ಮುಚ್ಚಿಡಲು ರೇಗಾಡುತ್ತಾನೆ. ಸತ್ಯ ಸಂಗತಿ ತಿಳಿದ ಗೀತಾ ಸೇಡಿನಿಂದ ಪ್ರತೀಕಾರ ತೀರಿಸಿಕೊಳ್ಳುವುದು ತಪ್ಪು ಎಂದೆನಿಸುವುದಿಲ್ಲ.

ರಾಜಶೇಖರನು ತನಗೆ ಮಕ್ಕಳಾಗುವುದಿಲ್ಲವೆಂಬ ಸತ್ಯ ಸಂಗತಿಯನ್ನು ಹೇಳುವ ಸನ್ನಿವೇಶಗಳು ಎದುರಾದರು ಹೇಳಿಕೊಳ್ಳದೆ ಮೌನವಹಿಸಿದ್ದರಿಂದ ಗಂಡನ ದೌರ್ಬಲ್ಯವನ್ನು ಮನಗಾಣದೆ ಗೀತಾಳನ್ನು ಬಂಜೆ ಎಂದು ದೂಷಿಸುವ ಅಸಮಾನತೆ ಕಾದಂಬರಿಯುದ್ದಕ್ಕೂ ಬಿಂಬಿತವಾಗಿದೆ. ಗೀತಾಳನ್ನು ಅತ್ತೆ, ಸಮಾಜ ಅವಮಾನಿಸುತ್ತಿದ್ದರು ತನ್ನ ಯಾವ ತಪ್ಪು ಇಲ್ಲದಂತೆ

ಮೌನಿಯಾಗಿದ್ದದ್ದು ಮತ್ತು ಡಾಕ್ಟರ್ ರಾಮಗೋಪಾಲ್‌ನ ಹೆಸರು ಹೇಳಿದಾಗಲು ತನ್ನ ತಪ್ಪನ್ನು ಒಪ್ಪಿಕೊಳ್ಳದಿದ್ದದ್ದು ತನ್ನ ದೌರ್ಬಲ್ಯ ತಿಳಿಯಬಾರದೆಂಬ ಸ್ವಾರ್ಥದಿಂದ, ತಾಯಿಯಾಗಲು ಅನರ್ಹಳೆಂದು ಮನೆಯವರು, ಆತ್ಮೀಯರು, ಅಪರಿಚಿತರಿಂದೆಲ್ಲಾ ತಲೆತಗ್ಗಿಸುವಂತೆ ಮಾಡಿದ ರಾಜಶೇಖರನು ಕ್ಷಮಾ ಗುಣದಿಂದಾಗಲಿ, ಸಹಾನುಭೂತಿಯಿಂದಾಗಲಿ ಸಂತೈಸದಿರುವುದು ಹೆಣ್ಣಿನ ಶೋಷಣೆಗೆ ಕಾರಣನಾಗುತ್ತಾನೆ.

ಬಿ.ಟಿ.ಲಲಿತಾ ನಾಯಕ್‌ರ 'ನೆಲೆ–ಬೆಲೆ' ಕಾದಂಬರಿಯು 'ಜಬಾಲಾ' ಕಾದಂಬರಿಯಂತೆ ಸಾಮ್ಯತೆ ಪಡೆದಿದ್ದರು ಶೋಷಣೆಯ ನೆಲೆಯಲ್ಲಿ ಭಿನ್ನವಾಗಿದೆ. ಹಳ್ಳಿವಾಸಿಗರಾದ, ಅವಿದ್ಯಾವಂತರ ಮನೆಯ ಸೊಸೆಯಾದ ಜಯಾ ಮಕ್ಕಳಿಲ್ಲದೆ 'ಬಂಜೆ' ಎಂಬ ಆಪಾದನೆಗೆ ಒಳಗಾಗುತ್ತಾಳೆ. ತಾಯಿಯಾಗದ ಹೆಣ್ಣಿಗೆ ಮನೆಯಲ್ಲಿ ಉತ್ತಮವಾದ ಯಾವ ಸ್ಥಾನವು ಇರುವುದಿಲ್ಲ. ವಿಶ್ರಾಂತಿಯಿಲ್ಲದ ದುಡಿಮೆಯೆ 'ಮಕ್ಕಳನ್ನು ಹೆರದಿರುವುದಕ್ಕಾಗಿ ಕೊಡುವ ಶಿಕ್ಷೆ' ಎಂಬಂತೆ ಅಮಾನವೀಯವಾಗಿ ನಡೆದುಕೊಳ್ಳುವುದನ್ನು ಲೇಖಕಿ ಚಿತ್ರಿಸಿದ್ದಾರೆ.

ಸಾಮಾಜಿಕವಾಗಿ ಮಕ್ಕಳಾಗದಿದ್ದರೆ ಹೆಣ್ಣಿನ ದೋಷವೆಂದೇ ನಿರ್ಧರಿಸುವ ಜನ ಸಮುದಾಯದವರು. ಆಕೆಯ ತಾಯ್ತನಕ್ಕೆ ಪುರುಷನ ಪಾತ್ರವು ಇರುತ್ತದೆ. ಇಬ್ಬರಲ್ಲಿ ಮಕ್ಕಳಾಗದ ದೌರ್ಬಲ್ಯ ಯಾರಲ್ಲಿದೆ ಎಂಬುದನ್ನು ಯೋಚಿಸದರ ಮಟ್ಟಿಗೆ ಅನಾಗರಿಕತೆಯನ್ನು ಹೊಂದಿದವರಂತೆ ಜಯಾ ಮನೆಯವರು ನಡೆದುಕೊಳ್ಳುತ್ತಾರೆ. ಜಯಾಳು ಸಮಾಜ 'ಬಂಜೆ' ಎಂದು ಕರೆದದ್ದನ್ನು ಸ್ವೀಕರಿಸಿ ಒಗ್ಗಿಕೊಂಡವಳಾಗಿ ಬಿಡುವುದು ಬೇರೆ ನೆಲೆ ಇಲ್ಲದೆ ತನಗೆ ತಾಯಿಯಾಗುವ ಭಾಗ್ಯ ಇದೆಯೊ, ಇಲ್ಲವೊ ಎಂಬುದನ್ನು ತಿಳಿಯುವ ಪ್ರಯತ್ನ ಸಹ ಮಾಡುವುದಿಲ್ಲ. ಮದುವೆಯಾಗಿ ಐದು ವರ್ಷಗಳಾದರು ಮಕ್ಕಳಾಗದಿರುವುದರಿಂದ ಸಮಾಜದ ಆಪಾದನೆಯನ್ನು ಒಪ್ಪಿಕೊಂಡವಳಾಗಿರುವ ಶೋಷಿತ ಹೆಣ್ಣಾಗಿದ್ದಾಳೆ.

ನಗರವಾಸಿಗರಾಗಲಿ, ಗ್ರಾಮೀಣವಾಸಿಗರಾಗಲಿ ಪರುಷತ್ವ ಸಮಾಜದ ಅನುಯಾಯಿಗಳಂತೆ ಜೀವನ ಮಾಡುತ್ತಿರುವ ಶಾಂತಮ್ಮ, ಕನಕನಂತಹವರ ಚುಚ್ಚು ಮಾತುಗಳಿಂದ 'ಬಂಜೆ' ಎಂಬುದನ್ನು ಸಾರಿ ಹೇಳುತ್ತಾ ಹಿಂಸಿಸುವುದು ಪುರುಷಪ್ರಧಾನ ಸಮಾಜ ಹೆಣ್ಣಿನ ಮೇಲೆ ಹೇರಿರುವ ತಾಯ್ತನದ ಜವಾಬ್ದಾರಿತನ ಎಷ್ಟರ ಮಟ್ಟಿಗಿದೆ ಎಂಬುದನ್ನು ತಿಳಿಯಬಹುದಾಗಿದೆ. ಅಕ್ಕನ ಬಾಣಂತನಕ್ಕಾಗಿ ಹೋಗಿದ್ದ ಜಯ ಪಕ್ಕದ ರೇಖಾಳ ಮನೆಗೆ ಹೋಗಿ ಬರುವ ವೇಳೆಗೆ ಅಕ್ಕನ ಮಗ ಬಿದ್ದದ್ದಕ್ಕೆ "ಪುಣ್ಯಾತ್ಗಿತ್ತಿಗೇ... ಮಕ್ಕಳ ಜೀವಕ್ಕಿಂತ್ಲೂ ಹಾಳು ಹರಟೇನೇ ಹಿರೀದಾ! ಥೆ ಥೆ! ಮಕ್ಕಳ ಮಮತೆ ಏನೂಂತ ಗೊತ್ತಿರಲಾರದ ಹೆಂಗಸರ ಹಣೆಬರಹವೆಲ್ಲಾ ಇಷ್ಟೇ ನೋಡಿ

ಮಕ್ಳು ಅಂದ್ರೇನು ಮರಗಿಡದಲ್ಲಿ ಬೆಳೆಯುತ್ತಾ ಬಿಡಿಸಿಕೊಂಡು ಬರೋಣ ಅನ್ನೋಕೆ"[೨೩] ಎಂಬ ಚುಚ್ಚು ಮಾತುಗಳು ಹೊಸತಾಗಿರಲಿಲ್ಲವಾದರು ಹೆಣ್ಣನ್ನು ಮಾತ್ರ ದೂಷಿಸುವುದು ಅಸಮಾನತೆಯನ್ನು ತೋರಿಸುತ್ತದೆ. ಎಲ್ಲಿ ಹೋದರು ಮಕ್ಕಳೆಷ್ಟು ಎಂತಲೊ, ಮಕ್ಕಳಾಗದಿದ್ದರೆ ಪಾಪ ಎಂತಲೊ, ಕೊನೆಗೆ ಮಕ್ಕಳಿಲ್ಲದ ಬಂಜೆ ಎಂಬ ತೀರ್ಮಾನಕ್ಕೆ ಬರುವವರ ಮಾತುಗಳಿಂದ ನೋವಾಗುವುದು ಸಹಜವೇ ಆಗಿರುತ್ತದೆ.  ಬಂಜೆ ಎಂಬ ಆಪಾದನೆಗೆ ಒಳಗಾದ ಹೆಣ್ಣು ಹೊರಗಿನವರ ನಿಂದನೆಗೆ ಒಳಗಾಗುತ್ತಲೆ ಮನೆಯವರ ಪ್ರತಿನಿತ್ಯದ ಚುಚ್ಚುಮಾತುಗಳಿಂದ ಮಾನಸಿಕವಾಗಿ ವೇದನೆಗೊಳಪಟ್ಟಿರುತ್ತಾಳೆ. "ಮೊಲೆಹಾಲು ಸೋರೋಗ ತೈತೇನೋ-ಓಡಲೆ ಬಂದವ್ಳೆ ಬಿತ್ರಿ"[೨೪] ಎನ್ನುವ ಅತ್ತೆ, ಓರಗಿತ್ತಿಯರಿಂದ, ಪರಿಚಯಸ್ಥರಿಂದ ಒಂದಲ್ಲ ಒಂದು ವಿಷಯವಾಗಿ ತಾಯ್ತನವಿಲ್ಲವೆಂಬ ನೆವದಿಂದ ಹಿಂಸಿಸುವವರೆ ಆಗಿರುತ್ತಾರೆ. ಮಕ್ಕಳಿಲ್ಲದ ಹೆಣ್ಣಿಗೆ ಮನೆಯಲ್ಲಿ ಅಸ್ತಿತ್ವವೆ ಇಲ್ಲವೆಂಬಂತೆ ಸಮಾಜ ನಡೆದುಕೊಳ್ಳುತ್ತದೆ. ಶಿವಮಲ್ಲುವಿಗೆ ಜಯಾಳನ್ನು ಮದುವೆ ಮಾಡಲು ನಿರ್ಧಾರ ಮಾಡುವ ಮನೆಯವರು ಅವಳ ಅಭಿಪ್ರಾಯ ಕೇಳುವ ಮಾತು ಆಡದಿರುವುದು ಜಯಾಳನ್ನು ತಾತ್ಸರದಿಂದ ನೋಡುವುದಾಗಿದೆ. ಜಯಾಗೆ ಭಾವನ ಮೇಲೆ ಪ್ರೀತಿ ಇದ್ದರು ಓಡಿಹೋಗಬೆಕೆನಿಸಿದರು ಮನೆತನದ ಮರ್ಯಾದೆಯನ್ನು ಕಾಪಾಡುವ ಹೊರೆಯನ್ನು ಹೆಣ್ಣಿಗೆ ಹೊರಿಸಿರುವುದರಿಂದ ಮಾನ ಮರ್ಯಾದೆಗೆ ಅಂಜಿ ಸುಮ್ಮನಾದರೆ "ನಾನು ಗಂಡ್ಸಾಗಿರೋ ಹೊತ್ತಿಗೇ ಈಗ ಇನ್ನೊಂದು ಹೆಣ್ಣನ್ನ ಲಗ್ನ ಮಾಡ್ಕೊಳ್ತಿರೋದು"[೨೫] ಎನ್ನುವ ಶಿವಮಲ್ಲುವಿನಂತವರಿಗೆ ಯಾವ ಅಡೆ-ತಡೆಯೂ ಇರುವುದಿಲ್ಲ.

ಗಂಡಸುತನದ ಅರಿವು ಇಲ್ಲದಿದ್ದರು ಮತ್ತೊಂದು ಹೆಣ್ಣನ್ನು ಮದುವೆಯಾಗಿ ಶೋಷಿಸುವ ಶಿವಮಲ್ಲುವಿನಂತಹವರು ತಂದೆಯಾಗಲು ಬಯಸಿ ಎರಡನೇ ಮದುವೆಗೆ ಮುಂದಾಗುವುದನ್ನು ಒಪ್ಪುವ ಸಮಾಜ ತಾಯಿಯಾಗಬೇಕೆಂಬ ಆಸೆ ಹೆಣ್ಣಿಗಿದ್ದರು ಮದುವೆಯಾಗುವಂತಹ ಕಾರ್ಯಕ್ಕೆ ಸಮ್ಮತಿಸುವುದಿಲ್ಲ. ತಾಯಿಯಾದರೆ ತನ್ನನ್ನು ಕೀಳಾಗಿ ಕಾಣಬಾರದೆಂದೆ ಹೆಣ್ಣಿನ ಮರುಮದುವೆಯಂತಹ ವಿಶಾಲತೆಯನ್ನು ತೋರುವುದಿಲ್ಲ. ಅಂತಹ ಹೆಣ್ಣನ್ನು ತಾಯಿಯಾದಳು ಎಂಬುದಕ್ಕಿಂತಲೂ ಆಕೆಯನ್ನು ನೋಡುವ ದೃಷ್ಟಿಕೋನವೆ ಬದಲಾಗಿಬಿಟ್ಟಿರುತ್ತದೆ.

ಮೇಲಿನ ಕಾದಂಬರಿಗಳಲ್ಲಿ 'ಬಂಜೆ' ಎಂಬ ಆರೋಪದಿಂದ ಸ್ತ್ರೀ ಶೋಷಿತಳಾದರೆ, ಬಂಜೆ ಎಂಬ ಪದದಿಂದ ಮುಕ್ತಿ ಪಡೆದರೂ ಆ ಶಬ್ದವನ್ನು ಹೋಗಲಾಡಿಸಲು ಹುಟ್ಟಿದ ಎರಡು ಹೆಣ್ಣುಮಕ್ಕಳು ತಾಯಿಯ ಬಂಜೆತನದ ಹೆಸರಲ್ಲಿ ಬಲಿಯಾಗುವುದನ್ನು ಗೀತಾ ನಾಗಭೂಷಣ ಅವರ 'ಬದುಕು' ಕಾದಂಬರಿಯಲ್ಲಿ ಕಾಣಬಹುದು.  ಮದುವೆಯಾಗಿ ಬಹಳ ವರ್ಷಗಳಾದರು

ಮಾನಿಂಗಪ್ಪ–ಮಾಳವ್ವ ಎಂಬುವವರಿಗೆ ಮಕ್ಕಳು ಇರುವುದಿಲ್ಲ. ಮಕ್ಕಳು ಬೇಕೆಂಬುದು ಮಾನಿಂಗಪ್ಪನ ಸಹಜ ಬಯಕೆಯಾದರೆ, ಮಂದಿ ಶಬ್ದ ತಡೆಯಲಾರದೆ ಮಕ್ಕಳನ್ನು ಬಯಸುವ ಮಾಳವ್ವ ಪತಿಯೊಂದಿಗೆ ತನ್ನ ದುಃಖವನ್ನು ಹೀಗೆ ತೋಡಿಕೊಳ್ಳುತ್ತಾಳೆ. “ನಾಯೇನು ಮಾಡ್ಲ್ಯೋ ಮಾನಿಂಗಾ..... ನಿನಕ್ಕಿಂತಾ ನನಗ ಕೂಸಿನ ಜರೂರತ್ತ ಜಾಸ್ತಿ ಅದಾನೋ..... ಬಂಜೆಂಬಾ ಶಬುದಾ ‘ಹೊರಲಾರದೆ ನಾ ಸಾಯ್ಲಿಕತ್ತೀನಿ... ಬಂಜಿ, ಗೊಡ್ಡಿ ಅನ್ನೋ ಮಂದಿ ಮಾತುಗೋಳು ನನಗ ಗಾಸಿ ಮಾಡ್ಲಕತ್ತಾವೋ”[೨೬] ಎಂದು ಕಣ್ಣೀರಿಡುವಲ್ಲಿ ಬದುಕಿರುವವರನ್ನು ಸಾಯಿಸುವಷ್ಟರ ಮಟ್ಟಿಗೆ ಮಕ್ಕಳಿಲ್ಲದವಳನ್ನು ನೋಡುವ ದೃಷ್ಟಿಕೋನದ ಪರಿಚಯವಾಗುತ್ತದೆ. ಇವರಿಬ್ಬರು ಮಾಪುರವ್ವನ ಗುಡಿಗೆಹೋಗಿ ಹರಕೆ ಹೊತ್ತು ಬರುತ್ತಾರೆ. ಇವರಿಗೆ ದುರ್ಗಿ–ಮರ್ಗಿಯರೆಂಬ ಎರಡು ಅವಳಿ ಹೆಣ್ಣುಮಕ್ಕಳು ಜನಿಸುತ್ತಾರೆ. ಹರಕೆಯಂತೆ ಇಬ್ಬರನ್ನು ಜೋಗತಿ ಬಿಡುವಂತಾಗುತ್ತದೆ. ಮೈನೆರೆದ ವರ್ಷದಲ್ಲಿ ಜೀವನ ಪರ್ಯಂತ ಜೋಗಣೇರ ಜೀವನಕ್ಕೆ ಒಗ್ಗಿಹೋಗುವುದು ಅಮಾಯಕ ಹೆಂಗಳೆಯರ ಸ್ಥಿತಿಯನ್ನು ಹೇಳುತ್ತದೆ.

ಮಾನಿಂಗ ಆಸರೆಗಾಗಿ ಮಕ್ಕಳನ್ನು ಬಯಸಿದರೆ, ಮಾಳವ್ವ ಬಂಜೆಯಿಂದ ಮುಕ್ತಿಗಾಗಿ ಬಯಸುತ್ತಾಳೆ. ಇಬ್ಬರಲ್ಲು ಸಮಾಜದ ನಿಂದನೆಯಿಂದ ತಪ್ಪಿಸಿಕೊಳ್ಳುವುದನ್ನು ಕಾಣುತ್ತೇವೆ. ಮಕ್ಕಳ ಭವಿಷ್ಯಕ್ಕಿಂತ ತತ್‌ಕ್ಷಣದ ದುಃಖವನ್ನು ಮರೆಯಬೇಕಿದೆ. ಇದರಲ್ಲೇ ಸಮಾಜದ ಕ್ರೂರತೆ ತಿಳಿಯುತ್ತದೆ. ಮಕ್ಕಳನ್ನು ದೇವರ ಸೇವೆಗೆ ಬಿಡುವುದು ನಂಬಿಕೆಯೇ ಆಗಿದ್ದರು, ತಂದೆ–ತಾಯಿಯರು ಸಂತಸಪಡುವುದಿಲ್ಲ. ಇದು ಅವರಿಗೂ ದುಃಖಕರ ವಿಷಯ. ಅದಕ್ಕಿಂತ ಬಂಜೆಯಾಗಿ ಬದುಕುವುದರ ನೋವು ಕಷ್ಟಕರವೆಂಬಂತೆ ಕಂಡುಬರುತ್ತದೆ. ಅದನ್ನು ನೀಗಿಸಿಕೊಳ್ಳುವುದೆ ಗುರಿಯಾಗಿದ್ದರೆ ಹರಕೆಯು ಸಮಾನವಾಗಿರುತ್ತಿತ್ತು. ಗಂಡುಮಕ್ಕಳನ್ನು ದೇವರ ಸೇವೆಗೆ ಬಿಡುವ ಪದ್ಧತಿ ಇದ್ದರು, ಅದನ್ನು ರೂಢಿಸಿಕೊಂಡು ಬಂದಿಲ್ಲದ ಕಾರಣದಿಂದಲೊ, ಗಂಡು ಮಗನ ಮೇಲಿದ್ದ ವ್ಯಾಮೋಹದಿಂದಲೊ ತಾವೆ ಇಟ್ಟುಕೊಳ್ಳುವ ಹುನ್ನಾರ, ಹೆಣ್ಣು ಮಕ್ಕಳನ್ನು ಜೋಗತಿ ಬಿಡುವಲ್ಲಿ ಹೆಣ್ಣಿನ ಮೇಲಿರುವ ತಾತ್ಸಾರ ಕಂಡುಬರುತ್ತದೆ. ಈ ಮೂಲಕ ಅಮಾಯಕ ದುರ್ಗಿ–ಮರ್ಗಿಯರು ಎಂಬ ಇಬ್ಬರು ಹೆಂಗಳೆಯರು ತೆಕ್ಕೆಗೆ ಎಳೆದವನ ಬಳಿಗೆ ಹೋಗಿ ಸೂಳೆಗಾರಿಕೆ ದಂಧೆಗೆ ಒಳಪಡುವುದು ಅಮಾನುಷ ನಿಯಮವಾಗಿದೆ.

ದೈಹಿಕ ವೈಪರೀತ್ಯಗಳಿಂದ ಮಕ್ಕಳಾಗದಿರುವುದನ್ನು ಸಹಜವಾಗಿ ನೋಡದೆ, ಮಕ್ಕಳಾಗದಿರುವುದೇ ಮಹಾಪರಾಧ ಎಂಬಂತೆ ಪರಿಗಣಿಸಿರುವ ಪುರುಷಪ್ರಧಾನ ಸಮಾಜವು ಹೆಣ್ಣನ್ನು ಶೋಷಿಸುತ್ತಲೆ ಬಂದಿದೆ. ನವಜೀವವನ್ನು ಸೃಷ್ಟಿಸುವಲ್ಲಿ ಗಂಡು, ಹೆಣ್ಣಿನ ಇಬ್ಬರ

ಪಾತ್ರವಿರುತ್ತದೆ. ಇಬ್ಬರಲ್ಲಿ ಒಬ್ಬರ ದುರ್ಬಲತೆ ಕಂಡುಬಂದರು ಭ್ರೂಣಾವಸ್ಥೆ ರೂಪುಗೊಳ್ಳವುದಿಲ್ಲವೆಂಬ ಸತ್ಯವಿದ್ದರು ಅದನ್ನು ಅರಿಯದವರು ಮಗುವನ್ನು ಹೆರುವ ಹೆಣ್ಣನ್ನು ಮಾತ್ರ ದೂಷಿಸುವುದು ಅಂದಿನಿಂದ-ಇಂದಿನವರೆಗೂ ಚಾಲ್ತಿಯಲ್ಲಿದೆ. 'ಮಕ್ಕಳನ್ನು ಹಡೆಯದ ಹೆಣ್ಣು ತೂತಾದ ಮಡಿಕೆಯಂತೆ' ಯಾವುದಕ್ಕೂ ಪ್ರಯೋಜನಕ್ಕೆ ಬಾರದವಳು ಎಂದೇ ನೋಡುತ್ತಿದೆ. ಗಂಡಸರ ಮೇಲೆ ಯಾವ ಆಪಾದನೆಯು ಇರುವುದಿಲ್ಲ. ಗಂಡಿನ ದೋಷದಿಂದ ಮಕ್ಕಳಾಗಿಲ್ಲ ಎಂಬ ಸತ್ಯ ತಿಳಿದಿದ್ದರು ಹೆಣ್ಣನ್ನೇ 'ಬಂಜೆ', 'ಗೊಡ್ಡಿ', ಈಕೆಗೆ ಮಕ್ಕಳಾಗುವ ಸೌಭಾಗ್ಯವಿಲ್ಲವೆಂದೇ ನಿಂದಿಸುತ್ತಿದ್ದಾರೆ. ಈ ರೀತಿಯ ಹಣೆಪಟ್ಟ ಪುರುಷನಿಗೆ ಮಾತ್ರವಿಲ್ಲ. ಪುರುಷನನ್ನು ನಿಂದಿಸಬೇಕೆಂಬ ಹೇಳಿಕೆಯು ಈ ಅಧ್ಯಯನದ ಉದ್ದೇಶವಲ್ಲ. ಪುರುಷನಿಗಿರುವ ದೋಷಮುಕ್ತ ವಾತಾವರಣ ಹೆಣ್ಣಿಗೂ ಕಲ್ಪಿಸುವಂತೆ ಸಮಾಜ ಸೃಷ್ಟಿಯಾಗಬೇಕಾಗಿದೆ. ವೈಜ್ಞಾನಿಕವಾಗಿ ಎಷ್ಟೆ ಮುಂದುವರೆದರು ಸಮಾಜದ ನಿಂದೆನೆಗೆ ಗುರಿಯಾಗುವವಳು ಸ್ತ್ರೀ. ಈ ನಿಂದನೆಗೆ ಇಷ್ಟಪಡದೆ ಹೆಣ್ಣು 'ಮುಂಜಾನಿ ಹುಟ್ಟಲಿ ಸಂಜಿಗೆ ಸಾಯಲಿ ಬಂಜೆಂಬ ಶಬುದು ಬಿಡಿಸಯ್ಯಾ' ಎಂದು ದೇವರ ಮೊರೆ ಹೋಗುತ್ತಿರುವುದನ್ನು ಕಾಣುತ್ತಿದ್ದೇವೆ. ತಾಯ್ತನವೊಂದಿದ್ದರೆ ಹೆಣ್ಣೆಂದು ನೋಡುವ ಸಮುದಾಯ ತಾಯ್ತನವಿಲ್ಲದಿದ್ದರೆ, ಹೆಣ್ತನವೆ ಇಲ್ಲವೆಂಬ ನಿರ್ಧಾರಕ್ಕೆ ಬಂದುಬಿಡುತ್ತದೆ. 'ಕಂದನಾ ಕೊಡು ಶಿವನೆ ಬಂಧನಾ ಪಡಲಾರೆ ಬಂಜೆಂಬ ಶಬುದ ಹೊರಲಾರೆ ಮರ್ತ್ಯಾದಾಗ ಹಂಗೀನ ಬಾನ ಉಣಲಾರೆ' ಎಂಬ ಗರತಿ ಹಾಡಿನ ಪದ್ಯದ ಸಾರ ಎಂದಿಗೂ ಪ್ರಸ್ತುತವಾಗುತ್ತದೆ.

### ೩.೨ ಧಾರ್ಮಿಕ ನೆಲೆ

ಅನಾಗರಿಕತೆಯಿಂದ ಬದುಕುತ್ತಿದ್ದ ಮಾನವರು ಸರ್ವಸಮಾನತ್ವವನ್ನು ಮೈಗೂಡಿಸಿಕೊಂಡಿದ್ದವರು. ಕಾಲಕ್ರಮೇಣ ಅನಾಗರಿಕತೆಯಿಂದ ಹೊರಬರಲು ವ್ಯವಸ್ಥಿತವಾದ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವತ್ತ ಮನುಷ್ಯತ್ವವನ್ನೆ ಕಳೆದುಕೊಳ್ಳುವಂತಹ ಪ್ರಜ್ಞಾಹೀನ ನಾಗರಿಕತನಕ್ಕೆ ನಾಂದಿ ಹಾಡಿದ್ದಾರೆ. ಜಾತಿ, ಜನಾಂಗ, ವರ್ಗಗಳ ಆಧಾರದ ಮೇಲೆ ಉಳ್ಳವರು-ಇಲ್ಲದವರನ್ನು ಶೋಷಿಸುವ ನೆಲೆಯನ್ನು ಕಾಲದಿಂದ ಕಾಲಕ್ಕೆ ಉಳಿಸಿಕೊಂಡು ಬರುತ್ತಿದ್ದಾರೆ. ಶ್ರೀಮಂತ-ಬಡವರನ್ನು ಶೋಷಿಸುವ ನೆಲೆಯಲ್ಲಿಯೆ ಉಳ್ಳವರು-ಇಲ್ಲದವರು ಆದಿಯಾಗಿ ಸಮಾಜ ಪುರುಷ ಕೇಂದ್ರಿತವಾಗಿ ರೂಪುಗೊಂಡಿತು. ತಮ್ಮ ಅಸ್ತಿತ್ವವನ್ನು ಬಲಪಡಿಸಿಕೊಂಡ ಪುರುಷಷಾಹಿ ವರ್ಗ ಧರ್ಮದ ಹೆಸರಿನಲ್ಲಿ ಜಾತಿ, ಅಂತಸ್ತು, ವರ್ಗಗಳಿಗಿಂತ ಭಿನ್ನವಾದ ನೆಲೆಯಲ್ಲಿ, ಸಮಾಜದಲ್ಲಿ ಎಲ್ಲರಿಂದಲೂ ಕೀಳಾಗಿರುವಂತೆ 'ಹೆಣ್ಣನ್ನು' ಗುರ್ತಿಸಿ ಶೋಷಿಸುತ್ತಿದೆ. "ಧರ್ಮವು ಪ್ರತಿಯೊಬ್ಬ ವ್ಯಕ್ತಿ

ಅವನ/ಅವಳ ವ್ಯಕ್ತಿತ್ವಕ್ಕನುಗುಣವಾಗಿ ಸಾಮಾಜಿಕ ಮತ್ತು ಧಾರ್ಮಿಕ ಕರ್ತವ್ಯಗಳನ್ನು ನಿಗದಿ ಪಡಿಸುತ್ತದೆ. ಕಾಲ ಉರುಳಿದಂತೆ ಜಾತಿ–ಧರ್ಮವಾಗಿದ್ದು ಸ್ತ್ರೀ ಧರ್ಮವಾಗಿ ಮಾರ್ಪಟ್ಟಿದೆ ಎಂದರೆ ತಪ್ಪಾಗಲಾರದು".[೨೬] ಎಂಬ ಹೇಳಿಕೆಯು ಹೆಣ್ಣು ಧರ್ಮದ ಬಂಧನದಲ್ಲಿ ಸಿಲುಕಿರುವುದಾಗಿ ಹೇಳುತ್ತದೆ.

ಪುರಾತನ ಕಾಲದಿಂದಲೂ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿದ್ದ ಸಮಾಜವು ಬೇಟೆ, ಪಶುಪಾಲನೆ, ಕೃಷಿಯಂತಹ ಕಾರ್ಯಗಳ ಕೊನೆಯ ಹಂತದಲ್ಲಿ ಮಾತೃಪ್ರಧಾನ ವ್ಯವಸ್ಥೆಯಿಂದ ಪಿತೃಪ್ರಧಾನ ವ್ಯವಸ್ಥೆಗೆ ಜಾರಿದಾಗ ಧಾರ್ಮಿಕವಾದ ಲಿಂಗ ಅಸಮಾನತೆಯ ದೊಡ್ಡ ಪಿಡುಗು ಎದುರಾಗುತ್ತದೆ. ಪುರುಷತ್ವ ಸಮಾಜ ತಮಗೆ ತೋಚಿದಂತೆ ಹೆಣ್ಣನ್ನು ಎಷ್ಟರ ಮಟ್ಟಿಗೆ ತುಚ್ಛವಾಗಿ ಕಾಣಬಹುದೆಂಬಂತೆ 'ಧರ್ಮದ' ಬಂಧನದಲ್ಲಿ ಬಂಧಿಸಿದೆ. ಕೆಳಜಾತಿ ಎನಿಸಿದ ಶೂದ್ರರಿಗಿಂತಲು ಅವಳನ್ನು ಕೀಳಾಗಿ ಕಾಣುವಂತೆ ಧರ್ಮ ಸೃಷ್ಟಿಯಾಗಿದೆ. ಎಲ್ಲಾ ಧರ್ಮಗಳಲ್ಲು ಹೆಣ್ಣನ್ನು ಹೆರುವ ಯಂತ್ರವಾಗಿ ನೋಡಿ, ತಾಯ್ತನದ ಭಾಗ್ಯ ಪಡೆದಿರುವುದರಿಂದ ಆಕೆಯನ್ನು ಗೌರವ ಸೂಚಿಯಾಗಿ ಕಾಣುತ್ತಿದೆ. ತಾಯ್ತನವಿಲ್ಲದವಳನ್ನು ಮತ್ತಷ್ಟು ಹೀನಾಯವಾಗಿ ನಡೆಸಿಕೊಳ್ಳುತ್ತಿದೆ. ತಾಯ್ತನಕ್ಕೆ ಗೌರವ ಸೂಚಿಸುವ 'ಧರ್ಮ' ತಾಯಿಯಾಗುವ ಹೆಣ್ಣಿಗೆ, ಪುರುಷರಿಗಿರುವಷ್ಟು ಸ್ವಾತಂತ್ರದ ಬದುಕು ಇಲ್ಲದಂತೆ ಬಂಧಿಸಿದೆ.

ಅದನ್ನು ವಿವಿಧ ಧರ್ಮಗಳಲ್ಲಿ ಹೆಣ್ಣಿಗೆ ನೀಡಿರುವ ಸ್ಥಾನಮಾನದ ಮೂಲಕ ತಿಳಿದುಕೊಳ್ಳಬಹುದು. ಜೊರಾಷ್ಟ್ರಿಯನ್ ಧರ್ಮದಲ್ಲಿ ಕಾಮದ ವಸ್ತುವಾಗಿ, ಯಹೂದಿ ಧರ್ಮದಲ್ಲಿ ಹೆಣ್ಣನ್ನು ನಿಕೃಷ್ಟವಾಗಿ ಬಳಸಿಕೊಳ್ಳುತ್ತಿರುವಂತಹ ಉದಾಹರಣೆಗಳು ಸಿಗುತ್ತವೆ. ಬೌದ್ಧಧರ್ಮ– ಸ್ತ್ರೀಯರನ್ನು ಭಿಕ್ಷುಣಿಯಾಗಿ ಸೇರಿಸಿಕೊಳ್ಳಲು ಹಿಂದು–ಮುಂದು ನೋಡುತ್ತಿತ್ತು. "ನಾರಿಯರನ್ನು ನಮ್ಮ ಸಂಘಕ್ಕೆ ಸೇರಿಸಿಕೊಳ್ಳದಿದ್ದ ಪಕ್ಷದಲ್ಲಿ ಬೌದ್ಧಧರ್ಮವು ಸಾವಿರಾರು ವರ್ಷಗಳವರೆಗೆ ಬಾಳುತ್ತಿತ್ತು. ಈಗ ನಾರಿಯರ ಪ್ರವೇಶದಿಂದ ಅದರ ಆಯಸ್ಸು ಕ್ಷೀಣಿಸುತ್ತದೆ. ಅದು ಐದು ನೂರು ವರ್ಷಗಳಷ್ಟು ಕಾಲದವರೆಗೂ ಬದುಕುಳಿಯುವುದು ಕಷ್ಟ' ಎನ್ನುತ್ತಾನೆ ಬುದ್ದ. ಅಂದ ಮೇಲೆ ಸ್ತ್ರೀಯರ ಬಗ್ಗೆ ಬುದ್ದ ಹೊಂದಿದ್ದ ಅಭಿಪ್ರಾಯ ಸಮಾನತೆಯಿಂದ ಕೂಡಿರಲಿಲ್ಲ ಎಂಬುದು ಗೊತ್ತಾಗುತ್ತದೆ."[೨೮] ನಂತರದಲ್ಲಿ ಹೆಣ್ಣಿಗೆ ಉತ್ತಮ ಸ್ಥಾನ–ಮಾನ ದೊರೆತಿದೆ. ಜೈನಧರ್ಮ 'ಸ್ತ್ರೀ' ಮೋಕ್ಷಕ್ಕೆ ಅನರ್ಹಳೆಂದು ಪುರುಷನಾಗಿ ಹುಟ್ಟಿದಾಗಲೆ ಮೋಕ್ಷ ಪ್ರಾಪ್ತಿ ಎಂದು ಹೇಳಿದೆ. ದಿಗಂಬರ ಪಂಥ ಸ್ತ್ರೀ ಜನ್ಮಕ್ಕೆ ಮೋಕ್ಷವೆ ಇಲ್ಲವಾಗಿಸಿ ಆಕೆಯನ್ನು ತಿರಸ್ಕರಿಸಿದರೆ, ಶ್ವೇತಾಂಬರ ಪಂಥ ಧರ್ಮ ಪ್ರಚಾರಕಳಾಗಿ ಅವಕಾಶ ನೀಡಿರುವುದರಲ್ಲಿ ಸ್ವಲ್ಪಮಟ್ಟಿನ ಉದಾರತೆ ತೋರಿದೆ. ಹಿಂದೂಧರ್ಮ

ಮನುಪೂರ್ವ ಕಾಲದವರೆವಿಗು ಸ್ತ್ರೀಯರನ್ನು ಗೌರವಿಸಿದ್ದ ಉಲ್ಲೇಖಗಳಿವೆ. ಬಹುಪತ್ನಿತ್ವದಂತೆ ಬಹುಪತಿತ್ವವು ರೂಢಿಯಲ್ಲಿ ಇರುತ್ತದೆ. ಕಾಲಕ್ರಮೇಣ ಮಹಿಳೆಯರ ಎಲ್ಲಾ ಸ್ವಾತಂತ್ರ್ಯಕ್ಕು ಕಡಿವಾಣ ಬೀಳುತ್ತದೆ. ಕ್ರೈಸ್ತ, ಮುಸ್ಲಿಂ, ಹಿಂದೂಧರ್ಮಗಳಲ್ಲೆಲ್ಲಾ ತಾಯ್ತನ ಹೊರುವ ಹೆಣ್ಣನ್ನು ಹೊಗಳುತ್ತ ಅವಳ ಸ್ಥಾನಮಾನವನ್ನು ತುಚ್ಛೀಕರಸಿದೆ. ಶೀಲ, ಪಾವಿತ್ರ್ಯ, ಪಾತಿವ್ರತ್ಯ ಕಾಪಾಡಿಕೊಂಡು ಪುರುಷರ ಅಧೀನರಾಗಿ ಬದುಕುವಂತೆ ಧರ್ಮಬಂಧನವನ್ನು ವಿಧಿಸಿದೆ.

ಧರ್ಮವೆಂಬುದು ದೇವರ ಹೆಸರಿನಲ್ಲಿ ಕಟ್ಟಿಕೊಂಡಿರುವ ಕಟ್ಟುಪಾಡು. ಪುರುಷ ನಿರ್ಮಿತವಾದ ಧರ್ಮ ತಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಂತೆ ಹೆಣ್ಣನ್ನು ಕೀಳಾಗಿ ಕಾಣುವಂತೆ ರಚಿಸಿಕೊಂಡಿದೆ. 'ಸ್ತ್ರೀ ಸಂರಕ್ಷಣದಿಂದ ರಚಿತವಾದ ನಿಯಮಗಳನ್ನು ಪುರುಷಷಾಹಿ ಸಮಾಜ ತಮ್ಮ ಸ್ವೇಚ್ಛಾಚಾರದಿಂದ ಧರ್ಮದ ಹೆಸರಿನಲ್ಲಿ ಪರಿವರ್ತಿಸಿಕೊಂಡು ಆಕೆಯನ್ನು ಶೋಷಿಸುತ್ತಿದೆ. ಉಡುಗೆ–ತೊಡುಗೆ, ವಿವಾಹ ಸಂಬಂಧಿ ವಿಚಾರಗಳು, ಆಚಾರ–ವಿಚಾರ–ಸಂಪ್ರದಾಯಗಳ ಪಾಲಿಸುವಿಕೆಗಳೆಲ್ಲದರಲ್ಲಿಯೂ ಗಂಡಿಗೊಂದು ಕಾಯಿದೆ, ಹೆಣ್ಣಿಗೊಂದು ಕಾಯಿದೆ ಎಂಬಂತೆ ಉಚ್ಚಸ್ಥಾನದಲ್ಲಿ ಪುರುಷನನ್ನು, ನೀಚ ಸ್ಥಾನದಲ್ಲಿ ಹೆಂಗಳೆಯರನ್ನಿಟ್ಟು ಧರ್ಮಗಳು ಸ್ಥಾಪಿತವಾಗಿದೆ.

ಪುರುಷಪ್ರಧಾನ ಹಿನ್ನೆಲೆಯಲ್ಲಿ ರಚಿತವಾದ ಧರ್ಮಗಳೆಲ್ಲವು ಹೆಣ್ಣನ್ನು ಅಬಲೆಯನ್ನಾಗಿ ಮಾಡಿಕೊಂಡು ಸ್ವತಂತ್ರ ಹೀನಳನ್ನಾಗಿ ಸೃಷ್ಟಿಸಿದೆ. ಈಗಾಗಲೆ ಧರ್ಮ ಬಂಧಿಯಾಗಿರುವ ಹೆಣ್ಣನ್ನು ತಮ್ಮ ಅಧರ್ಮ ದಬ್ಬಾಳಿಕೆಯಿಂದ ಶೋಷಿಸುವುದನ್ನು ಸಾರಾ ಅಬೂಬಕ್ಕರ್‌ರವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ ಒಳಗೊಂಡಿದೆ. ತಲಾಖ್ ಪಡೆದ ಹೆಣ್ಣು ಮೊದಲ ಗಂಡನನ್ನೆ ಸೇರಬಯಸಲು ಇಚ್ಛಿಸಿದರೆ ಎರಡನೇ ಮದುವೆಯಾಗಿ ಆತನೊಂದಿಗೆ ಒಂದು ರಾತ್ರಿ ಕಳೆಯಬೇಕು. ಎರಡನೆಯವನಿಂದ ತಲಾಖ್ ಪಡೆದು ಮೊದಲ ಗಂಡನನ್ನು ಸೇರಬಹುದು ಎಂಬ ಧರ್ಮದ ತಿರುಳಲ್ಲಿ ನಾದಿರಾಳ ಶೋಷಣೆ ಒಳಗೊಂಡಿದೆ. ಲೇಖಕಿ "ಧರ್ಮದ ಸಂಕೇತವಾದ ಮಸೀದಿಯ ಕೊಳದಲ್ಲಿ ಹಾರಿ ಪ್ರಾಣ ಕಳೆದುಕೊಳ್ಳುವ ಮೂಲಕ 'ಚಂದ್ರಗಿರಿಯ ತೀರದಲ್ಲಿ' ಕಥಾನಾಯಕಿ ನಾದಿರಾ ಇಂತಹ ಒಂದು ನಿಯಮದಲ್ಲಿ ಎಷ್ಟು ನ್ಯಾಯವಿದೆ ಎಂದು ಧಾರ್ಮಿಕ ಸ್ಥಳದಲ್ಲಿ ಪ್ರಶ್ನಿಸುವುದು ತನ್ನ ಕಾದಂಬರಿಯಲ್ಲಿ ಧ್ವನಿತವಾಗಿವೆ"[೨೯] ಎಂಬುದಾಗಿ ಹೇಳಿದ್ದಾರೆ. ನಾದಿರಾ ಧರ್ಮದ ಸುಳಿಯಲ್ಲಿ ಸಿಲುಕಿ ನಲುಗಿ ಸಾಯುವಂತಹ ಸ್ಥಿತಿ ಈ ಕಾದಂಬರಿಯಲ್ಲಿ ಬಿತ್ತರಗೊಂಡಿದೆ.

ಧರ್ಮದ ಬಂಧನದಲ್ಲಿ ತಮ್ಮ ಆಸೆ, ಕನಸುಗಳನ್ನು ಬದಿಗೊತ್ತಿ ಧರ್ಮದ ನಿಯಮಗಳಲ್ಲೆ ಉಸಿರಾಡಿಕೊಂಡಿರುವ ಹೆಂಗಳೆಯರು ಸ್ವನಿರ್ಧಾರಗಳಿಂದ ವಂಚಿತರಾಗಿದ್ದಾರೆ. ತಂದೆಯ

ಅಹಂಕಾರಕ್ಕೆ ಬಲಿಯಾದ ನಾದಿರಾ ಗಂಡ, ಮಗುವಿನಿಂದ ದೂರ ಉಳಿಯಬೇಕಾಗುತ್ತದೆ. ಎಷ್ಟೊ ಬಾರಿ ನದಿದಾಟಿ ಗಂಡನ ಮನೆ ಸೇರುವ ಬಯಕೆ ಬಂದರು ಅದುಮಿಟ್ಟುಕೊಳ್ಳುವುದು ತಂದೆಯ ಮಾತನ್ನು ಮೀರಬಾರದೆಂದೆ. ರಶೀದ್‌ನೆ ನದಿದಡಕ್ಕೆ ಬರುವ ಸೂಚನೆ ನೀಡಿ ಬರಬೇಕೆಂಬ ಸಂದೇಶ ರವಾನೆಗೆ ಸಂತಸಿಸುತ್ತಾಳಾದರು "ತಂದೆಯ ಕಣ್ಣು ತಪ್ಪಿಸಿ ಮಗಳು ನದಿ ದಾಟಬಾರದು. ಅವರೇಷ್ಟಾದರು ಜನ್ಮ ನೀಡಿದ ತಂದೆ ಅವರ ಮನ ನೋಯಿಸಿ ಹೋಗಬಾರದು; ಅವರ ಆಶೀರ್ವಾದ ಪಡೆದೇ ಹೋಗಬೇಕು"[೩೦] ಎಂಬ ತಾಯಿಯ ಅಸಹಾಯಕ ಮಾತುಗಳು ಧರ್ಮವನ್ನು ಮೀರಿ ನಡೆಯಬಾರದೆಂಬಂತೆ ಸಾರಿ ಹೇಳುತ್ತದೆ. ಅದೇ ಧರ್ಮ 'ತಲಾಖ್'ನಿಂದ ಅವಳ ಜೀವನವನ್ನೆ ತೆಗೆದುಕೊಳ್ಳುತ್ತದೆ.

ಮಗಳನ್ನು ಗಂಡನ ಮನೆಗೆ ಸೇರಿಸುವ ಯೋಚನೆ ಮಾಡದ ಖಾನ್‌ನಲ್ಲಿ ಅಳಿಯನೆ ಬಂದು ಕರೆದುಕೊಂಡು ಹೋಗಲಿ ಎಂಬ ಅಹಂ ಇರುತ್ತದೆ. ರಶೀದ್‌ನು ಬಾರದಿದ್ದನ್ನು ನೋಡಿ ಮಗಳೆ 'ತಲಾಖ್' ಕೇಳುತ್ತಿದ್ದಾಳೆಂಬ ಸುಳ್ಳಿನಿಂದ ಮಗಳನ್ನೆ ಬಲಿ ತೆಗೆದುಕೊಳ್ಳುತ್ತಾನೆ. ರಶೀದ್‌ನಿಗೆ ಹೆಂಡತಿ ಮೇಲೆ ಅಪಾರ ಪ್ರೀತಿ ಇದ್ದರು, ಪ್ರತಿಯೊಬ್ಬ ಪುರುಷನು ಹೆಣ್ಣಿಗಿಂತ ತಾನು ಕಡಿಮೆ ಇಲ್ಲ ಎಂಬ ಯೋಚನೆ ಅಂತ:ಸತ್ವದಲ್ಲಿ ಹುದುಗಿದ್ದು ಅದು ಒಮ್ಮೆಲೆ ಭುಗಿಲೆದ್ದಂತೆ 'ತನಗೇನು ಹೆಣ್ಣುಸಿಗುವುದಿಲ್ಲವೆ' ಎಂಬ ಮಾತಿನಿಂದ ಪುರುಷವಾದಿಯಾಗಿ ಕಾಣುತ್ತಾನೆ. ಯಾವುದನ್ನು ವಿಚಾರಿಸದೆ ಮಾವನ ವಿಚಾರದಿಂದ ಆತಂಕವಾದರು "ನಾನು ನನ್ನ ಹೆಂಡತಿ, ಮಹಮ್ಮದ್‌ಖಾನರ ಮಗಳು ನಾದಿರಾಳ ತಲಾಖ್ ಒಂದು ಬಾರಿ, ಎರಡು ಬಾರಿ, ಮೂರು ಬಾರಿಯೂ ಹೇಳಿ ಬಿಡುಗಡೆ ಮಾಡಿದೆ"[೩೧] ಎಂದು ವಿಚ್ಛೇದಿತನಾಗುತ್ತಾನೆ. ಮದುವೆಯಲ್ಲಿ ಗಂಡನ ಸರಿಸಮಾನವಾಗಿ ನಿಲ್ಲುವ ಹೆಣ್ಣಿಗೆ, ವಿಚ್ಛೇದನೆ ಪಡೆಯುವಾಗ ಮಾತ್ರ ಯಾವ ಅಧಿಕಾರವು ಇಲ್ಲದಿರುವಂತೆ ಹೆಣ್ಣು ಧರ್ಮಬಂಧಿಯಾಗಿರುವುದನ್ನು ಮುಸ್ಲಿಂ ಧರ್ಮದಲ್ಲಿ ಕಾಣುತ್ತೇವೆ.

ತನ್ನದಲ್ಲದ ತಪ್ಪಿಗೆ ಪತಿಯಿಂದ ದೂರವಾಗಿ, ತಂದೆಯ ಮಾತನ್ನು ಧಿಕ್ಕರಿಸುವುದು ಧರ್ಮವಲ್ಲವೆಂಬ ಬಂಧನಕ್ಕೆ ಸಿಲುಕಿರುವ ನಾದಿರಾ ಪತಿ ತನ್ನನ್ನು ಕರೆದುಕೊಂಡು ಹೋಗುತ್ತಾನೆಂಬ ಆಶಾವಾದದಿಂದ ಬದುಕಿರುತ್ತಾಳೆ. ಆದರೆ ಖಾನ್‌ನಂತೆ, ರಶೀದ್ ಕೂಡ ತನ್ನ ತನವನ್ನು ಬಿಟ್ಟುಕೊಡದೆ ತನ್ನ ಮಗುವನ್ನು ಕಸಿದುಕೊಳ್ಳುವಂತಹ ಕ್ರೂರತನ ಪ್ರದರ್ಶಿಸುತ್ತಾನೆ. ಮಗುವಿನಿಂದ ದೂರಾಗಿ ಮಗು, ಪತಿಗಾಗಿ ಹಾತೊರೆಯುತ್ತಿದ್ದ ನಾದಿರಾ ರಶೀದ್‌ನ ತಲಾಖ್‌ನಿಂದ ತತ್ತರಿಸುತ್ತಾಳೆ. ಖಾನ್‌ನ ಕುತಂತ್ರ ಬುದ್ಧಿ ರಶೀದ್‌ನೇ 'ತಲಾಖ್' ನೀಡಿರುವುದಾಗಿ ಮಗಳೊಂದಿಗೆ ಹುಸಿನುಡಿದು ಗಂಡ-ಹೆಂಡತಿ ನಡುವೆ ವೈಮನಸ್ಸು ಬೆಳೆಯುವಂತೆ ಮಾಡಿ ನಾದಿರಾ ಧರ್ಮದ

ಇಕ್ಕಟ್ಟಿಗೆ ಸಿಲುಕಲು ಕಾರಣನಾಗುತ್ತಾನೆ. ಬದುಕಿದ್ದು ಸತ್ತಂತಾಗುವ ನಾದಿರಾ ಪುರುಷರ ಸ್ವಾರ್ಥದಿಂದ ದೂರಾಗುವ ಅನೇಕ ಹೆಣ್ಣು ಮಕ್ಕಳ ಒಕ್ಕೊರಲ ಧ್ವನಿಯಂತೆ ‘ಎಲ್ಲಿಂದಲೋ ಮೂರು ಬಾರಿ ತಲಾಖ್ ಹೇಳುವುದು ಹೇಗೆ ಸರಿ’ ಎಂದು ಪ್ರಶ್ನಿಸಿಕೊಳ್ಳುತ್ತಾಳಾದರೂ ಮರುಕ್ಷಣ “ಓ...... ಧರ್ಮದ ನಿಯಮಗಳನ್ನು ಪ್ರಶ್ನಿಸಲು ನಾನಾರು? ಖುರ್‌ಆನ್‌ನನ್ನು ಪ್ರಶ್ನಿಸಬಾರದೆಂದು ಮೌಲವಿಗಳು ಮತ ಪ್ರಸಂಗಗಳಲ್ಲಿ ಹೇಳುತ್ತಲೇ ಇರುತ್ತಾರಲ್ಲ. ‘ಯಾ ಅಲ್ಲಾಹ್, ನನ್ನನ್ನು ಕ್ಷಮಿಸು?”[೩೨] ಎಂಬುದರಲ್ಲಿ ಹೆಣ್ಣಿನ ಮುಗ್ದತೆ ಕಂಡುಬರುತ್ತದೆ. ಪುರುಷಧರ್ಮ ಯಾವ ಇಕ್ಕಟ್ಟಿಗೆ ಸಿಲುಕಿಸಿದರು ಯಾವ ರೀತಿಯ ನಿಯಮಗಳನ್ನು ಜಾರಿಗೆ ತಂದರು ಸ್ತ್ರೀಯಾದವಳು ತನಗೆ ಇಷ್ಟವಿರಲಿ, ಇಲ್ಲದಿರಲಿ ಪಾಲಿಸಬೇಕಾದದ್ದು ಕರ್ತವ್ಯವೆಂಬಂತೆ ರಚಿಸಲ್ಪಟ್ಟಿದೆ. ಪ್ರಶ್ನಿಸುವ ಹಕ್ಕು ಕೂಡ ಇಲ್ಲದಂತೆ ಧರ್ಮ ಪರಿಪಾಲಕಳನ್ನಾಗಿ ನಡೆಸಿಕೊಳ್ಳುತ್ತಿರುವುದು ಮನುಷ್ಯ ಧರ್ಮವನ್ನು ಮೀರಿದ್ದಾಗಿದೆ.

ಮನುಷ್ಯತ್ವವೆ ಇಲ್ಲದಂತೆ ನಡೆದುಕೊಳ್ಳುವ ಪುರುಷರಲ್ಲಿ ತಲಾಖ್ ಕೇಳಿದ್ದು ಖಾನ್, ‘ತಲಾಖ್’ ನೀಡಿದ್ದು ರಶೀದ್ ಶಿಕ್ಷೆಗೆ ಗುರಿಯಾದವಳು ಮಾತ್ರ ನಾದಿರಾ. ಖಾನ್ ತನ್ನ ವಯಸ್ಸಿನವನಿಗೆ ಮದುವೆ ಮಾಡುವಂತಹ ಕ್ರೂರತನದಿಂದ ತಪ್ಪಿನ ಅರಿವಾಗಿ ರಶೀದ್‌ನೊಂದಿಗೆ ವಿವಾಹ ಮಾಡುವ ಮನಸ್ಸು ಮಾಡುತ್ತಾನಾದರೂ ಮತ್ತೊಮ್ಮೆ ಪುರುಷ ದಬ್ಬಾಳಿಕೆಗೆ ಒಳಗಾಗುವವಳು ನಾದಿರಾ. ಇಸ್ಲಾಂ ಧರ್ಮದ ಪ್ರಕಾರ ಒಂದು ಬಾರಿ ವಿಚ್ಛೇದನ ಪಡೆದ ನಂತರ ಅದೇ ದಂಪತಿಗಳು ಒಂದಾಗಬೇಕಾದರೆ ಮತ್ತೊಂದು ಭಯಂಕರ ಸನ್ನಿವೇಶಕ್ಕೆ ಹೆಣ್ಣು ಸಿದ್ಧವಾಗಬೇಕಿತ್ತು. ಬೇರೊಬ್ಬ ವ್ಯಕ್ತಿಯೊಂದಿಗೆ ವಿವಾಹವಾಗಿ ಆತನೊಂದಿಗೆ ಒಂದು ರಾತ್ರಿ ಕಳೆಯಬೇಕಿತ್ತು. ಮೂರು ತಿಂಗಳಾದ ನಂತರ ಆಕೆ ಗರ್ಭಿಣಿಯಾಗಿಲ್ಲವೆಂದು ತಿಳಿದಾಗ ಆತನಿಂದ ‘ತಲಾಖ್’ ಪಡೆದು ಮೊದಲ ಗಂಡನೊಂದಿಗೆ ವಿವಾಹವಾಗಬಹುದಿತ್ತು. ಈ ಪದ್ಧತಿ ಅಥವಾ ನಿಯಮದಿಂದ ಧರ್ಮದ ತಾರತಮ್ಯತೆ ಇದೆ.  ಈ ನಿಯಮ ಗಂಡಿಗೆ ಅನ್ವಯಿಸುವುದಿಲ್ಲ. ಮೊದಲ ಹೆಂಡತಿಯಿಂದ ತಲಾಖ್ ಪಡೆದು ಎರಡನೇ ಮದುವೆಯಾಗಿದ್ದರು, ಆಕೆಯಿಂದ ತಲಾಖ್ ಪಡೆಯದೆ ಮೊದಲ ಹೆಂಡತಿಯನ್ನು ವಿವಾಹವಾಗಬಹುದಾಗಿದೆ.  ಧರ್ಮದ ತಾರತಮ್ಯತೆಯ ಸ್ಪಷ್ಟತೆ ತಿಳಿಯುತ್ತದೆ.  ಗಂಡಿಗಿರುವ ಇಂತಹ ಸರಳ ನಿಯಮಗಳು ಹೆಣ್ಣಿಗೆ ಏಕೆ ಇಲ್ಲ? ಎಂಬ ಪ್ರಶ್ನೆ ಮೂಡುತ್ತದೆ.  ಅದಕ್ಕೆ ಉತ್ತರವಾಗಿ ಗಂಡಸರಿಗಿಲ್ಲದ ಈ ನಿಯಮ ಹೆಣ್ಣಾದವಳು ಏನೇ ಕಷ್ಟಬಂದರು ಗಂಡನೊಂದಿಗೆ ಹೊಂದಿಕೊಂಡು ಹೋಗಲಿ ಎಂಬುದನ್ನು ಸೂಚಿಸಿದರೆ, ಮತ್ತೊಮ್ಮೆ ಮೊದಲ ಗಂಡನನ್ನೆ ಸೇರಲು ಬಯಸುವ ಹೆಣ್ಣು ಮತ್ತೊಬ್ಬನ

ಕಾಮದಾಸಕ್ತಿ ಈಡೇರಿಸುವಂತೆ ಆಕೆಯನ್ನು ಬಳಸಿಕೊಂಡಿರುವುದನ್ನು ಕಾಣುತ್ತೇವೆ. ಧರ್ಮದಲ್ಲಿಯೇ ಒಂದು ಹೆಣ್ಣನ್ನು ಕೀಳಾಗಿ ಕಾಣುವಂತಾದರೆ ಆಕೆಯ ರಕ್ಷಣೆಯಾದರು ಮಾಡುವವರಾರು? ಎಂಬ ಪ್ರಶ್ನೆ ಮೂಡುತ್ತದೆ. ಇದರ ಅರಿವಿರದ ಖಾನ್-ರಶೀದ್‌ರ ಒಣ ಪ್ರತಿಷ್ಠೆಗಳಿಂದ ಒಂದು ರಾತ್ರಿಯ ಮಟ್ಟಿಗೆ ಬುದ್ಧಿಹೀನನಿಗೆ ತನ್ನ ದೇಹವನ್ನರ್ಪಿಸುವಂತಹ ಶಿಕ್ಷೆ ಮುಗ್ಧಳಾದ ನಾದಿರಾದ್ದಾಗಿರುತ್ತದೆ. ರಶೀದ್ ಮತ್ತು ನಾದಿರಾ ನಡುವೆ ಅಪಾರವಾದ ಪ್ರೇಮವಿದ್ದರೂ ಧರ್ಮದ ಸೆರೆಯಲ್ಲಿರುತ್ತಾರೆ. ಸಮಾಜ ಮಾಡಿಕೊಂಡಿರುವ ಧಾರ್ಮಿಕ ನಂಬಿಕೆಗಳ ಬಂಧನದಲ್ಲಿರುತ್ತಾರೆ.

ಸ್ತ್ರೀ ಧರ್ಮದ ನಿಯಮಗಳನ್ನು ಪಾಲಿಸದಿದ್ದರೆ ಸದ್ಗತಿ ದೊರೆಯದು. ಬದಲಿಗೆ ಕಠಿಣ ಶಿಕ್ಷೆಗೆ ಗುರಿಯಾಗುತ್ತಾಳೆ. ಚಾಚು ತಪ್ಪದೆ ಧಾರ್ಮಿಕ ಆಚರಣೆಗಳನ್ನು ಪಾಲಿಸುವಂತೆ ಮಾಡಿ ಆಕೆಯನ್ನು ಹೀನವಾಗಿ ಕಾಣುತ್ತಿರುವುದು ಎಲ್ಲಾ ಧರ್ಮಗಳಲ್ಲಿರುವಂಥದ್ದೆ. ದೈವದ ಹೆಸರಿನಲ್ಲಿ ಮಂತ್ರ ಮುಗ್ಧರನ್ನಾಗಿಸಿ ಸ್ತ್ರೀಯರನ್ನು ತಮ್ಮ ಅಧೀನಪಡಿಸಿಕೊಂಡಿರುವುದನ್ನು ಕಾಣುತ್ತೇವೆ. ನಾದಿರಾಳು ಇದೇ ಆತಂಕದಿಂದ "ನಿನಗೆ ಧೈರ್ಯವಿದ್ದರೆ ಈಗಿಂದೀಗಲೇ ಕಾವಳ್ಳಿಗೆ ಹೊರಟುಹೋಗು"[೩೩] ಎಂಬ ಜಮೀಲಾಳ ಮಾತಿಗೆ "ಮುಸ್ಲಿಂ ಸ್ತ್ರೀಯರಿಂದ ನಿಯಮ ಮೀರಿ ನಡೆಯಲು ಸಾಧ್ಯವೇ,? ನಿಯಮ ಮೀರುವವರು ಎಂದೆಂದಿಗೂ ಜಹನ್ನಮಿನಲ್ಲಿ ಬೆಂಕಿಯಲ್ಲಿ ಸುಡಲ್ಪಡುತ್ತಾ ನರಳಬೇಕಾಗುತ್ತದೆ"[೩೪] ಎಂಬ ಮಾತನ್ನು ಮೌಲವಿಗಳು ಹೇಳಿರುವುದಾಗಿ ನೆನಪಿಸಿಕೊಳ್ಳುವ ಆಕೆ ತಾನಾಗಿಯೇ ದು:ಖ ಸ್ವೀಕರಿಸುತ್ತಾಳೆಯೆ ಹೊರತು ಧರ್ಮ ಉಲ್ಲಂಘನೆಯನ್ನು ಮಾಡುವುದಿಲ್ಲ. ಅದಕ್ಕಾಗಿಯೆ ಗಂಡ-ಮಗುವಿಗಾಗಿ ಒಂದು ರಾತ್ರಿಯ ಮಟ್ಟಿಗೆ ಬಲವಂತದಿಂದ ಇಷ್ಟವಿಲ್ಲದಿದ್ದರು ಮತ್ತೊಬ್ಬನನ್ನು ವಿವಾಹವಾಗಲು ಒಪ್ಪುತ್ತಾಳೆ.

ಒಂದೆಡೆ ಕುಟುಂಬ, ಮತ್ತೊಂದೆಡೆ ಧರ್ಮದ ನಿಯಮ ಯಾವ ತಪ್ಪೂ ಮಾಡದ ನಾದಿರಾಳ ಸಾವಿಗೆ ಕಾರಣವಾಗುತ್ತವೆ. ತಲಾಖ್ ಪಡೆದ ನಂತರ ಒಬ್ಬರಿಗೊಬ್ಬರು ಎಂದೆಂದಿಗೂ ನೋಡುವಂತಿರಲಿಲ್ಲವಾದ್ದರಿಂದ ತನ್ನ ಕುಟುಂಬಕ್ಕಾಗಿ ದೇಹವನ್ನು ಪರಪುರುಷನಿಗೆ ಒಪ್ಪಿಸಲು ಸಿದ್ಧಳಾಗುತ್ತಾಳೆ. ಆದರೂ ಕೊನೆಗಳಿಗೆಯಲ್ಲಿ ಅವಳ ಮನಸ್ಸು ಒಪ್ಪುವುದಿಲ್ಲ. ದೀರ್ಘಕಾಲದ ಸುಖಕ್ಕಾಗಿ ಒಂದು ದಿನ ಬೇರೊಬ್ಬ ವ್ಯಕ್ತಿಗೆ ದೇಹ ಒಪ್ಪಿಸಲು ಇಚ್ಚಿಸದೆ ತನ್ನ ನೋವು, ಹತಾಶೆಗಳನ್ನು ಬಿಗಿ ಹಿಡಿದುಕೊಂಡು ಪ್ರಶ್ನಾತೀತವಾಗಿ ಸಾವಿನ ಮೆಟ್ಟಿಲು ಏರುತ್ತಾಳೆ. ಪುರುಷರ ಒಣಪ್ರತಿಷ್ಠೆಗಳಿಂದ ಹೆಣ್ಣಿನ ಅಂತಃಸತ್ವವನ್ನು ಅರಿಯದೆ ತಲಾಖ್‌ನಂತಹ ಘೋರ ಶಿಕ್ಷೆಗೆ ಒಳಪಡಿಸುವುದು ಅಮಾನವೀಯ. 'ಒಮ್ಮೆ ಕೈ ಜಾರಿದ ಸಮಯ ಮತ್ತೆ ದಕ್ಕುವುದಿಲ್ಲ'ವೆಂಬ ಗಾದೆ

ಮಾತಿನಂತೆ ಒಬ್ಬ ಅಬಲೆಯ ಜೀವವನ್ನು ಧರ್ಮದ ಬಂಧನದಿಂದ ಕಸಿದುಕೊಳ್ಳುವುದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ಒಳ್ಳೆಯ ದೃಷ್ಟಿಯಿಂದ ರಚನೆಯಾದ ಧರ್ಮಗಳು ಮಹಿಳಾ ಶೋಷಣೆಯ ಹಾದಿಯಲ್ಲಿ ಸಾಗುತ್ತಿರುವುದು ನಮ್ಮೆಲ್ಲರ ದುರಾದೃಷ್ಟಕರ ಸಂಗತಿ. ಒಂದು ಹೆಣ್ಣು ಅನ್ಯಧರ್ಮೀಯನನ್ನು ವಿವಾಹವಾಗಲು ಸಮಾಜ ಒಪ್ಪುವುದಿಲ್ಲ. ಮನಸ್ಸುಗಳು ಒಂದಾದರು, ಧರ್ಮವನ್ನು ನೋಡುವುದು ಸಂಪ್ರದಾಯವಾಗಿ ಬಿಟ್ಟಿದೆ. ಸ್ತ್ರೀಯಾದವಳು ಪುರುಷ ಧರ್ಮಕ್ಕೆ ಬದಲಾಯಿಸಿಕೊಳ್ಳಬೇಕೆಂಬಂತಹ ತಾರತಮ್ಯವನ್ನು ಮಾಡುತ್ತದೆ. ಸ್ತ್ರೀಯರ ಧರ್ಮಕ್ಕೆ ತಮ್ಮ ಧರ್ಮವನ್ನು ಬದಲಾಯಿಸಿಕೊಳ್ಳುವ ಪುರುಷರ ಸಂಖ್ಯೆ ತೀರಾ ಕಡಿಮೆ. ಅಲ್ಲಿಯೂ ಹೆಣ್ಣಾದವಳು ತಮ್ಮ ಅಧೀನದಲ್ಲಿರಬೇಕು. ಆಕೆ ಪರಾವಲಂಬಿಯಾಗಿ ತನ್ನ ಆಶ್ರಯ ಪಡೆಯುವಂತಾಳಗಬೇಕೆಂದು ಬಯಸುವ ಮೂಲಕ ಅವಳನ್ನು ಶೋಷಿಸುವ ನೆಲೆ ವೀಣಾ ಶಾಂತೇಶ್ವರರವರ 'ಗಂಡಸರು' ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ಪ್ರೀತಿಯ ಮೋಸದ ಮಾತುಗಳಿಂದ ಶೋಷಿಸುವ ಪುರುಷ ಜಾತಿ ಶಾಂತಿಯನ್ನು ಕಾಮದ ವಸ್ತುವಾಗಿ ನೋಡುತ್ತದೆ. ತಾನು ಹೇಳಿದಂತೆ ಕೇಳಿಕೊಂಡಿರಬೇಕೆಂದೆ ಬಯಸುತ್ತದೆ. ಸ್ತ್ರೀಪರ ಮಾತನಾಡುವ ಮುಖವಾಡಧಾರಿಗಳ ಪೈಕಿ ಜಾನ್ ಅಶೋಕ್‌ಕುಮಾರ್ ಎಂಬ ನಾಲ್ಕನೇ ಪ್ರೇಮಿ ಧರ್ಮದ ವಿಷಯವಾಗಿ ಹೆಣ್ಣಿನ ಅಸ್ತಿತ್ವಕ್ಕೆ ಬೆಲೆಯೇ ಇಲ್ಲವೆಂಬಂತೆ ಕ್ರೂರಿಯಾಗಿ ವರ್ತಿಸುತ್ತಾನೆ. ಪ್ರತಿಯೊಬ್ಬರ ಭಾವನೆಗಳನ್ನು ಗೌರವಿಸಬೇಕು ಎಂದು ಹೇಳುತ್ತಿದ್ದವನು ಭಾವನೆಗಳ ಬೆಲೆಯೇ ಅರಿಯದವನಾಗಿರುತ್ತಾನೆ. ಶಾಂತಿಯ ಪರಿಚಯವಾದಾಗ ಹೆಂಗಸರ ಬಗ್ಗೆ ಅಪಾರ ಕಾಳಜಿ ಇರುವಂತೆ ಮಾತನಾಡಿ ಶಾಂತಿಯಿಂದ ಸಂಪೂರ್ಣ ದೇಹ ಸುಖ ಅನುಭವಿಸುತ್ತಾನೆ. ಮದುವೆಯಾಗುವ ಭರವಸೆ ನೀಡಿ ಸ್ತ್ರೀ ಸ್ವಾತಂತ್ರ್ಯದ ಮಾತುಗಳನ್ನಾಡುತ್ತಿದ್ದವನು ಶಾಂತಿಯ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುತ್ತಾ ಬರುತ್ತಾನೆ. ಇವೆಲ್ಲವನ್ನು ಶಾಂತಿ ಮೌನವಾಗಿ ಸಹಿಸಿಕೊಳ್ಳುತ್ತಾಳೆ. ಧರ್ಮ ಬದಲಾವಣೆ ಬಂದಾಗ ಸಹಿಸಿಕೊಳ್ಳುವುದಿಲ್ಲ.

ಮೂಲತಃ ಹಿಂದೂ ಆಗಿದ್ದ ಜಾನ್ ಅಶೋಕ್‌ಕುಮಾರ್ ಕ್ರೈಸ್ತ ಧರ್ಮಕ್ಕೆ ಮತಾಂತರನಾಗಿರುತ್ತಾನೆ. ಮದುವೆ ಕೇವಲ ನಾಲ್ಕು ದಿನವಿರುವಾಗ ಶಾಂತಿಯನ್ನು ಮತಾಂತರಳಾಗುವಂತೆ ಹೇಳಿ, ಕೊಡುವ ಕಾರಣ ಅಪ್ರಸ್ತುತವೆನಿಸುತ್ತದೆ. ದೇಹ, ಮನಸ್ಸು ಒಂದಾಗುವಾಗ ಅವಶ್ಯವಿಲ್ಲದ ಧರ್ಮ ಬದಲಾವಣೆಗೆ ಜಾನ್ ಹೇಳುವುದು. ಇದೆಲ್ಲ ಬರೀ Formatity. ನೀನು ನನ್ನನ್ನು ಕೂಡಿದ್ಮೇಲೆ ನನ್ನ ಧರ್ಮವೇ ನಿನ್ನದೂ ಅಲ್ಲವೆ? ಈಗ

ಮಾಡೋದು ಬರೀ ವಿಧಿ, ಅಷ್ಟೇ. ಮುಂದೆ ನಮ್ಮ ಮಕ್ಕಳನ್ನು ಸಮಾಜ outcastes ಥರಾ ಟ್ರೀಟ್ ಮಾಡ್ಬಾರದಲ್ಲ? ಏನಂತೀಯ?"[೩೫] ಎಂದು ಸಮಾಜ ಕೆಳಜಾತಿಯ 'ಸ್ತ್ರೀ'ಯನ್ನು 'ಕಾಮ'ಕ್ಕಾಗಿ ಸೀಮಿತಗೊಳಿಸಿರುವಂತೆ ಮತ್ತು ಧರ್ಮ ಪ್ರತಿಷ್ಠೆಯಿಂದ ತನ್ನತನದ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವುದಕ್ಕಾಗಿ ಧರ್ಮ ಬದಲಾವಣೆ ಮಾಡಿಕೊಳ್ಳುವಂತೆ ಅಧಿಕಾರ ಚಲಾಯಿಸುವುದು ಅಸಮಾನತೆಯನ್ನು ತೋರಿಸುತ್ತದೆ. ಅದನ್ನು ಜಾನ್ ಅಶೋಕ್‌ಕುಮಾರ್‌ನ ಮಾತುಗಳಿಂದಲೆ ಅರ್ಥೈಸಿಕೊಳ್ಳಬಹುದು. "ಎಲ್ಲೋ ಭಿಕಾರಿ ಹಾಗೆ ಬಿದ್ದೋಳನ್ನ ಮನೇಗೆ ಕರ್‍ಕೊಂಡ್ಬಂದು ಒಳ್ಳೊಳ್ಳೇ ತಿನಿಸು ಕೊಟ್ಟೆ, ಬಟ್ಟೆ ಕೊಟ್ಟೆ, ಒಡವೆ ಕೊಟ್ಟೆ, ಜೊತೆಗೆ ಮಲಗಿಸಿಕೊಂಡೆ, ಸಾಲದು ಅಂತ ಮದ್ವೆ ಬೇರೆ ಆಗ್ತೀನಿಂತ ಯಾವ್ದೋ ಹಾಳು ಗಳಿಗೇಲಿ ಮಾತುಕೊಟ್ಟೆ. ಇವಳಿಗೆ–ಇವಳಿಗೆ ನನ್ನ ಧರ್ಮದಲ್ಲಿ ನಂಬ್ಕೆ ಇಲ್ವಂತೆ, ಹಲ್ಕಾ ಮುಂಡೆ"[೩೬] ಎಂದು ಒಂದು ಹೆಣ್ಣಿನ ಅಂತರಂಗಕ್ಕೆ ಬೆಲೆಯೇ ಇಲ್ಲದಂತೆ ಅವಾಚ್ಯ ಶಬ್ದಗಳಿಂದ ನಿಂದಿಸುವುದು ಪುರುಷರ ದರ್ಪವನ್ನು ತೋರಿಸುತ್ತದೆ.

ಜಾನ್ ಅಶೋಕ್‌ಕುಮಾರ್ ತನ್ನ ಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿದ ಶಾಂತಿಯಲ್ಲಿ ಸ್ತ್ರೀ ಸ್ವಾತಂತ್ರ್ಯದ ಮಾತುಗಳನ್ನಾಡಿ ಅವಳ ಮನಸ್ಸನ್ನು ಗೆದ್ದು ಆಕೆಗೆ ಮದುವೆಯ ಭರವಸೆಯನ್ನೂ ನೀಡಿ ತನ್ನ ಕಾಮತೃಷೆ ಈಡೇರಿಸಿಕೊಳ್ಳಲು ಮನೆಯಲ್ಲಿಟ್ಟುಕೊಂಡು ಕೊನೆಗೆ 'ಗತಿಯಿಲ್ಲದವಳಿಗೆ ಆಶ್ರಯದಾತನೆಂಬಂತೆ' ಆಡುವ ಮಾತುಗಳು ಪುರುಷ ರಾಜಕಾರಣದಲ್ಲಿ ಹೆಣ್ಣನ್ನು ಮನಬಂದಂತೆ ಬಳಸಿಕೊಳ್ಳುವುದನ್ನು ಕಾಣುತ್ತೇವೆ. ವಿವಾಹವಾಗುವ ಮಾತ್ರಕ್ಕೆ ಇಷ್ಟವಿಲ್ಲದ ಧರ್ಮ ಬದಲಾವಣೆಗೆ ಒತ್ತಾಯಿಸುವುದು ಸಮಾಜದಲ್ಲಿನ ಸ್ತ್ರೀ–ಪುರುಷರ ಅಸಮಾನತೆ ಎದ್ದು ಕಾಣುತ್ತದೆ. ತಾನು ಮದುವೆಯಾಗುವವಳು ತನ್ನ ಧರ್ಮದವಳಾಗಿರಬೇಕೆಂದು ಬಯಸುತ್ತಾನೆಯೇ ಹೊರತು ಮನುಷ್ಯ ಧರ್ಮದಿಂದ ಜೀವನ ಸಾಗಿಸುವತ್ತ ಮನಸ್ಸು ಮಾಡುವುದಿಲ್ಲ. ಇಂತಹ ಅಸಮಾನ ನೆಲೆಯಲ್ಲಿ ಸ್ತ್ರೀ ನಿಂತಿರುವುದು ವಾಸ್ತವದಲ್ಲೂ ಅಸ್ತಿತ್ವದಲ್ಲಿದೆ. 'ದೇವನೊಬ್ಬ ನಾಮ ಹಲವು' ಎಂಬ ಮಾತನ್ನು ಮೀರಿ ಆಕೆಗೆ ಇಷ್ಟವಿರಲಿ, ಇಲ್ಲದಿರಲಿ ಪುರುಷನ ಇಚ್ಛೆಗನುಗುಣವಾಗಿ ನಡೆದುಕೊಳ್ಳದಿದ್ದರೆ, ಜಾನ್‌ನಂತಹ ನಿಂದನೆಯ ಮಾತುಗಳಿಗೆ ಒಳಗಾಗಿ ದೂರ ಉಳಿಯುವಂತಹ ಸ್ಥಿತಿ ಕಂಡುಬರುತ್ತದೆ. ಧರ್ಮದ ಹೆಸರಿನಿಂದಲೂ ಹೆಣ್ಣು ಸಂಕಷ್ಟಕ್ಕೆ ಒಳಗಾಗುತ್ತಾಳೆ.

ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯಲ್ಲಿ ಅವಿದ್ಯಾವಂತರಾದ ಪಾರ್ತಕ್ಕ, ಗೌರಮ್ಮನಂತಹವರು ಜಾತಿ ಪರಿಪಾಲಕರಾಗಿ ಕಂಡುಬರುತ್ತಾರೆ. ಗೌರಮ್ಮ, ಪಾರ್ತಕ್ಕರವರು ಬೇರೆಯವರನ್ನು ಶೋಷಿಸಿಕೊಂಡು ತಮಗೇ ಅರಿವಿಲ್ಲದಂತೆ ತಮ್ಮನ್ನು ಶೋಷಿಸಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಕುಟುಂಬ ಕಾಯ್ದುಕೊಳ್ಳುವ ಜವಾಬ್ದಾರಿಯಲ್ಲಿ

ಸ್ತ್ರೀಯರ ಪಾತ್ರ ಎಷ್ಟಿದೆಯೊ ಪುರುಷರ ಪಾತ್ರವೂ ಅಷ್ಟೇ ಇರುತ್ತದೆ. ಪುರುಷರೆನಿಸಿಕೊಂಡ ಮಹಾನುಭಾವರು ಕುಟುಂಬದ ಮಾನ, ರಕ್ಷಣೆಯ ಜವಾಬ್ದಾರಿಯನ್ನು ಹೆಣ್ಣಿನ ಮೇಲೆ ಹೇರಿ ಜವಾಬ್ದಾರಿರಹಿತರಾಗಿದ್ದಾರೆ. ಒಳ್ಳೆಯ ಹೆಸರು ಬಂದರೆ ತಾನು ಆ ಮನೆಯ ಯಜಮಾನ ಎಂದು ಬೀಗುತ್ತಾ ಕೆಟ್ಟ ಹೆಸರು ಬಂದರೆ 'ಎಲ್ಲಾ ಇವಳಿಂದ' ಎಂದು ಹೆಣ್ಣನ್ನು ದೂಷಿಸುವ ಪುರುಷರ ಒಂದು ವ್ಯವಸ್ಥೆ ಸಮಾಜದಲ್ಲಿದೆ. ಪಾರ್ತಕ್ಕ ತನ್ನ ಮಗ ಭಾಸ್ಕರ ಕೆಳಜಾತಿಯ ಹೆಣ್ಣನ್ನು ಮದುವೆಯಾಗಿರುವುದರಿಂದ ಸಮಾಜದ ದೃಷ್ಟಿಯಲ್ಲಿ ತನ್ನನ್ನು ಕೀಳಾಗಿ ಕಾಣುತ್ತಾರೆಂದು ಸೊಸೆಯನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾಳೆ. ಕೆಳಜಾತಿಯ ಹೆಣ್ಣನ್ನು ಮನೆಗೆ ಕರೆತಂದರೆ ಮನುಸ್ಮೃತಿಯಲ್ಲಿ ಹೇಳಿರುವ 'ಸಂಸ್ಕಾರಗಳಿಲ್ಲದ ಕುಟುಂಬಗಳಿಂದ ಕನ್ಯೆಯರನ್ನು ತರಕೂಡದೆಂಬ' ಮಾತನ್ನು ಪಾಲಿಸುತ್ತಿರುವ ನಮ್ಮ ಪುರುಷಪ್ರಧಾನ ವ್ಯವಸ್ಥೆಯು ನಮ್ಮ ಮನೆಯ ಹೆಣ್ಣನ್ನು ಮದುವೆಯಾಗಲು ಮುಂದೆ ಬರುವುದಿಲ್ಲವೆಂಬ ಮನೋವೇದನೆಗೆ ಒಳಗಾಗಿರುತ್ತಾರೆ.

ಇವರ ಈ ನಿಷ್ಠುರತೆಗೆ ಪುರುಷ ಪ್ರಧಾನ ಸಮಾಜದ ಮನಸ್ಥಿತಿಗಳೆ ಕಾರಣವಾಗಿವೆ. ಬದಲಾವಣೆಯನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸದ ಮನಸ್ಸುಗಳು ಇರುವುದರಿಂದಲೆ ಹೆಣ್ಣು ಹೆತ್ತವರು ನಲುಗಬೇಕಿದೆ. ಪ್ರತಿಯೊಂದು ಮನೆಯು 'ಮನೆ ಮಗಳನ್ನು' ಒಳ್ಳೆಯ ಮನೆ ಸೇರಿಸಬೇಕೆಂಬ ಆಸೆ–ಕನಸು ಹೊತ್ತಿರುತ್ತದೆ. ಹೆಣ್ಣು ಕೇಳಲು ಬಂದವರು, ಹೆಣ್ಣಿನ ಗುಣಾವಗುಣಗಳಿಗಿಂತಲು ಮನೆತನದ ಮೇಲೆ ಅಧಿಕಾರ ಚಲಾಯಿಸುತ್ತಾರೆ. ಈ ಕಾರಣದಿಂದ ಹೆಣ್ಣು ಹೆತ್ತವರು ಭಯ–ಭಕ್ತಿಯಿಂದ ಬಾಳಬೇಕಿದೆ. ಇಲ್ಲವಾದರೆ ಸ್ವಲ್ಪದರಲ್ಲಿ ಹೆಚ್ಚು–ಕಡಿಮೆಯಾದರು ಆ ಮನೆಯ ಹೆಣ್ಣನ್ನು ಮದುವೆಯಾಗದಿರುವುದನ್ನು ಕಾಣುತ್ತಿದ್ದೇವೆ. ಕೆಲವರು ಇಂತಹ ಮನೆತನವನ್ನು ಸದುಪಯೋಗಪಡಿಸಿಕೊಳ್ಳುವುದುಂಟು. ವರದಕ್ಷಿಣೆ ನೆಪ ಒಡ್ಡಿ ಅಲ್ಲಿಯು ಹೆಣ್ಣನ್ನು ಬೆಲೆ ನಿಗದಿಪಡಿಸುವಂತೆ ನಡೆದುಕೊಳ್ಳುತ್ತಾರೆ. ಇಂತಹ ವ್ಯವಸ್ಥೆಯನ್ನು ಅರಿತ್ತಿದ್ದರಿಂದಲೇ ಪಾರ್ತಕ್ಕ–ಗೌರಮ್ಮನವರ ಆಲೋಚನೆಗಳು ತಪ್ಪಾಗಿ ತೋರುವುದಿಲ್ಲ.

ಮಡಿಪದ್ಧತಿಗೆ ಹೆಣ್ಣನ್ನು ಒಳಗುಮಾಡುವಲ್ಲಿ ಸನಾತನ ಧರ್ಮದ ಪಾತ್ರವೇನೆಂಬುದನ್ನು ಎಂ.ಕೆ.ಇಂದಿರಾರವರ 'ಫಣಿಯಮ್ಮ' ಕಾದಂಬರಿಯಲ್ಲಿ ಕಂಡುಬರುತ್ತದೆ. ಹೆಣ್ಣಿಗೆ ಯಾವ ಸ್ಥಾನಮಾನವನ್ನು ನೀಡದೆ ಸನಾತನ ಧರ್ಮದ ಹೆಸರಿನಲ್ಲಿ ಕುರುಡು ಸಂಪ್ರದಾಯ, ಆಚರಣೆಗಳಿಂದ ಶೋಷಿಸಲಾಗುತ್ತಿದೆ. ಸಾಮಾನ್ಯ ಹೆಣ್ಣನ್ನು ಕೇವಲವಾಗಿ ನೋಡುತ್ತಾ ವಿಧವೆ ಹೆಣ್ಣನ್ನು ಹೀನಾಯವಾಗಿ ಕಾಣಲಾಗುತ್ತಿತ್ತು. ವಿಧವೆಯನ್ನು 'ಮಡಿ' ಪದ್ಧತಿಗೆ ದೂಡಿ ನಿಷ್ಠುರವಾಗಿ ನೋಡುತ್ತಿದ್ದರೆಂದು ಹಾಗೂ 'ಮಡಿ' ಆಚರಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದ್ದನ್ನು ಲೇಖಕಿ

ತಿಳಿಸಿದ್ದಾರೆ. ಸನಾತನ ಧರ್ಮದ ಎಲ್ಲೆಯನ್ನು ಮೀರಿ ಬಾಲವಿಧವೆ ಬಸುರಿಯಾದರೆ ಶೃಂಗೇರಿ ಮಠದ ಸ್ವಾಮೀಜಿಗಳಿಂದ ಬಹಿಷ್ಕಾರಕ್ಕೆ ಒಳಗಾಗುತ್ತಿದ್ದಳು ಎಂಬ ಅರಿವನ್ನು ಕಾದಂಬರಿಯ ಪ್ರಾರಂಭದಲ್ಲಿಯೆ ತಿಳಿಸಿದ್ದಾರೆ.

ಕನ್ಯೆಯಾಗಿದ್ದು ಬಾಲವಿಧವೆಯಾದ ಫಣಿಯಮ್ಮರಂತಹ ಹೆಣ್ಣಿಗೆ ಸನಾತನ ಧರ್ಮ ಯಾವ ತೀರ್ಮಾನಕ್ಕೆ ಬರುತ್ತದೆಂಬುದು ಬಿಂಬಿತವಾಗಿದೆ. ಧರ್ಮಕ್ಕೆ ಜೋತು ಬಿದ್ದದ್ದರಿಂದ ಶೃಂಗೇರಿ ಮೊರೆ ಹೋಗುವುದು ಅಂದಿನವರ ಸಂಪ್ರದಾಯವಾಗಿತ್ತು. ನಿಷ್ಕರುಣಿಕರಾದ ಸ್ವಾಮೀಜಿ "ಹುಡುಗಿ ಇನ್ನೂ ಕನ್ಯೆಯಾಗಿರುವುದರಿಂದ ಹನ್ನೊಂದನೇ ದಿನ ಸೌಮಂಗಲ್ಯದ ಚಿಹ್ನೆಗಳನೆಲ್ಲಾ ತೆಗೆದು ತಲೆಗೂದಲನ್ನು ಮಾತ್ರ ಹಾಗೇ ಬಿಟ್ಟಿರಬೇಕು ಮತ್ತು ಬಿಳಿಸೀರೆ ಉಡಿಸಿರಬೇಕು. ಮೈ ನೆರೆಯುವವರೆಗೂ ಯಾರಿಗೂ ಮುಖ ತೋರಿಸಕೂಡದು, ಯಾವ ಮಡಿ ಕೆಲಸವನ್ನೂ ಮಾಡಿಸಕೂಡದು, ಮೈನೆರೆದ ನಾಲ್ಕನೇ ದಿನವೇ ಶಿರಮುಂಡನ ಮಾಡಿಸಿ ಆಜನ್ಮ ಮಡಿ ಹಿಡಿಸಬೇಕು. ಇದರಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಇಡೀ ಮನೆತನಕ್ಕೆ ಬಹಿಷ್ಕಾರ"[೩೭] ಎಂಬ ಹೆಣ್ಣಿನ ಭಾವನೆಗಳೆಲ್ಲವನ್ನು ನಾಲ್ಕು ಗೋಡೆಗಳ ಮಧ್ಯೆ ಕಳೆಯುವಂತಹ ಪುರುಷಪ್ರಧಾನ ಸಮ್ಮತವಾದ ತೀರ್ಪನ್ನು ನೀಡುತ್ತಾರೆ. ಹೆಣ್ಣು ಆತಂಕ, ಭಯದಲ್ಲೆ ಬದುಕುವಂತಹ ಸ್ಥಿತಿಯಲ್ಲಿದ್ದಾಳೆ. ಆಕೆಯ ಬದುಕಿನ ಎಲ್ಲಾ ಸ್ತರಗಳನ್ನು ಧರ್ಮದ ಹಿನ್ನೆಲೆಯಲ್ಲಿ ಸೇರಿಸಿ ಚಾಚುತಪ್ಪದೆ ಪಾಲಿಸುತ್ತಾ ಬದುಕಬೇಕಿದೆ. ಹೊಸದಾಗಿ ಸೃಷ್ಟಿಯಾಗುವ ಸಮಸ್ಯೆಗಳಿಗು ಧರ್ಮದ ಹೆಸರಿನಲ್ಲಿ ಹಳೆಯ ಸಂಪ್ರದಾಯಗಳಿಗೆ ಸಂಬಂಧ ಕಲ್ಪಿಸಿ ಸ್ತ್ರೀ ನಿಷ್ಠುರವಾದ ಆಚರಣೆಗಳು ಸೃಷ್ಟಿಯಾಗುತ್ತಿವೆ. ಅದಕ್ಕೆ ಕನ್ಯೆಯಾಗಿದ್ದು ಬಾಲವಿಧವೆಯಾದ ಫಣಿಯಮ್ಮಳಿಗೆ ವಿಧಿಸುವ ತೀರ್ಪು ಸಾಕ್ಷಿಯಾಗುತ್ತದೆ.

ದೇವರು ನಮ್ಮನ್ನು ಭೂಮಿಗೆ ಕಳುಹಿಸಿದ್ದಾನೆ. ದೇವರಿಲ್ಲದೆ ಒಂದು ಹುಲ್ಲು ಕಡ್ಡಿಯು ಅಲುಗಾಡುವುದಿಲ್ಲ ಎಂದೇಳುವ ಮಂದಿ, ದೇವರಿಂದಲೆ ಗಂಡನನ್ನು ಕಳೆದುಕೊಂಡಿದ್ದಾಳೆಂದು ಆಕೆಯ ಮುಂದಿನ ಜೀವನದ ಬಗ್ಗೆ ಚಿಂತಿಸುವುದಿಲ್ಲ. ದೇವರ ಹೆಸರಿನಲ್ಲಿ ವಿಧವೆ ಎಂಬ ಪಟ್ಟಕಟ್ಟಿ ಹೀನಾಯವಾಗಿ ಕಾಣುತ್ತಾರೆ. ಇಸ್ಲಾಂ, ಕ್ರೈಸ್ತ ಧರ್ಮದಲ್ಲಿಲ್ಲದ ಈ ಆಚರಣೆ ಹಿಂದೂ ಧರ್ಮದಲ್ಲಿ ಅದರಲ್ಲು ಸನಾತನ ಧರ್ಮದಲ್ಲಿ ಘೋರವಾಗಿ ಆಚರಿಸುತ್ತಿರುವುದನ್ನು ಪ್ರೇಮಾಬಾಯಿ "ಅಮ್ಮ, ನೀವು ತಪ್ಪು ತಿಳೀಲಿಕ್ಕೆ ಸಾಕು ನಿಮ್ಮ ಬ್ರಾಹ್ಮಣರಂತೆ ಕಠಿಣ ಮನಸ್ಸು ನಮ್ಮ ಜನಕ್ಕೆ ಬರಲೀಕಿಲ್ಲ. ಅಷ್ಟು ಸಣ್ಣ ಪ್ರಾಯಕ್ಕೆ ತಲೆ ಬೋಳಿಸಿ ಬದುಕೆಲ್ಲ ಊಟ ಇಲ್ಲದೆ ಸಾಯಿಸೂದ. ನಮ್ಮಲ್ಲಿ ಹಿಂಗಿಲ್ಲಪ್ಪ. ಒಂದು ಗಂಡ ಸತ್ತರೆ ಮತ್ತೊಂದು ಗಂಡನ್ನ ಮಾಡಿಕೊಳ್ಳಲಿಕ್ಕೆ ಮಾಫಿ

ಉಂಟು ಇಂಥ ಸಾಧು ಜನಕ್ಕೆ ಹಿಂಗ ಸಂಕಟ ಕೊಡೂದ?”[೩೮] ಎಂದು ಹೇಳುತ್ತಾಳೆ. ಉತ್ತಮವಾದ ಜಾತಿ ಎಂದೇಳುವಷ್ಟು ಹೆಣ್ಣಿನ ಶೋಷಣೆಗಳು ನಿಕೃಷ್ಟವಾಗಿರುವಂತೆ ಪ್ರೇಮಾಬಾಯಿ ಮಾತುಗಳಿಂದ ತಿಳಿಯುತ್ತವೆ. ಇಂಥ ಪ್ರಸಂಗಗಳನ್ನು ಪಾತ್ರಗಳ ನಿರೂಪಣೆ ಮೂಲಕ ಲೇಖಕ, ವಾಸ್ತವ ಜಗತ್ತಿಗೆ ಹತ್ತಿರವಾದ ಸಂಗತಿಗಳನ್ನು ನಿರೂಪಿಸಿದ್ದಾರೆ.

ಸಮಾಜ ಎಷ್ಟೇ ಮುಂದುವರೆಯುತ್ತಿದ್ದರು ಹೆಣ್ಣನ್ನು ನೋಡುವ ದೃಷ್ಟಿಕೋನಗಳಲ್ಲಿ ಬದಲಾವಣೆ ಎಂಬುದು ತೀರಾ ಮಂದಗತಿಯಾಗಿ ಸಾಗುತ್ತಿದೆ. ಇದು ಜಾತಿ ಧರ್ಮಗಳಲ್ಲಿರುವ ಪೈಪೋಟಿಗಳನ್ನು ತೋರಿಸುತ್ತದೆ. ಜಾತಿ, ಧರ್ಮ ಅಭಿಮಾನದ ಹೆಸರಿನಲ್ಲಿ ಮನುಷ್ಯತ್ವವನ್ನು ಕಳೆದುಕೊಳ್ಳುತ್ತಿರುವುದಾಗಿದೆ. ಇಂತಹವರ ನಡುವೆ ಸಿಲುಕಿಕೊಂಡಿರುವವಳು ಹೆಣ್ಣು. ಪುರುಷರು ಅನ್ಯಧರ್ಮ, ಅನ್ಯಜಾತಿ ಸೇರಲಿ, ಮದುವೆಯಾಗಲಿ ತಲೆಯೆತ್ತಿ ನಡೆಯುವ ಸ್ವಾತಂತ್ರ್ಯವಿದೆ. ಹೆಣ್ಣಿಗಿಂತ ವಿನಾಯಿತಿ ಪಡೆದಿರುತ್ತಾರೆ. ಅದೇ ಹೆಣ್ಣು ನಿರ್ಗತಿಕಳಾದರು ಧರ್ಮವನ್ನು ಮೀರಬಾರದು. ಮೀರಿದರೆ ಆಪಾದನೆಗೆ ಸಿಲುಕಿಕೊಳ್ಳುತ್ತಾಳೆ. ಅಂಥಹದೊಂದು ಕಥೆಯನ್ನು ಸ.ಉಷಾರವರ ‘ಕಸೂತಿ’ ಕಾದಂಬರಿಯಲ್ಲಿ ಕಾಣಬಹುದು. ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಮೀರಾ ಎರಡನೆ ವರ್ಷ ಎಂ.ಬಿ.ಬಿ.ಎಸ್ ಓದುತ್ತಿರುತ್ತಾಳೆ. ಕಾರು ಅಪಘಾತದಲ್ಲಿ ಈಕೆಯ ತಂದೆ–ತಾಯಿ ಮರಣ ಹೊಂದುತ್ತಾರೆ. ಈ ಸಂದರ್ಭದಲ್ಲಿ ಮೀರಾ ಬೀದಿ ಪಾಲಾಗುತ್ತಾಳೆ. ಯಾವ ಬಂಧು ಬಳಗದವರು ಇವಳಿಗೆ ಸಹಾಯ ಮಾಡಲಿಲ್ಲ. ಅನ್ಯಮಾರ್ಗವಿಲ್ಲದೆ ಮೀರಾ ಹಸಿವು ಮತ್ತು ಓದಿಗಾಗಿ ಪ್ರೊಫೆಸರ್ ಒಬ್ಬರ ಸಹಾಯದಿಂದ ಕ್ರಿಶ್ಚಿಯನ್ ಹಾಸ್ಟೆಲ್ ಸೇರಿದಳು. ನೆಂಟರು, ನೆಂಟರಲ್ಲದವರೆಲ್ಲ ಬ್ರಾಹ್ಮಣ ಹುಡುಗಿ ಕ್ರಿಶ್ಚಿಯನ್ ಹಾಸ್ಟೆಲ್‌ನಲ್ಲಿರುವುದರ ವಿರುದ್ಧ ಪ್ರತಿಭಟಿಸುತ್ತಾರೆ. ಇವರಿಬ್ಬರ ನಡುವೆ ಅನೈತಿಕ ಸಂಬಂಧ ಇರುವುದಾಗಿ ಕಲ್ಪಿಸುತ್ತಾರೆ. ಜನರ ಬಾಯಿ ಮುಚ್ಚಲು ಮೀರಾ ಹತ್ತು ವರ್ಷ ಹಿರಿಯವರಾಗಿದ್ದ ಪ್ರೊಫೆಸರ್‌ರವರನ್ನು ಮದುವೆಯಾಗುತ್ತಾಳೆ. ಇದು ಸಂಪ್ರದಾಯ ನಂಬಿಕೆಗಳನ್ನು ಒಡೆದು ಬದುಕುವುದೆ ಆದರೂ ಒಂದು ಹೆಣ್ಣು ಬೀದಿ ಪಾಲಾಗಿ ಇತರರ ಸ್ವತ್ತಾಗಿ ಬದುಕಿದರು ಅನ್ಯ ಧರ್ಮಗಳ ರಕ್ಷಣೆಯಲ್ಲಿದ್ದವರನ್ನು ಶೋಷಿಸುವ ಪರಿ ಕಂಡುಬರುತ್ತದೆ. ಪರಿಸ್ಥಿತಿಯ ಕೈಗೊಂಬೆಯಾಗಿ ಮೀರಾ ಮದುವೆಯಾಗುವುದು ನೋವು ತರುವ ಸಂಗತಿಯಾಗಿದೆ.

### ೩.೩ ಆರ್ಥಿಕ ನೆಲೆ

ಸಮಾಜದ ವ್ಯವಸ್ಥೆಯೊಳಗೆ ಜನಸಮುದಾಯ ‘ಸ್ತ್ರೀ’ ಗೃಹಿಣಿಯಾಗಿ ಬಾಳಬೇಕೆಂದೆ ಬಯಸುತ್ತದೆ. ಮನೆ, ಸಂಸಾರ, ಮಕ್ಕಳು ಎಂಬ ಚೌಕಟ್ಟಿನೊಳಗೆ ಬದುಕಬೇಕೆಂದು ಅವಳನ್ನು

ಬಂಧಿಸಿದೆ. ಆ ಚೌಕಟ್ಟಿನೊಳಗೆ ಬದುಕುತ್ತಿರುವ ಹೆಣ್ಣಿನ ದುಡಿಮೆಗೆ ಮಾತ್ರ ಬೆಲೆ ಇಲ್ಲದಂತೆ ಕಾಣುತ್ತದೆ. 'ಗಂಡಸು ದುಡಿದು ಹಾಕುತ್ತಾನೆ, ಹೆಣ್ಣು ಮನೇಲಿ ಕೂತು ತಿನ್ನುತ್ತಾಳೆ' ಎಂಬ ಸಾಂಪ್ರದಾಯಿಕ ನಂಬಿಕೆಗಳಿಂದ ಆಕೆಯನ್ನು ಬಂಧಿಸಲಾಗಿದೆ. ಆದಾಯ ತರುವ ಪುರುಷನಿಗಿರುವ ಬೆಲೆ, ಅಧಿಕಾರ; ಆದಾಯರಹಿತ ದುಡಿಮೆ ಮಾಡುವ ಹೆಣ್ಣಿಗೆ ಯಾವ ಸ್ಥಾನಮಾನವು ಇಲ್ಲವಾಗಿದೆ.  ಎಂಟು, ಒಂಭತ್ತು ಗಂಟೆಗಳ ಕಾಲ ದುಡಿಯುವ ಪುರುಷರ ದರ್ಪ ಇಪ್ಪತ್ನಾಲ್ಕು ಗಂಟೆಗಳ ಕಾಲ ದುಡಿಯುವ ಹೆಣ್ಣನ್ನು ಶೋಷಿಸುತ್ತಲೆ ಬಂದಿದೆ.

ಕೃಷಿಕರ್ತೃಳಾದ ಹೆಣ್ಣು ಯಾವ ಕಾಲದಲ್ಲು ಸುಮ್ಮನೆ ಕೂತವಳಲ್ಲ. ಪುರುಷನ ಸರಿಸಮಾನವಾಗಿ ಬೇಟೆಯಾಡುತ್ತಿದ್ದವಳು. ಕಾಲಕ್ರಮೇಣ ಜೈವಿಕವಾದ ವಿಭಿನ್ನತೆಗಳಿಂದ ನಾಲ್ಕು ಗೋಡೆಯೊಳಗೆ ಆಕೆ ಸೀಮಿತವಾಗಿಬಿಟ್ಟಳು.  ಮನೆಯ ಕೆಲಸಗಳು, ಮಕ್ಕಳ ಲಾಲನೆ-ಪಾಲನೆ, ಹಿರಿಯರ ಪೋಷಣೆಯಲ್ಲೆ ಕಾಲ ಉರುಳಿದರು ಅವುಗಳನ್ನು ನಿಭಾಯಿಸುವ ಹೆಣ್ಣಿಗೆ ದೊರೆತ ಪಟ್ಟ 'ಗೃಹಿಣಿ', 'ಪರಾಧೀನಳು' ಎಂದೆ. ಕಾರಣವಿಷ್ಟೆ. ಮನೆಗೆಲಸವನ್ನು ದುಡಿಮೆ ಎಂದು ಪರಿಗಣಿಸದಿರುವುದು ಆ ದುಡಿಮೆಗೆ ಸಂಭಾವನೆ ಇಲ್ಲದಿರುವುದು.

ಪುರುಷರ ಬೇಜವಾಬ್ದಾರಿತನ, ಆದಾಯರಹಿತ ಕುಟುಂಬದ ಜವಾಬ್ದಾರಿತನ ಅಥವಾ ಸ್ವಾವಲಂಬಿ ಜೀವನದ ಹಂಬಲದಿಂದ ಮಹಿಳೆ ಹೊರಹೋಗಿ ದುಡಿಯುವ ನಿರ್ಧಾರಕ್ಕೆ ಬಂದು ಅಸಮಾನತೆಯ ಸುಳಿಯೊಳಗೆ ಸಿಲುಕಿದ್ದಾಳೆ. ಶ್ರಮವಿಭಜನಾಧಾರಿತ ವೃತ್ತಿಗಳು, ವೇತನ ತಾರತಮ್ಯ, ಕಛೇರಿಗಳಲ್ಲಿ ಪುರುಷರ ದೌರ್ಜನ್ಯ, ಹೊರ-ಒಳ ವೃತ್ತಿಯಿಂದ ದೈಹಿಕ-ಮಾನಸಿಕ ಹಿಂಸೆಗೆ ಒಳಪಟ್ಟಿದ್ದಾಳೆ. ಮತ್ತೊಂದೆಡೆ ಆರ್ಥಿಕವಾಗಿ ಅವಳ ಸ್ವಾವಲಂಬಿ ಜೀವನಕ್ಕೆ ತಡೆಗೋಡೆಯಾಗಿ ನಿಂತಿರುವಂತಹ ಲಿಂಗ ಅಸಮಾನತೆಗಳು ಸಮಾಜದಲ್ಲಿ ತಾಂಡವವಾಡುತ್ತಿವೆ.

ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಅನೇಕ ಹೆಣ್ಣುಮಕ್ಕಳು ಬಡ ಹಾಗೂ ಮಧ್ಯಮ ಕುಟುಂಬದಲ್ಲಿ ಕಂಡುಬರುತ್ತಾರೆ. ಕುಟುಂಬದ ನೊಗವನ್ನು ಹೊತ್ತಿರುವಾಕೆ ಪುರುಷಷಾಹಿ ಸಮಾಜದ ಕಪಿಮುಷ್ಠಿಗೆ ಸಿಲುಕಿ ನಲುಗುತ್ತಿದ್ದಾಳೆ. ಹಣಕ್ಕಾಗಿ ಹೆಣ್ಣನ್ನು ತಮ್ಮ ಸ್ವಾರ್ಥಗಳಿಗೆ ಬಳಸಿಕೊಳ್ಳುವ ಗಂಡಸರ ಅಕ್ರಮದ ಬಲೆಯಲ್ಲಿ ತಾಯಿ, ಹೆಂಡತಿ, ಮಗಳು ಯಾವ ಸಂಬಂಧವನ್ನು ಲೆಕ್ಕಿಸದೆ ಆಕೆಯ ಜೀವನವನ್ನೆ ನಾಶ ಮಾಡುವುದನ್ನು ಸಾರಾ.ಅಬೂಬಕ್ಕರ್‌ರವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ ಹೇಳುತ್ತದೆ. ಬಡಮುಸ್ಲಿಂನಾದ ಮಹಮ್ಮದ್‌ಖಾನ್‌ನ ಕುಟುಂಬ ಬೀಡಿ ಕಟ್ಟಿ ಜೀವನ ಸಾಗಿಸಬೇಕಾಗಿತ್ತು. ಮೊದಲ ಮಗಳ ಮದುವೆ ನಂತರ ಎರಡನೇ ಮಗಳು ಕಟ್ಟಿದ ಬೀಡಿಯಿಂದ ಕುಟುಂಬದ ನಿರ್ವಹಣೆ ನಡೆಯುತ್ತಿತ್ತು. ಎರಡನೇ ಮಗಳ ಮದುವೆ

ನಿಶ್ಚಯವಾದ ಮೇಲೆ ಮದುವೆಗಾಗಿ ಮೊದಲ ಅಳಿಯನಿಂದ ಹಣ ಸಿಗದಿರುವುದನ್ನೆ ನೆವ ಒಡ್ಡಿ ಆತನಿಂದ ಮಗಳನ್ನು ದೂರ ಮಾಡುತ್ತಾನೆ. ನಾದಿರಾಳನ್ನು ಬೀಡಿ ಕಟ್ಟುವ ಉದ್ಯೋಗಕ್ಕೆ ತಳ್ಳಿ ಅವಳನ್ನು ಬಂಡವಾಳವನ್ನಾಗಿ ಬಳಸಿಕೊಳ್ಳುತ್ತಾನೆ. ಸ್ವ ಪ್ರತಿಷ್ಠೆಯಿಂದ ಮೆರೆದಾಡುವ ಖಾನ್‌ನಿಗೆ ಮಗಳ ಒಂಟಿತನದ ರೋಧನ, ಮಗುವನ್ನು ಅಗಲಿದ ತಾಯ್ತನದ ವೇದನೆ ಅರಿವಾಗುತ್ತಿದ್ದರು ನಾದಿರಾಳಿಂದ ಬರುತ್ತಿದ್ದ ಆದಾಯವನ್ನು ಕಳೆದುಕೊಳ್ಳಲು ಇಷ್ಟಪಡುತ್ತಿರಲಿಲ್ಲ. ಬೇಕಿದ್ದರೆ ರಶೀದ್‌ನೆ ಕರೆದುಕೊಂಡು ಹೋಗಲಿ ಎನ್ನುವ ದರ್ಪ ಪ್ರದರ್ಶಿಸುತ್ತಾ ಅಲ್ಲಿವರೆಗೆ ಮಗಳು ತಮ್ಮ ಕಷ್ಟಗಳಿಗೆ ನೆರವಾಗಲಿ ಎಂಬುದಾಗಿದೆ.

ತಂದೆಯ ಮನಸ್ಥಿತಿ ಅರಿತುಕೊಂಡ ನಾದಿರಾ “ತಂದೆ ಎಂದೂ ತನ್ನನ್ನು ಕಳುಹಿಸಲಾರರು. ಕಳಿಸಿದರೆ ಇಲ್ಲಿ ಬೀಡಿ ಕಟ್ಟುವರಾರು? ಬೀಡಿ ಕಟ್ಟದೆ ಹೋದರೆ ಆ ಆದಾಯವಿಲ್ಲದೆ ಹೋದರೆ ತಂದೆಯ ಬದುಕು ಕಷ್ಟವಾಗುತ್ತದೆ”[೩೯] ಎಂದುಕೊಂಡು ತಂದೆಯ ಆಜ್ಞೆಯನ್ನು ಮೀರದೆ ತನ್ನ ಅಂತರಂಗದಲ್ಲಿ ಬಚ್ಚಿಟ್ಟ ಮಾನಸಿಕ ತುಮುಲಗಳೊಡನೆ ಒದ್ದಾಡುತ್ತಿರುತ್ತಾಳೆ. ಮಗಳು ತಂದೆಯನ್ನು ಅರಿತು ಸಹಾಯಕಳಾಗಿ ನಡೆದುಕೊಂಡರೆ, ಮಗಳ ಆಂತರ್ಯ ಅರಿಯದ ತಂದೆ ತಮ್ಮ ಆರ್ಥಿಕ ಭದ್ರತೆಗಾಗಿ ತನ್ನ ವಯಸ್ಸಿನವನಾದ ಸಲೀಂನೊಂದಿಗೆ ಮರುಮದುವೆ ಮಾಡುವ ಯೋಚನೆ ಮಾಡುತ್ತಾನೆ. ಶ್ರೀಮಂತನಾದ ಸಲೀಂ ‘ತಮ್ಮ ಸಂಸಾರಕ್ಕೆ ನೆರವಾಗುತ್ತಾನೆ’ ಎಂದು ಮಗಳ ಮೇಲೆ ಮದುವೆಯಾಗುವಂತಹ ಒತ್ತಾಯ ಹೇರುವಲ್ಲಿ ಮಹಮ್ಮದ್‌ಖಾನ್‌ನ ಸ್ವಾರ್ಥತೆ ಕಾಣುತ್ತದೆ. ಇವನ ಈ ರೀತಿಯ ಆಲೋಚನೆಗಳಿಗೆ ಬಡತನ ಕಾರಣವಾದರು ಅದರ ಸುಳಿಯಲ್ಲಿ ಸಿಲುಕುವವಳು ಹೆಣ್ಣಾಗಿರುತ್ತಾಳೆ.

ನಾದಿರಾಳನ್ನು ಆದಾಯದ ಮೂಲಕ್ಕಾಗಿ ಬಳಸಿಕೊಳ್ಳುವ ಮಹಮ್ಮದ್‌ಖಾನ್‌ನ ದಬ್ಬಾಳಿಕೆ ಅತಿರೇಕವೆನಿಸುತ್ತದೆ. ಮಗಳ ಮನಸ್ಸಿನ ಹೊಯ್ದಾಟಗಳನ್ನು ಅರಿಯದೆ ಹದಿನೇಳರ ಹರೆಯದ ಹೆಣ್ಣನ್ನು ತನ್ನ ವಯಸ್ಸಿನವನೊಂದಿಗೆ ಮದುವೆ ಮಾಡುವ ನಿರ್ಧಾರ ಅತಿಮಾನುಷವಾಗಿದೆ. ಮಗಳ ಸುಖ–ಸಂತೋಷವನ್ನು ಲೆಕ್ಕಿಸದೆ ಆಕೆಯ ಅಭಿಪ್ರಾಯಕ್ಕೂ ಮಾನ್ಯತೆ ಕೊಡದೆ ತಮ್ಮ ನೆಲೆಯನ್ನು ಗಟ್ಟಿಮಾಡಿಕೊಳ್ಳುವಂತಹ ಯೋಚನೆಯಿಂದ ಸಿಕ್ಕಿದ್ದು ಮಾತ್ರ ಮಗಳ ಶವ.

ಮಧ್ಯಮ ವರ್ಗದ ಮುಸ್ಲಿಂ ಸಮುದಾಯದ ಸಣ್ಣಪುಟ್ಟ ಗೃಹಾಧಾರಿತ ಉದ್ಯೋಗಗಳನ್ನು ಮಾಡುವ ಸ್ವಾತಂತ್ರ್ಯವಿರುತ್ತಾದರು ಹಿಂದೂ ಧರ್ಮದಲ್ಲಿ ‘ಸ್ತ್ರೀ’ ಹೊರಹೋಗಿ ದುಡಿಯುವುದನ್ನು ಸಹಿಸುವುದಿಲ್ಲ. ಅವಳ ಸ್ಥಾನ ಪುರುಷನ ಅಧೀನತೆಗೆ ಪ್ರಾಮುಖ್ಯತೆಕೊಡುತ್ತದೆ. ಅವಿವಾಹಿತ ಹೆಣ್ಣನ್ನು ಹದ್ದಿನ ಕಣ್ಣಿನಂತೆ ಕಾಯ್ದುಕೊಳ್ಳುವ ಸಮಾಜ ಅವಳು ಕೂತರು, ನಿಂತರು,

ಅನುಮಾನಾಸ್ಪದವಾಗಿ ಕಾಣುತ್ತದೆ. ಅದರಲ್ಲು ಓದಿದ ಹೆಣ್ಣುಮಕ್ಕಳು ಹೊರಹೋದರೆ, ಒಳಬರುವುದನ್ನೆ ಕಾಯುವಂತಹ ಮನಃಸ್ಥಿತಿ ನಮ್ಮ ಸಮುದಾಯದಲ್ಲಿ ಬೇರೂರಿದೆ. ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯ ಸರೋಜಳಲ್ಲಿ ಈ ರೀತಿಯ ಆಲೋಚನೆ ಕುಟುಂಬದವರಿಂದ ಕೆಲಸಕ್ಕೆ ಹೋಗುವ ಆಸೆ ಕಮರಿಹೋಗುತ್ತದೆ.

ಕಾಲೇಜು ಶಿಕ್ಷಣ ಮುಗಿಸಿದ ಸರೋಜಳಿಗೆ 'ಗೃಹಿಣಿಗೆ ಇರಬೇಕಾದ ಗುಣಗಳನ್ನು ಬೆಳೆಸಲು ಮನೆಯಲ್ಲಿಯೇ ಪೂರ್ವಸಿದ್ಧತಾ ಶಿಕ್ಷಣ ಪ್ರಾರಂಭವಾಗುತ್ತದೆ. ಈ ನೆಲೆಯಲ್ಲಿಯೇ ಯೋಚಿಸುವವರ ಉದ್ದೇಶ 'ಗಂಡನ ಮನೆಯವರು ತವರು ಮನೆಯನ್ನು ನಿಂದಿಸದಿರಲೆಂದು'. ಮನೆಕೆಲಸ ಕಲಿತರೆ ಸಾಕೆಂಬಂತೆ ಯೋಚಿಸುವವರು, ಹೊರಹೋಗಿ ದುಡಿಯುವವಳು ನಮ್ಮ ಕೈಗೆ ದಕ್ಕುವುದಿಲ್ಲವೆಂದು ಆಕೆಯ ಸ್ವಾಂತಂತ್ರ್ಯಕ್ಕೆ ಅಡ್ಡಿಮಾಡಿದವರೆ ಹೆಚ್ಚು. ಸರೋಜ ಕಾಲೇಜು ವಿದ್ಯಾಭ್ಯಾಸ ಮುಗಿಸಿ ಒಂದು ವರ್ಷ ಮನೆಯಲ್ಲಿದ್ದುದ್ದರಿಂದ ಮದುವೆ ವಿಚಾರವಾಗಿ ತನಗೂ–ತಾಯಿಗೂ ಅವರಿವರ ಮಾತುಗಳಿಂದ ಬೇಸರವಾಗಿದ್ದು, ಅವರಿಂದ ದೂರ ಇರಲು ಕೆಲಸಕ್ಕೆ ಸೇರುವ ಇಂಗಿತ ವ್ಯಕ್ತಪಡಿಸುತ್ತಾಳೆ. ತಾಯಿಗೂ ಸಮಾಧಾನವಾಗಬಹುದು ಮತ್ತು ವಯಸ್ಸು ಬೆಳೆದದ್ದುರ ಅರಿವು ಇರುವುದಿಲ್ಲವೆಂದೆ ನೆಮ್ಮದಿಯನ್ನು ಹುಡುಕಲು ಹೊಳೆದದ್ದು ಕೆಲಸ.

ಮಗಳ ಜೀವನದಲ್ಲಿ ನಿರ್ಧಾರ ತೆಗೆದುಕೊಳ್ಳುವ ಹಕ್ಕು ತಂದೆ–ತಾಯಿ ಮಕ್ಕಳಿಗಿದ್ದರು ಮನೆಯ ಒಡೆತನವನ್ನು ಹಿರಿಯ ಅಳಿಯನಿಗೆ ವಹಿಸುವುದು ಪುರುಷನ ಅಧಿಪತ್ಯವನ್ನು ತೋರಿಸುತ್ತದೆ. ಸರೋಜಳ ತಾಯಿ ಕೆಲಸದ ವಿಷಯವಾಗಿ ಅಳಿಯನೊಂದಿಗೆ ಹೇಳಿದಾಗ "ಯಾಕೆ ಕೆಲಸ? ಸುಮ್ಮನೆ ಮದುವೆಯಾಗುವುದು ಬಿಟ್ಟು? ಕೆಲಸಕ್ಕೆ ಸೇರಿ ನಾಳೆ ಯಾರನ್ನಾದರೂ ಕಟ್ಟಿಕೊಂಡು ಓಡಿ ಹೋದರೆ ಏನೂ ಮಾಡುತ್ತೀರಿ? ಒಮ್ಮೆ ಹೋದ ಮರ್ಯಾದೆ ಮತ್ತೆ ದುಡ್ಡು ಕೊಟ್ಟರೂ ಹಿಂತಿರುಗುತ್ತದ? ಇನ್ನೂ ಮದುವೆಗೆ ಹೆಣ್ಣುಮಕ್ಕಳಿವೆ"[೪೦] ಎಂಬ ಮಾತು ಪುರುಷ ಪ್ರಧಾನ ವ್ಯವಸ್ಥೆಗೆ ಧಕ್ಕೆಯಾಗದಂತೆ ಹೆಣ್ಣನ್ನು ಹದ್ದುಬಸ್ತಿನಲ್ಲಿಡುವುದೆ ಆಗಿದೆ. ದುಡಿಯುವ ಹೆಣ್ಣು ತನ್ನ ಬಾಳಸಂಗಾತಿಯನ್ನು ಆರಿಸಿಕೊಂಡು ಹೋಗುವವಳೆ ಎಂಬ ಜಿಡ್ಡುಗಟ್ಟಿದ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳುತ್ತಿಲ್ಲ. ಹಾಗೆ ಮಾಡಿದರು ಅದನ್ನು ಪುರಸ್ಕರಿಸುವ ಬದಲು ನಿಷ್ಟುರವಾಗಿಯೆ ನೋಡುವ ಸಮಾಜ ಉಳಿದ ಹೆಣ್ಣುಮಕ್ಕಳಿಗೆ ಶಿಕ್ಷೆ ನೀಡುವುದನ್ನೇ ಬೆಳೆಸಿಕೊಂಡು ಬಿಟ್ಟಿದೆ. ಈ ರೀತಿಯ ನೆವಗಳಿಂದ ಹೆಣ್ಣಿಗೆ ಪರಾವಲಂಬಿತನಕ್ಕೆ ಒತ್ತು ಕೊಟ್ಟು ಶೋಷಿಸುತ್ತಿದೆ.

ಹೆಣ್ಣಿಗೆ ಯಾವ ಹಂತದಲ್ಲೂ ಸ್ವಾತಂತ್ರ್ಯವಿಲ್ಲದೆ ಬದುಕುವಂತೆ ಸಮಾಜ ಅಧಿಕಾರ ಚಲಾಯಿಸುತ್ತಿದೆ. ಮದುವೆಯಾಗುವವರೆಗೂ ತಂದೆಯ ಮನೆಯವರು ತಮ್ಮ ಮರ್ಯಾದೆಯತ್ತ

ಗಮನಹರಿಸಿ ಅದಕ್ಕೆ ಧಕ್ಕೆಯಾಗದಂತೆ ಕಾಯ್ದುಕೊಳ್ಳಬೇಕೆಂದು ಯೋಚಿಸುವವರು ಹಕ್ಕೆಂಬಂತೆ ಮಾತನಾಡುವವರಿದ್ದಾರೆ. ಮದುವೆಯಾದ ಮೇಲೆ ಗಂಡನ ಮನೆಯವರಿಗೆ ಹೆಣ್ಣಿನ ಅಧಿಕಾರ ಹಸ್ತಾಂತರ ನಡೆಯುತ್ತದೆ. ಅಧಿಕಾರ ಪಡೆದ ಗಂಡನ ಮನೆಯವರು ಮದುವೆಗೆ ಮುಂಚೆಯೆ ಷರತ್ತುಗಳ ಮೂಲಕ ತಮ್ಮ ಅಧಿಕಾರ ಚಲಾಯಿಸುತ್ತಾರೆ. ಈ ರೀತಿಯ ಕಥೆಯನ್ನು ಎಚ್.ಎಸ್.ಪಾರ್ವತಿಯವರ 'ಜಬಾಲಾ' ಕಾದಂಬರಿಯಲ್ಲಿ ಮದುವೆಗೆ ಮುಂಚೆಯೇ ಇನ್ನು ಮುಂದೆ ಕೆಲಸಕ್ಕೆ ಹೋಗಬಾರದೆಂಬ ಷರತ್ತು ಹಾಕಿ ಮದುವೆ ಮಾಡಿಕೊಳ್ಳುವುದನ್ನು ಕಾಣುತ್ತೇವೆ. ಈ ವಿಚಾರಗಳ ಅರಿವಿರದ ಗೀತಾ ಮದುವೆ ನಂತರ ಕಾಲೇಜಿಗೆ ಹೋಗುವ ಪ್ರಸ್ತಾಪ ಮಾಡಿದಾಗ ಇನ್ನೂ ಕೆಲಸಕ್ಕೆ ರಾಜೀನಾಮೆ ಕೊಟ್ಟಿಲ್ಲದಿರುವುದರ ವಿರುದ್ಧ ಉದ್ಗಾರವೆತ್ತುತ್ತಾನೆ. ಹೊರ ಹೋಗಿ ದುಡಿಯುವ ಹೆಣ್ಣು ಮಕ್ಕಳು ಮರ್ಯಾದೆಯಿಂದ ಬಾಳಲಾರರು, ನಾಲ್ಕು ಕಾಸು ಸಂಪಾದಿಸಿದರೆ ಅಹಂ ಬೆಳೆಯುತ್ತದೆ ಎಂದು ಯೋಚಿಸುವ ಪುರುಷಶಾಹಿ ಚಿಂತಕರ ಅಡಿಯಲ್ಲಿ ಇಂದಿರಮ್ಮನಂತಹವರಿದ್ದಾರೆ. ಮಗನನ್ನು ಕುರಿತು "ನನಗೆ ನನ್ನ ಸೊಸೆ ನೌಕರಿ ಮಾಡಿ ಹಣ ಸಂಪಾದಿಸಿ ತರೋದು ಸ್ವಲ್ಪವೂ ಇಷ್ಟವಿಲ್ಲ. ಅವಳಿಗೆ ನೀನೇ ಸ್ಪಷ್ಟವಾಗಿ ಹೇಳಿಬಿಡು 'ಅವಳ ಸಂಪಾದನೆಯಿಂದ ಇಲ್ಲಿ ಯಾರನ್ನು ಸಾಕಬೇಕಾಗಿಲ್ಲ. ಮರ್ಯಾದೆಯಿಂದ ಮನೇಲಿರು ಅಂತ"[೪೧] ಎಂದು ನಿಷ್ಠುರವಾದ ಮಾತುಗಳನ್ನಾಡುತ್ತಾರೆ. ಹಣ ಸಂಪಾದಿಸುವುದು ಬೇಡವೆನ್ನುವುದು ಗೀತಾಳ ಮೇಲಿನ ಮಮತೆಯಿಂದಲ್ಲ. ಒಬ್ಬಳೇ ಮಗಳಾಗಿರುವ ಗೀತಾಳಿಗೆ ತಂದೆಯ ಎಲ್ಲಾ ಆಸ್ತಿ ಬರುತ್ತದೆ ಎಂಬುದನ್ನು ತಿಳಿದೇ ಮದುವೆ ಮಾಡಿಕೊಂಡಿರುವ ಇಂದಿರಮ್ಮ, ಹಣಕ್ಕೆ ಆಸೆ ಪಡದವರೆಂದರೆ ಅರ್ಥಹೀನ. ಬದಲಿಗೆ ಮರ್ಯಾದೆಯ ಸೋಗಿನಲ್ಲಿ ಆಕೆಯ ಮೇಲಿಟ್ಟಿರುವ ಅಪನಂಬಿಕೆಯ ಶೋಷಣೆಯಾಗಿದೆ.

ಕೆಲಸದ ವಿಚಾರವಾಗಿ ಗೀತಾಳ ಪಾತ್ರ ಏನೂ ಇಲ್ಲ. ಹಿರಿಯರೆ ತೆಗೆದುಕೊಂಡ ನಿರ್ಧಾರಕ್ಕೆ ತಲೆಬಾಗುವುದು ಆಕೆಗೆ ವಾಕ್‌ಸ್ವಾತಂತ್ರ್ಯವು ಇಲ್ಲದಿರುವುದನ್ನು ಹೇಳುತ್ತದೆ. ಗೀತಾ ಮೌನವಹಿಸುತ್ತಾಳಾದರು ಕೆಲಸಕ್ಕೆ ಹೋಗಲೆಬೇಕೆಂದು ಹಠ ಹಿಡಿಯುವುದಿಲ್ಲ. ಬದಲಿಗೆ ಮದುವೆಗೆ ಮುಂಚೆ ಹಾಕುವ ಷರತ್ತುಗಳಿಂದ ವ್ಯಥೆ ಪಡುತ್ತಾಳೆ. ಕೆಲಸಕ್ಕೆ ಹೋಗುವ ಹೆಣ್ಣಿಗೆ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವಿಲ್ಲದೆ ತನಗಿಷ್ಟವಿಲ್ಲದಿದ್ದರು ಪುರುಷ ಷಾಹಿ ದೃಷ್ಟಿಕೋನದವರ ನಡುವೆ ಕೆಲಸ ಬಿಟ್ಟು ಬದುಕಬೇಕಾಗುತ್ತದೆ. ಮುಂದೆ 'ಬಂಜೆ' ಎಂಬ ನಿಂದನೆಗೆ ಒಳಗಾಗಿ ಒಂಟಿತನದ ಬೇಗೆ ಮಾನಸಿಕ ವೇದನೆಗೊಳಗಾಗುವಂತೆ ಮಾಡುತ್ತದೆ. ದುಡಿಯುವ ಹೆಣ್ಣು ಪ್ರಾಪಂಚಿಕ ಜ್ಞಾನ ಪಡೆದು, ಆರ್ಥಿಕ ಸ್ವಾವಲಂಬಿತನದಿಂದ ಸ್ವತಂತ್ರ ಬದುಕು ಕಟ್ಟಿಕೊಳ್ಳಲು ಅಪೇಕ್ಷಿಸಿದ್ದಾಳೆ. ಅದನ್ನೂ

ಸಹಿಸದವರು 'ಹಾರುವ ಹಕ್ಕಿಗೆ ರೆಕ್ಕೆಯನ್ನೆ ಕತ್ತರಿಸುವಂತೆ' ಕೆಲಸಕ್ಕೆ ಹೋಗದಂತೆ ನಿರ್ಬಂಧ ವಿಧಿಸಿರುವುದನ್ನು 'ಜಬಾಲಾ', 'ಅಸ್ಪೃಶ್ಯರು' ಕಾದಂಬರಿಗಳಿಂದ ತಿಳಿಯಬಹುದು.

ಆರ್ಥಿಕವಾದ ಭದ್ರತೆ ಹೊಂದಿದ ಹೆಣ್ಣನ್ನು ಪುರುಷರು ನಡೆಸಿಕೊಳ್ಳುವ ರೀತಿಯೆ ಬೇರೆಯಾಗಿರುತ್ತದೆ. ಸೋಮಾರಿಯಾಗಿಯೊ, ಆಧುನಿಕ ವ್ಯಸನಗಳಿಗೆ ತೊಡಗಿಕೊಂಡೋ, ದಬ್ಬಾಳಿಕೆ ಮಾಡಿಕೊಂಡು ಸಮಯ, ಹಣ ವ್ಯರ್ಥ ಮಾಡುವವರಿದ್ದರೆ ಆಕೆಯ ಹಂಗಿನಲ್ಲಿರುವವರು ತಾವೆಂದು ವಿನಯದಿಂದಿರುವವರು ಕೆಲವೇ ಮಂದಿ. ಆರ್ಥಿಕವಾಗಿ ಅಭದ್ರತೆ ಹೊಂದಿದ ಹೆಣ್ಣು ಆಶ್ರಯಾಪೇಕ್ಷಿಯಾದರೆ ಆತನ ಎಲ್ಲಾ ಶೋಷಣೆಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ಇಂಥದೊಂದು ಚಿತ್ರಣವನ್ನು ಬಿ.ಟಿ.ಲಲಿತಾ ನಾಯಕ್‌ರವರ 'ನೆಲೆ–ಬೆಲೆ' ಕಾದಂಬರಿಯಲ್ಲಿ ಕಾಣಬಹುದಾಗಿದೆ.

ಸ್ತ್ರೀ ವಿಮೋಚನೆಗಾಗಿ ಹೋರಾಡುವ ರೇಖಾ ಸ್ವತಃ ಪತಿಯಿಂದ ಶೋಷಣೆಗೆ ಒಳಪಟ್ಟಿರುತ್ತಾಳೆ. ತನ್ನ ಜೀವನದಂತೆ ಮುಂದಿನ ಪೀಳಿಗೆಯ ಹೆಣ್ಣುಮಕ್ಕಳಿಗೆ ಒದಗಬಾರದೆಂಬ ಆಶಾವಾದ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಕೊಡುವಂತೆ ಮಾಡುತ್ತದೆ. ರೇಖಾ ಅಧ್ಯಾಪಕಿಯಾಗಿ ನೌಕರಿ ಮಾಡುತ್ತಿದ್ದು ಮಹಿಳಾ ಸಂಘವೊಂದನ್ನು ರಚಿಸಿ ಅದರ ಏಳ್ಗೆಗಾಗಿ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟು ಗಂಡನ ಅಮಾನುಷ ವರ್ತನೆಗಳನ್ನು ಸಹಿಸಿಕೊಳ್ಳುತ್ತಾಳೆ. ಸ್ವಂತ ಮಗಳನ್ನೆ ದೂರ ಮಾಡಿದ್ದರು ಪರಸ್ತ್ರೀಯರೊಡನೆ ಅತ್ಯಾಚಾರವೆಸಗಿದರು ರೇಖಾ ಪ್ರಶ್ನಿಸದೆ ಮೂಕ ಪ್ರಾಣಿಯಂತಿರುತ್ತಾಳೆ. ಅದಕ್ಕೆ ಅವಳು ಕೊಡುವ ಕಾರಣವೆಂದರೆ "ನಾನು ಹೆಣ್ಣು ಅನ್ನುವುದೊಂದು; ನನಗೂ ಹೊಟ್ಟೆ ಇದೆ ಅನ್ನುವುದು ಎರಡನೆಯದು"[೪೨] ಜೀವನ ನಿರ್ವಹಿಸಲು ಅವಶ್ಯಕವಿರುವ ಆದಾಯವಿಲ್ಲದಿರುವುದರಿಂದ ಗಂಡನ ದುಡಿಮೆಯನ್ನು ಆಶ್ರಯಿಸಿರುತ್ತಾಳೆ. ಅವನ ಯಾವ ಅಕ್ರಮಗಳನ್ನು ತಡೆಯುವಂತಿಲ್ಲ ಮತ್ತು ಪ್ರಶ್ನಿಸುವಂತಿಲ್ಲ ಎಂಬ ಒಪ್ಪಂದದಂತೆ ಜೀವನ ಸಾಗಿಸುತ್ತಿರುವುದು ಅವಳ ಆರ್ಥಿಕ ಅಸಹಾಯಕತೆಯನ್ನು ತೋರಿಸುತ್ತದೆ.

ನಗರವಾಸಿಗರಲ್ಲಿ ಆರ್ಥಿಕವಾಗಿ ಪರಾವಲಂಬಿಗಳಾದ ರೇಖಾರಂತಹವರು ಗಂಡನ ದೌರ್ಜನ್ಯಗಳನ್ನು ಅರಗಿಸಿಕೊಂಡು ಬಾಳಿದರೆ, ಹಳ್ಳಿಯಲ್ಲಿನ ಸ್ತ್ರೀಯರು ಆರ್ಥಿಕ ಭದ್ರತೆ ಇಲ್ಲದಿದ್ದರೆ ಜೀವನ ಪರ್ಯಂತ ದುಡಿಯುತ್ತಿರಲೇಬೇಕಾಗುತ್ತದೆ. ಯಾವ ಆದಾಯವು ಇಲ್ಲದಿದ್ದರು ಊಟ–ಬಟ್ಟೆಗಾಗಿಯೆ ದಿನನಿತ್ಯ ಮನೆಗೆಲಸ ಒಂದೆಡೆಯಾದರೆ, ಪುರುಷನೊಂದಿಗೆ ಹೊಲ–ಗದ್ದೆಗಳ ಕೆಲಸಗಳಲ್ಲಿ ತೊಡಗುತ್ತಾರೆ. ಸಾಮಾನ್ಯ ಮಧ್ಯಮ ವರ್ಗದ ಕುಟುಂಬದ ಸೊಸೆಯಾದ ಜಯಾಳನ್ನು 'ದುಡಿಯುವ ಎತ್ತೆಂದೆ' ದುಡಿಸಿಕೊಳ್ಳುತ್ತಾರೆ. ಬಂಜೆ ಪಟ್ಟ ಹೊತ್ತಿದ್ದ ಜಯಾಳ ಸ್ಥಾನ ಮನೆಯಲ್ಲಿ ಅವಳ ದುಡಿಮೆ ಮಾತ್ರ ಎಂಬಂತೆ ನಡೆಸಿಕೊಳ್ಳುವುದು ಅವಳಿಗೂ ಅರಿವಿದ್ದು "ಗಂಡ,

ಅತ್ತೆ, ಮಾವ, ಭಾವಂದಿರು, ಓರಗಿತ್ತಿಯರೆಲ್ಲ ನನ್ನನ್ನು ಮೆಚ್ಚಿ ಕೊಂಡಾಡುತ್ತಾರೆ. ನನ್ನಿಂದ ಎಷ್ಟು ಸಾಧ್ಯವೋ ಅಷ್ಟೆಲ್ಲಾ ದುಡಿಸಿಕೊಳ್ಳುತ್ತಾರೆ. ಬಸುರಿ–ಬಾಣಂತೀತನವೆಂದು ಓರಗಿತ್ತಿಯರು ಹೊಲ–ಮನೆ ಕೆಲಸಗಳಿಂದ ತಿಂಗಳುಗಟ್ಟಲೆ ದೂರ ಉಳಿದು ವಿಶ್ರಾಂತಿ ಪಡೆಯುತ್ತಾರೆ. ಆದರೆ ನಾನು ಮಾತ್ರ ಯಾವತ್ತಿಗೂ ಒಂದು ಯಂತ್ರ"[೪೩] ಎಂದುಕೊಳ್ಳುವಲ್ಲಿ ಹೆಣ್ಣಿನ ಅಸಹಾಯಕತೆ ಬಿಂಬಿತವಾಗಿದೆ. ಗಂಡ ಎರಡನೇ ಮದುವೆಗೆ ಸಿದ್ಧವಾದಾಗಲು ಮನೆಯಲ್ಲಿ 'ಕೆಲಸದಾಳಿನ ಸ್ಥಾನವಂತೂ ಸಿಗುವುದೆಂಬ' ನಿರಾಶೆಯ ಮಾತು ಸಮಾಜದಲ್ಲಿ ಮಕ್ಕಳಿಲ್ಲದ ಹೆಣ್ಣೆಂಬ ಕಾರಣದಿಂದ ಆಕೆಯನ್ನು ಆರ್ಥಿಕವಾಗಿ ಶೋಷಿಸುವ ನೆಲೆಯನ್ನು ತಿಳಿಸುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯು ಅವಿವಾಹಿತೆಯಾಗಲಿ, ವಿವಾಹಿತೆಯಾಗಲಿ, ವಿಧವೆಯಾಗಲಿ, ಬಂಜೆಯಾಗಲಿ ಎಲ್ಲರನ್ನು ಆರ್ಥಿಕವಾಗಿ ನಿರ್ಗತಿಕರನ್ನಾಗಿ ಮಾಡಿಕೊಂಡು ಜೀವನ ಪರ್ಯಂತ ಪುರುಷನ ಅಧೀನದಲ್ಲಿರುವಂತೆ ಸೃಷ್ಟಿಸಿದೆ. ಅದಕ್ಕಾಗಿ ಅವಳ ಸ್ವಾವಲಂಬಿತನಕ್ಕೆ ಅನೇಕ ಆಪಾದನೆಗಳನ್ನು ಹೇರುತ್ತದೆ. ತಮ್ಮ ಸ್ವಾಮ್ಯ, ಪ್ರತಿಷ್ಠೆಗಳನ್ನು ಪ್ರದರ್ಶಿಸಿದಂತೆ ಹೆಣ್ಣಿಗೆ ಪರಾವಲಂಬತನಕ್ಕೆ ಹೆಚ್ಚು ಒತ್ತು ಕೊಡುತ್ತಿರುವುದು ಅಸಮಂಜಸ. ಊಟ–ಬಟ್ಟೆಗೆ ಆಕೆಯನ್ನು ಸೀಮಿತಗೊಳಿಸಿ ತನ್ನ ಆಸೆ ಕನಸುಗಳನ್ನು ಬದಿಗೊತ್ತಿ ಬದುಕುವಂತೆ ಕಾಯ್ದುಕೊಳ್ಳುತ್ತಿದೆ. ಶೈಕ್ಷಣಿಕ ಪರಿಸರದಿಂದ ಹೆಣ್ಣು ವಿದ್ಯಾವಂತೆಯಾಗದೆ ಇಂಥ ಕಟ್ಟುಪಾಡುಗಳಿಂದ ಮುಕ್ತಿ ಹೊಂದಬಹುದೆಂಬ ಆಶಯ ಲೇಖಕಿಯರದಾಗಿದೆ. ಈ ಸಂಶೋಧನಾ ಪ್ರಬಂಧದಲ್ಲಿ ಪುರುಷಪ್ರಧಾನ ಎಂಬ ಮಾತು ಸ್ತ್ರೀಯರನ್ನು ಒಳಗೊಂಡಂತೆ, ಮೌಢ್ಯತೆಯನ್ನು ಪ್ರತಿಪಾದಿಸುವ ಮಹಿಳೆಯರನ್ನು ಕುರಿತು ನಿರೂಪಿಸಿದ ಪ್ರಮೇಯವೇ ಆಗಿದೆ. ಅಂದರೆ ಪುರುಷರಷ್ಟೇ, ಮಹಿಳೆಗೆ ತೊಂದರೆ ನೀಡುತ್ತಾರೆಂಬ ಭಾವ ಕ್ಷಣಿಕವಾದುದು. ಅತ್ತೆಯ ಸೋಗಿನಲ್ಲಿ ಸೊಸೆಯಂದಿರು ಅನುಭವಿಸುವ ವೇದನೆ ಅಭಿವ್ಯಕ್ತಗೊಂಡಿವೆ.

### ೩.೪ ಕೌಟುಂಬಿಕ ನೆಲೆ

ಸಾಮಾಜಿಕ ಸಂಸ್ಥೆಯ ಒಂದು ಭಾಗ ಕುಟುಂಬ. ಹುಟ್ಟಿದ ಮಗು ಸಮಾಜದಲ್ಲಿ ಹೇಗೆ ಬಾಳಬೇಕೆಂಬುದನ್ನು ಕಲಿಯುವುದು ಕುಟುಂಬದಲ್ಲಿ. 'ಲಿಂಗ ಅಸಮಾನತೆಯಂತಹ' ಸಾಮಾಜಿಕ ಪಿಡುಗು ಹುಟ್ಟಿರುವುದು ಕುಟುಂಬದಿಂದಲೇ 'ಸ್ತ್ರೀ'ಯ ಶೋಷಣೆ ಕುಟುಂಬ ವ್ಯವಸ್ಥೆಯಿಂದ ಪ್ರಾರಂಭವಾಗಿ ಸಮಾಜದವರೆಗೆ ವಿಸ್ತರಿಸಿದೆ.

ಕಾಡುಮೇಡು ಅಲೆಯುತ್ತಿದ್ದ ಮಾನವ ತನ್ನ ವೈಯಕ್ತಿಕತೆಗೆ ಪ್ರಾಧಾನ್ಯತೆ ಕೊಡುತ್ತಿರಲಿಲ್ಲ. ಸಮುದಾಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತಿದ್ದ. ಬುದ್ಧಿಜೀವಿಗಳಾದಂತೆ ಭೂಮಿ, ಬೆಳೆ, ಮಣ್ಣು ಇವುಗಳ ಮೇಲೆ ಅಧಿಕಾರ ಸ್ಥಾಪನೆಯಾಯಿತು. ಮುಂದೆ ತಾನು, ತನ್ನವರು ಎಂಬ ಚೌಕಟ್ಟುಗಳ ನಿರ್ಮಾಣವಾಯಿತು. ಈ ಚೌಕಟ್ಟಿನ ಒಳಗೆ ಜೀವಿಸುವವರನ್ನು ಒಕ್ಕೊರಲಿನಿಂದ ಕುಟುಂಬ ಎಂದು ಕರೆಯಲಾಯಿತು. ಈ ಕುಟುಂಬದಲ್ಲಿ ಜೈವಿಕ ಕಾರಣಗಳಿಂದ ಹೆಣ್ಣನ್ನು ಹೆರುವ –ಹೊರುವ ಕಾರ್ಯಗಳಿಗೆ ಸೀಮಿತಗೊಳಿಸಿ ಹೊರಗಿನ ಕಾರ್ಯಗಳಿಂದ ಪ್ರಾಪಂಚಿಕ ಜ್ಞಾನ ಬೆಳೆಸಿಕೊಂಡ ಪುರುಷ ತಾನು ಬುದ್ಧಿವಂತನೆಂಬ 'ಅಹಂ'ಗೆ ಒಳಗಾದ 'ಗಂಡು ಮೇಲು ಹೆಣ್ಣು ಕೀಳು' ಎಂಬ ಸಾಂಪ್ರದಾಯಿಕ ನಂಬಿಕೆ ಹುಟ್ಟಿಸಿ ಕುಟುಂಬದಲ್ಲಿ ತನ್ನ ಅಧಿಪತ್ಯ ಸ್ಥಾಪಿಸಿದ. ಕಾಲಕ್ರಮೇಣ ಸಮಾಜವನ್ನು ಪುರುಷ ಹಿಡಿತ ಸಾಧಿಸಿ ಪುರುಷಪ್ರಧಾನ ಸಮಾಜವನ್ನಾಗಿ ಮಾರ್ಪಡಿಸಿದ್ದಾನೆ. ಪುರುಷನ ದಬ್ಬಾಳಿಕೆಗಳನ್ನು ಒಪ್ಪಿಕೊಂಡಂತೆಯೆ ಮಣಿಯುತ್ತಲೆ ಬಂದ ಸ್ತ್ರೀಯರು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾ ಬಂದಿದ್ದಾರೆ. ಇಂದು ಸಮಾಜದಲ್ಲಿ ಗಂಡಿನ ಸ್ಥಾನ ಮೇಲು ಎಂಬುದನ್ನು ಒಪ್ಪಿಕೊಂಡವಳಾಗಿದ್ದಾಳೆ. 'ಮನೆಯೆ ಮೊದಲ ಪಾಠಶಾಲೆ', 'ಅಮ್ಮನೆ ಮೊದಲ ಗುರು' ಎಂದು ಹೇಳುವಲ್ಲಿ ಹೆಣ್ಣು ಸಮಾಜದಲ್ಲಿ ಹೇಗೆ ಬದುಕಬೇಕೆಂಬ ನೀತಿ ಪಾಠಗಳು ಇಲ್ಲಿಂದಲೆ ಪ್ರಾರಂಭವಾಗುತ್ತವೆ. ಪುರುಷನಾದಿಯಾಗಿ ಸ್ತ್ರೀಯರು ಪುರುಷ ಷಾಹಿ ಸಮಾಜದಲ್ಲಿ ಮಹಿಳಾ ಪೀಳಿಗೆಗೆ ಮಾರ್ಗದರ್ಶಿಗಳಾಗಿದ್ದಾರೆ.

"ಸ್ತ್ರಿವಾದಿ ಚಿಂತಕರು ಕುಟುಂಬವನ್ನು 'ಸ್ತ್ರೀ ಶೋಷಣೆ'ಯ ಮೂಲ"[೪೪] ಎಂದಿದ್ದಾರೆ. ಹೆಣ್ಣಿನ ಮೇಲೆ ಉದಾಸೀನ ಭಾವ ತಳೆದಿರುವ ಕುಟುಂಬದವರಿಂದ ಹೆಣ್ಣು ಭ್ರೂಣ ಹತ್ಯೆಯಿಂದಲೆ ಶೋಷಣೆ ಪ್ರಾರಂಭವಾಗುತ್ತದೆ. ಭೂಮಿಗೆ ಬರುವ ಮೊದಲೆ ಹೆಣ್ಣೆಂಬ ಕಾರಣದಿಂದ ಕೊಲ್ಲುವಂತಹ ಕೆಲಸ ಮಾಡುತ್ತಿದ್ದಾರೆ. ಭೂಮಿಗೆ ಬಂದ ನಂತರ ಗಂಡಿಗೊಂದು ರೀತಿಯಲ್ಲಿ – ಹೆಣ್ಣಿಗೊಂದು ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದಾರೆ. ಊಟ–ಉಪಚಾರದಲ್ಲಿ ಪೌಷ್ಠಿಕ ಆಹಾರ ಪುರುಷನಿಗೆ, ಹೆಣ್ಣಿಗೆ ಸಾಮಾನ್ಯವಾದ ಆಹಾರ ಕೊಡುವುದು. ಕೆಲಸ ಮಾಡುವುದರಲ್ಲಿ ಮನೆಯ ದೈನಂದಿನ ಕೆಲಸಗಳಾದ ಕಸ ಗುಡಿಸುವ, ಪಾತ್ರೆ, ಬಟ್ಟೆ ತೊಳೆಯಲು ಹೆಣ್ಣನ್ನು ನೇಮಕ ಮಾಡುವುದು – ಗಂಡು ಸ್ವತಂತ್ರವಾಗಿ ಹೊರ ತಿರುಗುವುದು. ಮುಂತಾದ ಲಿಂಗ ತಾರತಮ್ಯಗಳು ಪ್ರತಿಯೊಂದು ಕುಟುಂಬದಲ್ಲಿ ಕಾಣುವಂಥದ್ದು. ನಡೆ–ನುಡಿ ವಿಚಾರವಾಗಿ ತಗ್ಗಿ ನಡೆಯಬೇಕು, ಹೆಚ್ಚು ನಗಬಾರದು, ರಾತ್ರಿಯಾಗುತ್ತಿದ್ದಂತೆ ಮನೆ ಸೇರಿರಬೇಕು ಇಂಥ ನೀತಿ ಪಾಠಗಳು ಹೆಣ್ಣಿಗೆ

ಮಾತ್ರ ಸೀಮಿತವಾಗಿರುತ್ತವೆ. ಇವುಗಳ ಜೊತೆಗೆ ಶಿಕ್ಷಣ, ಉದ್ಯೋಗಗಳಲ್ಲಿ ತಾರತಮ್ಯತೆ ಕಂಡುಬರುತ್ತವೆ.

ಲಿಂಗ ತಾರತಮ್ಯ ಕುಟುಂಬದಿಂದಲೆ ಪ್ರಾರಂಭವಾಗಿ ಸಮಾಜದಲ್ಲಿ ಸ್ತ್ರೀಯನ್ನು ಎರಡನೇ ದರ್ಜೆಯಲ್ಲಿರಿಸಿದೆ. ಊಟೋಪಚಾರದಿಂದ ಮನೆಯ ವಾರಸುದಾರಿಕೆವರೆಗೂ ಪುರುಷನನ್ನು ಉತ್ತಮ ಸ್ಥಾನಕ್ಕೇರಿಸಿ ಕೊನೆಗೆ ಹೆಣ್ಣಾದವಳು ಅವನ ಅಧೀನಳಾಗಿ ಪರಾವಲಂಬಿಯಾಗಿರುವಂತೆ ಅಡಿಪಾಯವನ್ನು ಹಾಕುತ್ತಿದೆ. ಅಡಿಪಾಯಕ್ಕೆ ತಕ್ಕಂತೆ ಸ್ತ್ರೀ ಮಗಳಾಗಿ, ತಂಗಿಯಾಗಿ, ಅಕ್ಕನಾಗಿ, ಹೆಂಡತಿಯಾಗಿ, ಸೊಸೆಯಾಗಿ ಪುರುಷನ ಅಧೀನಳಾಗಿ ಬದುಕುತ್ತಿದ್ದಾಳೆ. ಪಿತೃಪ್ರಧಾನ ಕುಟುಂಬದಲ್ಲಿ ಮನೆಯ ಆಡಳಿತ ತಂದೆಯಿಂದ ಮಗನಿಗೆ ಬರುವ ಬಳುವಳಿಯಾಗಿದೆ. ಮುಂದಿನ ವಾರಸುದಾರ, ಮನೆಯ ಯಜಮಾನ ಎಂದು ಮಗುವಿನಿಂದಲೇ ಆತನನ್ನು ಹುಬ್ಬಿಸಿ ಸಮಸ್ತ ಆಸ್ತಿಯು ಯಾರ ಆಕ್ಷೇಪಣೆಯು ಇಲ್ಲದಂತೆ ಮಗನ ಪಾಲು ಮಾಡಿದೆ. ಇತ್ತೀಚೆಗೆ ಹೆಣ್ಣು ಮಕ್ಕಳು ಕಾನೂನು ರೀತ್ಯ ಸಮಪಾಲು ಆಸ್ತಿ ಪಡೆಯಬಹುದಾದರು ಕಾನೂನು ಮೊರೆ ಹೋಗುವ ಮೊದಲೆ ಗಂಡು ಮಗನಿಗೆ ಮುಕ್ಕಾಲು ಪಾಲಾದರೆ, ಹೆಣ್ಣು ಮಗಳಿಗೆ ಕಾಲು ಪಾಲು ನೀಡುವ ಪ್ರಸಂಗಗಳು ನಡೆಯುತ್ತಿವೆ. ಮಗ ನಮ್ಮನ್ನು ನೋಡಿಕೊಳ್ಳುತ್ತಾನೆ. ಮಗಳು ಮದುವೆಯಾಗಿ ಬೇರೆ ಮನೆ ಸೇರುವವಳು ಎಂಬ ಅಭಿಪ್ರಾಯ ಬೇರೂರಿರುವುದರಿಂದಲೆ ಹೆಣ್ಣು ಎಲ್ಲದರಿಂದಲು ಶೋಷಿತಳಾಗುತ್ತಿದ್ದಾಳೆ. ಅಂದರೆ ವಿವಾಹ ಹೆಣ್ಣಿನ ಮೇಲೆ ಅಷ್ಟರಮಟ್ಟಿಗೆ ಪ್ರಭಾವಬೀರಿದೆ.

## ವಿವಾಹ

ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬ ಸಂಸ್ಥೆಯನ್ನು ಹುಟ್ಟು ಹಾಕುವುದೇ ವಿವಾಹ. ವಿವಾಹ ನೈಸರ್ಗಿಕದತ್ತವಾದುದಲ್ಲ. ಮನುಷ್ಯನಿಂದ ರಚನೆಗೊಂಡಿರುವಂಥದ್ದು. ಆದಿಮಾನವರ ಕಾಲದಲ್ಲಿ ಗಂಡು–ಹೆಣ್ಣು ಎಲ್ಲರಿಗೂ ಸೇರಿದವರಾಗಿದ್ದರಿಂದ ಸ್ವಂತಿಕೆಯನ್ನು ಸ್ಥಾಪಿಸಿಕೊಳ್ಳಲು ಸಾಮೂಹಿಕ ಒಪ್ಪಂದದಿಂದ ರಚನೆಯಾದ ಪದ್ಧತಿಯಾಗಿದೆ. ನೈಸರ್ಗಿಕವಾದ 'ಕಾಮ'ವು ಕ್ರಿಮಿ, ಕೀಟ, ಪ್ರಾಣಿ, ಪಕ್ಷಿಗಳಾದಿಯಾಗಿ ಮನುಷ್ಯನಿಗು ಸಹಜವಾಗಿ ಇದ್ದು, ಭೋಗಿಸಲು ಕಂಡುಕೊಂಡ ಸ್ವತಂತ್ರವಾಗಿದೆ. ನಂತರದಲ್ಲಿ ಹೆಣ್ಣಿಗಿರುವ ಚೌಕಟ್ಟು ಎಂಬಂತೆ ಅಸ್ತಿತ್ವ ಪಡೆದುಕೊಂಡಿದೆ.

ವಿವಾಹದ ಹೆಸರಿನಲ್ಲಿ ಸ್ತ್ರೀ ಬಂಧನಕ್ಕೊಳಪಟ್ಟಿದ್ದಾಳೆ. ಅಲೆಮಾರಿ ಜೀವನದಲ್ಲಿ ಹೆಣ್ಣು ಎಲ್ಲಾ ಪುರುಷರ ಸ್ವತ್ತಾಗಿದ್ದರು ಸ್ವತಂತ್ರ ಜೀವನ ನಡೆಸುತ್ತಿದ್ದಳು. ಇಂದು ವಿವಾಹದ ಬಂಧನದಲ್ಲಿ ಭೋಗದ ವಸ್ತುವಾಗಿದ್ದಾಳೆ. ಹೆರುವ ಯಂತ್ರವಾಗಿದ್ದಾಳೆ. ಲೈಂಗಿಕತೆ, ಸಂತಾನೋತ್ಪತ್ತಿ, ಮಕ್ಕಳ

ನಿರ್ವಹಣೆ ಎಲ್ಲದರಲ್ಲು ಗಂಡು–ಹೆಣ್ಣಿನ ಜವಾಬ್ದಾರಿ ಸಮಾನತೆ ಇರುವಂತೆ ಸೃಷ್ಟಿಯಾದದ್ದು, ಕಾಲಕ್ರಮೇಣ ಹೆಣ್ಣಿನ ರಚನೆಗಳನ್ನು ಕೀಳಾಗಿ ಕಾಣುತ್ತ ಅಧೀನಳಾಗಿರುವಂತೆ ವಿವಾಹ ಬಂಧಿಸಿದೆ.

ಹೆಣ್ಣಿನ ಬಂಧನಕ್ಕಾಗಿ ಮಾಡಿಕೊಂಡಿರುವ 'ವಿವಾಹ' ಪದದಲ್ಲಿಯೆ ಅವಳ ಶೋಷಣೆಯ ಹಾದಿ ಪ್ರಾರಂಭವಾಗುತ್ತದೆ. "ಹಿಂದುಗಳ ಪ್ರಕಾರ ವಿ+ವಾಹ=ವಿವಾಹ ಅಂದರೆ ಸಾಗಿಸು(To carry) ಎಂಬ ಅರ್ಥವನ್ನು ಕೊಡುತ್ತದೆ. ಅಂದರೆ ವಧುವನ್ನು ವರನ ಮನೆಗೆ ಕರೆದುಕೊಂಡು ಹೋಗುವ ವಿಚಿತ್ರ ಸಂಸ್ಕಾರವೇ ವಿವಾಹವಾಗಿದೆ"[೪೫] ಎಲ್ಲಾ ಧರ್ಮದಲ್ಲು ಮದುವೆಯಾದ ಹೆಣ್ಣು ಅಪರಿಚಿತ ಕುಟುಂಬಕ್ಕೆ ಪಾದಾರ್ಪಣೆ ಮಾಡಬೇಕಾಗಿರುತ್ತದೆ. ಹುಟ್ಟಿದಾಗಿನಿಂದ ತಮ್ಮ ಸ್ಥಾನವನ್ನು ಪ್ರಬಲಗೊಳಿಸಿಕೊಂಡಿರುವ ಕುಟುಂಬ ಮಧ್ಯದಲ್ಲಿ ಪ್ರವೇಶ ಮಾಡಿದ ಹೆಣ್ಣನ್ನು ಶೋಷಿಸುತ್ತದೆ. ಮನೆಮಗಳು ಬೇರೆ ಮನೆಗೆ ಹೋಗುವವಳು ಎಂದು ಹೆಣ್ಣು ಹೆತ್ತವರ ಅಭಿಪ್ರಾಯವಾದರೆ, ಸೊಸೆಯಾದವಳು ಬೇರೆ ಮನೆಯಿಂದ ಬಂದವಳು ಎಂಬ ಅಭಿಪ್ರಾಯ ಗಂಡನ ಮನೆಯವರದ್ದಾಗಿರುತ್ತದೆ'. ಈ ಎರಡು ಮನಸ್ಸುಗಳ ನಡುವೆ ಹೆಣ್ಣಿಗೆ ನೆಲೆ ಇಲ್ಲವೆಂಬಂತೆ ಬದುಕುವಂತಾಗಿದೆ. ಈ ಹಿನ್ನೆಲೆಯಲ್ಲಿ ಹೆಣ್ಣು ವಿವಾಹ ಪೂರ್ವದಲ್ಲಿ ಮತ್ತು ನಂತರದಲ್ಲಿ ಹೇಗೆ ಶೋಷಿತಳಾಗುತ್ತಾಳೆ ಎಂಬುದನ್ನು ಪರಿಶೋಧಿಸಲಾಗಿದೆ.

**ವಿವಾಹಪೂರ್ವ**

ವಧು ಪರೀಕ್ಷೆಯಂತೆ ವರಪರೀಕ್ಷೆ ಮಾಡುವುದು ಕಡಿಮೆ. ಹೆಣ್ಣನ್ನು ನೋಡಲು ಬಂದವರು ಹೇಗೆ ವರ್ತಿಸುತ್ತಾರೆ ಎಂಬುದನ್ನು ವಾಸ್ತವ ನೆಲೆಗಟ್ಟನ್ನು ಆಧರಿಸಿ ಎಚ್.ಎಸ್.ಪಾರ್ವತಿಯವರು 'ಜಬಾಲಾ' ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಯು ಹೆಣ್ಣಿಗೆ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಎದುರಿಸಬೇಕಾದ ಪರೀಕ್ಷೆಗಳನ್ನು ಒಳಗೊಂಡಿದೆ. ಮಗಳಿಗೆ ವಯಸ್ಸಾಗುತ್ತಿದೆ, ಬೇಗ ಮದುವೆ ಮಾಡಬೇಕೆಂಬ ತರಾತುರಿ ತಾಯಿ ಜಯಮ್ಮನದಾಗಿದೆ. ಗೀತಾಳ ವಧುಪರೀಕ್ಷೆಗೆ ಬಂದ ಗಂಡಿನ ಮನೆಯವರು ಒಬ್ಬಳೇ ಮಗಳಾಗಿದ್ದ ಗೀತಾಳಿಗೆ ಸಮಸ್ತ ಆಸ್ತಿ ಸೇರುವುದನ್ನು ಖಚಿತಪಡಿಸಿಕೊಂಡರು. ಬಂದದ್ದು ಹುಡುಗಿ ನೋಡಲಾದರೂ, ಮನೆಯನ್ನೆಲ್ಲ ನೋಡಿ ಸ್ವಂತ ಮನೆಯೆಂದು ಖಚಿತಪಡಿಸಿಕೊಂಡರು. ಹುಡುಗನ ತಾಯಿ ಇಂದಿರಮ್ಮ ಹಂತ ಹಂತವಾಗಿ ಪ್ರಶ್ನೆಗಳ ಸುರಿ ಮಳೆ ಸುರಿಸುತ್ತಾ ಹೋಗುತ್ತಾರೆ. ಕೆಲಸಕ್ಕೆ ಸೇರಿ ಎಷ್ಟು ವರ್ಷವಾಯ್ತು? ಸಂಬಳ ಬ್ಯಾಂಕಿನಲ್ಲಿಡುತ್ತಿದ್ದೀಯಾ? 'ಸಂಗೀತ, ಬರುತ್ತದ?' "ಎಷ್ಟು ಓದಿದರೂ ಹೆಣ್ಣು ಮಕ್ಕಳಿಗೆ

ಹಾಡು-ಹಸೆ ಬರಬೇಕಮ್ಮ..... ಹೋಗಲಿ ಅಡಿಗೆ ಕೆಲಸ ಬರುತ್ತೆ ತಾನೇ?"[೪೬] ಎಂಬ ಪ್ರಶ್ನೆಗಳು ಅಧಿಕಾರಯುತ-ವಾಗಿರುತ್ತದೆ.

ಅಡುಗೆ ಮನೆಗೆ ಸೀಮಿತವಾಗಿರುವ ಹೆಣ್ಣನ್ನು ವಧು ಪರೀಕ್ಷೆಯಲ್ಲಿ ಕೇಳುವ ಸಾಮಾನ್ಯ ಪ್ರಶ್ನೆಯಾಗಿರುತ್ತದೆ. ಎಲ್ಲರ ಮುಂದೆ ಸಂದರ್ಶನ ಮಾಡುವ ಸಂಪ್ರದಾಯದಲ್ಲಿ ಹೆಣ್ಣಿಗಿಂತ ಅವಳ ಆಸ್ತಿ, ಅವಳು ಕಲಿತಿರುವ ಕೆಲಸಗಳಿಗೆ ಹೆಚ್ಚು ಒತ್ತು ಇರುತ್ತದೆ. ಗೀತಾಳ ಮನೆಯವರು ಹುಡುಗನ ಉದ್ಯೋಗ ಕುಟುಂಬದ ಬಗ್ಗೆ ವಿಚಾರಿಸಿ ವರ ಪರೀಕ್ಷೆ ಮುಗಿಸಿದರೆ, ವರನ ಮನೆಯವರು ಗೀತಾಳನ್ನು ಅನೇಕ ಪ್ರಶ್ನೆಗಳಿಂದ ಅವಳು ಉದ್ವೇಗಕ್ಕೊಳಗಾಗುವಂತೆ ಮಾಡುತ್ತಾರೆ.

'ಗಂಡಿನ ಮನೆಯವರಿಗೆ ಹೆಣ್ಣಿನವರು ತಗ್ಗಬೇಕು' ಎಂಬ ಸಾಂಪ್ರದಾಯಿಕ ಮಾತು ಗಂಡಿನ ಮನೆಯವರು ಹೆಣ್ಣಿನ ಮನೆಯವರನ್ನು ತುಚ್ಛವಾಗಿ ಕಾಣುವಂತೆ ಮಾಡಿದೆ. ಗಂಡಿನ ಮನೆಯವರಿಗೆ ಯಾವುದರಲ್ಲು ಕೊರತೆಯಾಗದಂತೆ ನೋಡಿಕೊಳ್ಳಬೇಕೆಂದು ಅಧಿಕಾರ ಚಲಾಯಿಸುತ್ತಾರೆ. ನೇರ ನುಡಿಗಾರ್ತಿಯಾದ ಗೀತಾ ಇಂದಿರಮ್ಮನ ಪ್ರಶ್ನೆಗಳಿಗೆ ಆವೇಗ ಹೆಚ್ಚುತ್ತಿದ್ದರು ಸಹಿಸಿಕೊಳ್ಳುವುದು, ಹೆಣ್ಣು ಎಷ್ಟೇ ಅನ್ಯಾಯದ ವಿರುದ್ಧ ಹರಿಹಾಯ್ದರು ಗಂಡಿನ ಮುಂದೆ ತಗ್ಗಲೇಬೇಕೆಂಬ ಅಸಮಾನತೆಯನ್ನು ಹೇಳುತ್ತದೆ.

ವಧು ಪರೀಕ್ಷೆಯಲ್ಲಿ ಹೆಣ್ಣಿನ ಚಲನವಲನಗಳನ್ನು ಗಮನಿಸಿ ಇಂದಿರಮ್ಮ ಕೇಳುವಂತಹ ಪ್ರಶ್ನೆಗಳನ್ನು ಕೇಳಿ ಮದುವೆ ನಿಶ್ಚಯ ಮಾಡುವುದು ಅವರ ಸಂಕುಚಿತ ಮನೋಭಾವವನ್ನು ಹೇಳುತ್ತದೆ. ಹೆಣ್ಣಿನ ಆಶೋತ್ತರಗಳೇನು, ಅವಳ ಕನಸುಗಳೇನು, ಅವಳ ಸಹಾಯಕರಾಗಿ ನಾವಿದ್ದೇವೆ ಎಂಬ ಮಾನವೀಯತೆ ತೋರುವ ಪುರುಷ ಪ್ರಧಾನ ಕುಟುಂಬ ಕಡಿಮೆ ಎನ್ನುವುದಕ್ಕಿಂತ ಇಲ್ಲವೇ ಇಲ್ಲ ಎನ್ನಬಹುದು. ತಮ್ಮ ಅಭಿಲಾಷೆಗಳಿಗೆ ಒತ್ತು ಕೊಟ್ಟು ಹೆಣ್ಣಿನ ಸ್ವತಂತ್ರವಾದ ವರ್ತನೆಗಳನ್ನೆ ಕಾರಣವಾಗಿಸಿಕೊಂಡು ಸಂಬಂಧ ಕಡಿದುಕೊಳ್ಳುವವರು ಇದ್ದಾರೆ.

ಮದುವೆಗೆ ಮುಂಚೆ ಹುಡುಗಿ ನೋಡಲು ಬಂದವರು ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನು 'ಜಬಾಲಾ' ಕಾದಂಬರಿ ಹೇಳಿದರೆ, ಮುಂದುವರಿದು ಗಂಡನಾಗುವವನೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಸ.ಉಷಾರವರ 'ಕಸೂತಿ' ಕಾದಂಬರಿಯಲ್ಲಿ ನೋಡಬಹುದು. ಸ್ತ್ರೀ, ಗಟ್ಟಿಯಾಗಿ ಮಾತನಾಡುವಂತಿಲ್ಲ, ಮನಸಾರೆ ನಗುವಂತಿಲ್ಲ ನಯ ವಿನಯಗಳಿಂದ ತುಂಬಿರಬೇಕೆಂದು ಸಮಾಜ ಸೃಷ್ಟಿಯಾಗಿದೆ. ಅದನ್ನು ಮೀರಿ ನಡೆದವಳನ್ನು 'ಗಂಡುಬೀರಿ' ಎಂಬ ಪದದಿಂದ ಹಿಯಾಳಿಸುತ್ತದೆ. ಆಧುನಿಕ ಜೀವನಕ್ಕೆ ಕಾಲಿಡುವವರಾಗಿದ್ದರು ಸರಸ್ವತಿ ತನ್ನ ಮಗಳಿಗೆ

ಗಂಡಿನ ಮೊದಲ ಭೇಟಿಯಲ್ಲಿ ಹೇಗಿರಬೇಕೆಂಬುದು ನೀತಿ ಪಾಠವನ್ನು ಹೇಳುತ್ತಾಳೆ. "ಅವರು ಹತ್ತು ಮಾತಾಡಿದರೆ ನೀನು ಒಂದು ಮಾತಾಡಬೇಕು. ಅವರಾಗೇ ಕೇಳಿದ್ದಕ್ಕೆ ಉತ್ತರ ಕೊಡು. ನೀನಾಗೇ ಏನೂ ಕೇಳಬೇಡ, ತಲೆ ತಗ್ಗಿಸಿಕೊಂಡಿರು"[೪೭] ಈ ರೀತಿಯ ನೀತಿಪಾಠ ಗಂಡಿಗಿರುವುದಿಲ್ಲ. ಮದುವೆ ಮುಂಚೆ ಗಂಡು ಹೆಣ್ಣು ಪರಸ್ಪರ ಮಾತನಾಡಿ ಇಬ್ಬರ ಭಾವನೆಗೂ ಹೊಂದಿಕೊಂಡರೆ ಮದುವೆ ಮಾಡಿದರು ಅನ್ಯೋನ್ಯವಾಗಿರುತ್ತಾರೆಂಬುದು ಸಾಮಾನ್ಯ ಮನಃಸ್ಥಿತಿಯಾಗಿದೆ. ಸರಸ್ವತಿಯಂತಹವರ ಮಾತುಗಳು ಗಂಡಿನ ಮಾತುಗಳಿಗೆ ಆದ್ಯತೆ ನೀಡಿ ಏನನ್ನು ಮಾತನಾಡದೆ ಆತ ಹೇಳಿದ್ದಕ್ಕೆ ಒಪ್ಪಿಕೊಂಡವಳಂತೆ ಬದುಕುವುದು ಗಂಡಿಗೆ ಹೆಚ್ಚು ಪ್ರಾಧಾನ್ಯತೆ ಕೋಡುವುದನ್ನು ಹೇಳುತ್ತದೆ. ಏನೆಲ್ಲಾ ಮಾತನಾಡಿ ಸಂಶಯ ಪರಿಹರಿಸಿಕೊಳ್ಳಬೇಕೆಂಬ ಸ್ವರ್ಣಾಳಂತಹ ಹೆಣ್ಣುಮಕ್ಕಳು ಪುರುಷ ವ್ಯವಸ್ಥೆಯಲ್ಲಿ ಬಂಧಿಯಾಗುತ್ತಾರೆ.

ಪ್ರೇಮ ವಿವಾಹಗಳು ಹಿಂದಿನಿಂದಲು ನಡೆದುಕೊಂಡು ಬಂದಿವೆಯಾದರೂ ಪ್ರಸ್ತುತಕ್ಕಿಂತ ಕಡಿಮೆ ಎಂಬುದು ಸತ್ಯಸಂಗತಿ. ಹೆಣ್ಣು-ಗಂಡಿನ ಪ್ರೀತಿಯ ಕುರಿತು ಅಂದಿನಿಂದ ಇಂದಿನವರೆಗು ಹೆಣ್ಣಿನ ಪ್ರೀತಿಯನ್ನು, ಗಂಡಿನ ಪ್ರೀತಿಯನ್ನು ಅರ್ಥೈಸಿಕೊಳ್ಳುವುದರಲ್ಲು ತಾರತಮ್ಯತೆ ಕಂಡುಬರುತ್ತದೆ. ಅಂಥದ್ದೊಂದು ಕಥೆಯನ್ನು ಗೀತಾ ನಾಗಭೂಷಣ ಅವರ 'ಬದುಕು' ಕಾದಂಬರಿಯಲ್ಲಿ ಕಾಣಬಹುದು. ಪ್ರೀತಿ ಎಂಬ ಸೆಳೆತ ಗಂಡು-ಹೆಣ್ಣು ಇಬ್ಬರಲ್ಲು ಸಮನಾಗಿದ್ದರು, ಜಾತಿ-ಅಂತಸ್ತು ವಿಚಾರ ಬಂದಾಗ ಹೆಣ್ಣಿನ ಪ್ರೀತಿಯನ್ನು ಗಂಡಿನ ಪ್ರೀತಿಯಡಿಯಲ್ಲಿಟ್ಟು ಅಳತೆ ಮಾಡುವುದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ಕಾಶಮ್ಮ ಹದಿಹರೆಯದ ವಯಸ್ಸಿನಲ್ಲಿ ನಾಜೂಕಾದ ಗಂಡನಿಗಾಗಿ ಕನಸು ಕಾಣುತ್ತಿದ್ದವಳು. ಆಕೆಯ ಕನಸಿನ ರಾಜಕುಮಾರ ಊರಿನ ಗೌಡನ ಮಗನಾದ ಲಿಂಗರಾಜ ಇಬ್ಬರಲ್ಲು ಪ್ರೇಮಾಂಕುರವಾಗಿ ಊರು, ಕಾಡು ಎಲ್ಲಾ ಕಡೆ ಸುದ್ದಿ ಹಬ್ಬುತ್ತದೆ. ವಿಷಯ ತಿಳಿದವರು "ಅಂವಂದೇನು ಬಿಡು. ಹೇಳಿಕೇಳಿ ಗಂಡಸ ಮಗ"[೪೮] ಎಂದು ಹೇಳುವಲ್ಲಿಯೆ ಗಂಡು ಏನೆ ಮಾಡಿದರು ಒಪ್ಪಿತ ಎಂಬುದನ್ನು ಹೇಳುವಂತಿದೆ.

ಹೆಣ್ಣು ಸ್ವ-ಬದುಕನ್ನು ಕಟ್ಟಿಕೊಳ್ಳುವ ನಿರ್ಧಾರವನ್ನು ಕೆಡಕು ಮಾಡುವುದು ಸಮಾಜದ ನಿಯಮವಾಗಿಬಿಟ್ಟಿದೆ. ಅದಕ್ಕೆ ನ್ಯಾಯ ಪಂಚಾಯ್ತಿ ಸೇರಿದವರು ಹೇಳುವ ಮಾತುಗಳೆ ಸಾಕ್ಷಿಯಾಗಿವೆ. "ಲಿಂಗರಾಜಾ ಯೇನೋ ಗಂಡಸ ಮಗಾ..... ಹತ್ತು ಹೆಂಗಸರಿಗೆ ಮಗ್ಗಲದಾಗಿಟ್ಕೊಂಡು ಮಕ್ಕೋತಾನಂತ ತಿಳಿ ಗಂಡಸರಿಗೇನೂ ಐಬಿಲ್ಲ! ಆದರ ನಿನ್ನ್ ಮಗಳು? ಅಕಿಹಿಂಗ್ ಅವನ ತೆಲಿ ಕೆಡ್ಸಿ ಇವನ ಜತಿ ಬೆದಿಗಿ ಬಂದ ಮಣಕದಂಗೆ ಬೆನ್ನಹತ್ತಿ ಓಡ್ಯಾಡ್ತಾಳಂದ್ರ

ಯಾರ ಇಜ್ಜತ್ತು ಹರಾಜಾಗ್ತದ ಹೇಳು"[೪೯] ಎನ್ನುವಲ್ಲಿ 'ಇಜ್ಜತ್' (ಮರ್ಯಾದೆ) ಕೇವಲ ಹೆಣ್ಣು ಹೆತ್ತವರಿಗೆ. ಅದನ್ನು ಉಳಿಸಿಕೊಳ್ಳಬೇಕಾದವಳು ಹೆಣ್ಣು ಎಂಬಂತೆ ಬಿಂಬಿತವಾಗಿದೆ. ಇಲ್ಲಿ ಲಿಂಗರಾಜ ಮತ್ತು ಕಾಶಮ್ಮ ಇಬ್ಬರೂ ಪ್ರೀತಿಸುತ್ತಿರುವವರೆ ಆದರೂ ಸಮಾಜದಲ್ಲಿ ಲಿಂಗರಾಜನಿಗೆ ಗಂಡು ಎಂದು ಸಮಜಾಯಿಷಿ ಇರುವಂತೆ ಹೆಣ್ಣಿಗಿಲ್ಲ. ಹೆಣ್ಣು ಮಾನಮರ್ಯಾದೆಗೆ ಅಂಜಿ ಬದುಕಬೇಕು. ಇಲ್ಲದಿದ್ದರೆ ಆಕೆಯ ಮನೆತನದ ಮರ್ವಾದಿ ಹೋಗುತ್ತದೆ. ಗಂಡು ಏನೆ ಕಳೆದುಕೊಂಡರು ಗಂಡು ಎಂಬ ಪದ ಮರೆಮಾಚಿಸುತ್ತದೆ. ಸಮಾಜದಲ್ಲಿ ಪ್ರೀತಿ-ಪ್ರೇಮವೆಂದು ಹೋಗುವ ಸ್ತ್ರೀ-ಪುರುಷರ ಕುರಿತಂತೆ ಇರುವ ಅಭಿಪ್ರಾಯವನ್ನು ಹೇಳುತ್ತದೆ.

ವೀಣಾ ಶಾಂತೇಶ್ವರರವರ 'ಗಂಡಸರು' ಕಾದಂಬರಿಯಲ್ಲಿ ಶಂಕರ-ಶಾಂತಿ ಪ್ರೀತಿಸುತ್ತಿದ್ದು ಇಬ್ಬರಿಗು ಮದುವೆ ನಿಶ್ಚಯವಾಗಿರುತ್ತದೆ. ಸ್ತ್ರೀ ಸಮಾನತೆ ಕುರಿತು ಭಾಷಣ ಮಾಡಿ ಬಂದ ಶಾಂತಿಯ ವಿರುದ್ಧ ತನಗಿದೆಲ್ಲ ಇಷ್ಟವಿಲ್ಲವೆಂಬ ಅಧಿಕಾರ ಚಲಾಯಿಸುತ್ತಾನೆ. ಶಾಂತಿಯ ಮಹಿಳಾ ಪರವಾದ ಪ್ರಗತಿಪರ ಮಾತುಗಳನ್ನು ಕೇಳಿದ್ದನಾದರು ಹೆಂಡತಿಯಾಗುವವಳು ಎಂದು ಮನಸ್ಸಿಗೆ ಬಂದ ಕೂಡಲೇ ಅವಳ ಸ್ವಾತಂತ್ರ್ಯಕ್ಕೆ ಬರೆಹಾಕುತ್ತಾನೆ. ಇವರಿಬ್ಬರ ಸಂಬಂಧ ಮುರಿಯಲು ಶಂಕರನ ಮನೆಯವರು ಕೊಡುವ ಕಾರಣ "ಹುಡುಗಿ bold ಇದ್ದಾಳಂತ ಭಾಳ ಕಲತಾಳಂತ"[೫೦] ಎನ್ನುತ್ತಾ ಸಾಮಾನ್ಯವಾದ ಹುಡುಗಿ ಸಾಕು. ನಮ್ಮ ಸಂಸಾರ ತೂಗಿಸಿಕೊಂಡು ಹೋಗುವಂತಳಾಗಬೇಕು. ಎಂಬ ಮಾತುಗಳು ಬರುತ್ತವೆ. ಗಂಡಾದರೆ ಯಾವ ಭಾಷಣದಲ್ಲಾದರು ಭಾಗವಹಿಬಹುದು. ಯಾವ ವಿಚಾರಗಳ ಬಗ್ಗೆಯಾದರು ಚರ್ಚಿಸಬಹುದು. ಹೆಣ್ಣು ಮಾತ್ರ ಹೊರಗಿನ ಸಂಘಟನೆಗಳಲ್ಲಿ ಭಾಗವಹಿಸುವಂತಿಲ್ಲ. ಭಾಗವಹಿಸಿದರೆ ಮಹಿಳಾ ಗುಂಪಿನಿಂದ ಹೊರ ನಿಲ್ಲಿಸಿ ತುಚ್ಛವಾದ ಮಾತುಗಳಿಂದ ನಿಂದಿಸುತ್ತಾರೆ. ಸ್ತ್ರೀ ಸ್ವಾತಂತ್ರ್ಯ ಕುರಿತು ಮಾತನಾಡುವ ಮಾತ್ರಕ್ಕೆ ಸಂಸಾರ ತೂಗಿಸುವುದಿಲ್ಲವೆಂಬ ನಿರ್ಧಾರಕ್ಕೆ ಬರುವವರು ಸಮಾಜವನ್ನೆ ಸರಿಯಾಗಿ ತೂಗಿಸದವರು, ಹೆಣ್ಣಿನ ಸ್ವಾತಂತ್ರ್ಯಗಳನ್ನು ಕಡಿದು ತಮ್ಮ ಅಭಿಲಾಷೆಗಳಿಗೆ ತಕ್ಕಂತೆ ಬದುಕಬೇಕೆಂಬ ಅವರ ಸ್ವಾರ್ಥತನ ಪ್ರದರ್ಶಿತವಾಗುತ್ತದೆ.

ಸಾಮಾಜಿಕ ಕಾದಂಬರಿಗಳಲ್ಲಿ ಮದುವೆಗೂ ಮುಂಚೆ ಹೇಳುವ ನೀತಿಪಾಠಗಳು ಹೆಣ್ಣನ್ನು ಸ್ವಾತಂತ್ರ್ಯಹೀನಳನ್ನಾಗಿ ಮಾಡಿದೆ. ಲಜ್ಜೆ-ಸಂಕೋಚಗಳೊಂದಿಗೆ, ಭಯ, ಆತಂಕಗಳು ಹೆಣ್ಣಿನಲ್ಲಿ ಮೇಳೈಸಿಕೊಂಡಿರಬೇಕು. ಹಾಗಿದ್ದಾಗ ಮಾತ್ರ ಹೆಣ್ಣು ಎನಿಸಿಕೊಳ್ಳುತ್ತಿದ್ದಳು. ಇಂದು ಸ್ತ್ರೀಯರು ಮದುವೆಗೂ ಮುಂಚೆ 'ಜಬಾಲಾ' ಕಾದಂಬರಿಯ ಗೀತಾಳಂತೆ ವಿವಾಹ ಸಂದರ್ಶನವನ್ನು ಎದುರಿಸಬೇಕಿದೆ. ಪುರಾಣ ಕಾಲದಲ್ಲಿ ಬಾಳಸಂಗಾತಿ ಆರಿಸಿಕೊಳ್ಳುವುದು ಹೆಣ್ಣಿನ ಆಯ್ಕೆಯಾಗಿತ್ತು.

ವಿವಾಹದಲ್ಲಿ ಹೆಣ್ಣಿಗೆ ಆಯ್ಕೆಯಿತ್ತಾದರು ಪೂರ್ಣಪ್ರಮಾಣದಲ್ಲಿರಲಿಲ್ಲ ಎಂಬ ಸತ್ಯ ಕಾಣುತ್ತದೆ. ಹಿಂದೆ 'ಸ್ವಯಂವರ' ಪದ್ಧತಿಯಿಂದ ಕನಸಿನ ರಾಜಕುಮಾರನಿಗೆ ಹೂಮಾಲೆ ಹಾಕಿ ಸಂಸಾರದ ಜೀವನಕ್ಕೆ ಹೆಣ್ಣು ಪಾದಾರ್ಪಣೆ ಮಾಡುತ್ತಿದ್ದಳು. ಅಂದಿನ ಸಮಾಜದಲ್ಲಿ ರೂಪ–ಗುಣಕ್ಕಿಂತಲು, ಶಕ್ತಿ–ಸಾಮರ್ಥ್ಯಕ್ಕೆ ಹೆಚ್ಚಿನ ಮಹತ್ವವಿದ್ದುದ್ದರಿಂದ ಸಮರ್ಥ ರಾಜನ ಕೈಹಿಡಿಯುವುದು ಹೆಣ್ಣಿಗೆ ಅವಶ್ಯಕತೆಯೆಂಬಂತೆ ತೋರುತ್ತದೆ. ದುರ್ಬಲ ರಾಜರ ಆಕ್ರಮಣದಲ್ಲಿ ತನ್ನನ್ನು ರಕ್ಷಿಸಿಕೊಳ್ಳುವ ಭರವಸೆಯಿಂದಲೊ, ವೀರವಂತ ರಾಜನ ಹೆಂಡತಿ ಎಂದು ಬೀಗುವುದರಿಂದಲೊ ಸ್ವಯಂವರ ಸ್ತ್ರೀಪರವಾಗಿತ್ತು. ಅದರಿಂದಲೆ ಶೌರ್ಯಪ್ರದರ್ಶನದಂತಹ ಪರೀಕ್ಷೆಗಳನ್ನೊಡ್ಡಿ, ಗೆದ್ದವನನ್ನು ವರಿಸುವುದು 'ಸ್ವಯಂವರ'ದ ನಿಯಮವಾಗಿತ್ತು. ಇದು ಸಮವಯಸ್ಕರ, ಗುಣವಂತರ, ಶೀಲವಂತರಿಂದ ಕೂಡಿದ್ದರೆ ಹೆಣ್ಣು ಸಂತೋಷಿಸುತ್ತಿದ್ದಳು. 'ಸ್ವಯಂವರ' ಹೆಸರಿನಲ್ಲಿ 'ತೊಟ್ಟಿಲನ್ನು ತೂಗುವುದು ಮಗುವನ್ನು ಚಿವುಟುವುದು' ಎಂಬಂತೆ ಅಂದಿನ ಸಮಾಜ ಹೆಣ್ಣನ್ನು ಶೋಷಿಸುತ್ತಿದ್ದನ್ನು ಕಾದಂಬರಿಗಳಿಂದ ತಿಳಿಯುತ್ತದೆ. ವಯಸ್ಸಿನ ಅಂತರ ಎಷ್ಟಿದ್ದರು ಆತನನ್ನು ಮದುವೆಯಾಗುವುದು ಒಂದು ರೀತಿಯ ಶಿಕ್ಷೆಯಾದರೆ, ಶಕ್ತಿ ಪ್ರದರ್ಶಿಸುವವನು ಒಬ್ಬನಾದರೆ, ಮದುವೆಯಾಗುವುದು ಮತ್ತೊಬ್ಬನಾಗಿದ್ದದ್ದು ಮಗದೊಂದು ಕ್ರೂರ ಶಿಕ್ಷೆಯೇ ಆಗಿತ್ತು. ಇದು ಹೆಣ್ಣಿಗೆ 'ಸ್ವಯಂವರ' ಆಗಿರದೆ 'ಸಾಯುವ'ವರ (ವರ–ದೇವರಿಂದ ಬೇಡಿಕೆ)ವೇ ಆಗಿತ್ತು. ಮಹಾಭಾರತ ಕಾಲದಲ್ಲಿನ ಸ್ತ್ರೀಯರು ಇಂಥ ಪದ್ಧತಿಯಿಂದ ಪರಿತಪಿಸುವುದು ಎಂ.ಎಸ್.ವೇದಾರವರ 'ಜಯ' ಕಾದಂಬರಿಯಲ್ಲಿ ಬಿಂಬಿತವಾಗಿದೆ.

ಮಹಾಭಾರತದ ಹಿರಿಯನೆಂದೇ ಹೆಸರು ಪಡೆದಿರುವ ಭೀಷ್ಮ ಬ್ರಹ್ಮಚಾರಿಯಾಗಿರುತ್ತಾನೆ. ತಮ್ಮಂದಿರಿಗಾಗಿ ಸ್ವಯಂವರದಲ್ಲಿ ಭಾಗವಹಿಸುತ್ತಾನೆ. ಶೌರ್ಯದಿಂದ ಹೆಣ್ಣನ್ನು ಪಡೆದುಕೊಳ್ಳುವುದೇ ಹೆಚ್ಚೆಂದು ಭಾವಿಸಿದ ಭೀಷ್ಮ ಅದನ್ನು ತನ್ನ ಶೌರ್ಯ ಪ್ರದರ್ಶನಕ್ಕಾಗಿಯೆ ಉಪಯೋಗಿಸಿಕೊಂಡಿದ್ದ. "ಮೂವರೂ ಕನ್ಯೆಯರನ್ನು ಒಟ್ಟಿಗೆ ಕರೆದುಕೊಂಡು ಹೊರಟು ವಿರೋಧಿಸುವವರು ಯುದ್ಧಕ್ಕೆ ಬರಲಿ ಎಂದಿದ್ದ. ಹಾಗೆ ಬಂದ ನೂರಾರು ರಾಜರನ್ನು ಏಕಕಾಲಕ್ಕೆ ಎದುರಿಸಿ ಗೆದ್ದಿದ್ದ"[೫೧] ಎಂದು ಹೇಳಿರುವ ಲೇಖಕಿಯ ಮಾತುಗಳೆ ವಿಶ್ಲೇಷಣಾತ್ಮಕವಾಗಿವೆ. ಶಕ್ತಿ ಪ್ರದರ್ಶನದ ಮೂಲಕ ಹೆಣ್ಣನ್ನು ಗೆಲ್ಲುವುದು ಸಂತಸದ ವಿಚಾರವೆ. ಭೀಷ್ಮ ಮೂರು ಹೆಂಗಳೆಯರನ್ನು ತನಗಾಗಿ ಗೆಲ್ಲುವುದಿಲ್ಲ. ತನ್ನ ಒಡಹುಟ್ಟಿದವರಿಗಾಗಿ ಗೆಲ್ಲುತ್ತಾನೆ. ಪೂರ್ವಾಪರಗಳ ಅರಿವಿರದ ಅಂಬೆ, ಅಂಬಿಕೆ, ಅಂಬಾಲಿಕೆಯರಿಗೆ ನಿರಾಸೆಯಾಗುತ್ತದೆ. ಹೆಣ್ಣಿನ ಮನಸ್ಸಿಗೆ ಆಸೆಯ ಬೀಜವನ್ನು ಬಿತ್ತುವ ಭೀಷ್ಮ ವಿಚಿತ್ರವೀರ್ಯ, ಚಿತ್ರಾಂಗದವರಂತಹ ದುರ್ಬಲರಿಗೆ ವಿವಾಹ ಮಾಡಿಸುತ್ತಾನೆ. ತಮ್ಮಂದಿರಿಗೆ

ಮಾತ್ರವಲ್ಲದೆ, ಆತನ ಮಕ್ಕಳಾದ ಪಾಂಡು–ಧೃತರಾಷ್ಟ್ರನಿಗು ಭೀಷ್ಮನೆ ಸ್ವಯಂವರದಲ್ಲಿ ಭಾಗವಹಿಸಿ ಶೌರ್ಯ ಪ್ರದರ್ಶನದಿಂದ ಹೆಣ್ಣನ್ನು ತರುತ್ತಾನೆ. ಪುರುಷ ಪ್ರಾಬಲ್ಯ ಸ್ತ್ರೀಯರನ್ನು ತಮ್ಮ ಸ್ವೇಚ್ಛಾಚಾರಕ್ಕೆ ಬಳಸಿಕೊಳ್ಳುತ್ತಿದ್ದರು, ಎಂಬುದನ್ನು ಕಾದಂಬರಿ ಒಳಗೊಂಡಿದೆ. ಸ್ವಯಂವರವನ್ನು ಮರೆಮಾಚುವಂತಹ ಕೃತ್ಯಗಳು ಪುರುಷ ರಾಜಕಾರಣದಲ್ಲಿ ಹೆಣ್ಣಿಗೆ ವಿರುದ್ಧವಾಗಿ ನಡೆಯುತ್ತಿದ್ದವು.

ಪ್ರಬಲ–ದುರ್ಬಲ ರಾಜರುಗಳ ನಡುವೆ ಪರಿಹಾರ ಮಾರ್ಗದಲ್ಲಿ ಹೆಣ್ಣು ಸಿಲುಕುತ್ತಿದ್ದಳು. ದುರ್ಬಲರನ್ನು ಸೋಲಿನ ಸುಳಿಯಲ್ಲಿ ಸಿಲುಕಿಸುವ ರಾಜರು, ಆತನ ಮಗಳನ್ನು ವರಿಸಿ ಪ್ರಬಲತೆಯನ್ನು ಮೆರೆದರೆ, ಹೋರಾಡಲು ಶಕ್ತರಾಗದವರು ಅದನ್ನು ಒಪ್ಪಿಕೊಳ್ಳುವವರಾಗಿದ್ದರು. ಸೋಲು–ಗೆಲುವಿನ ನಡುವೆ ಪುರುಷನ ಸ್ವಾರ್ಥಕ್ಕೆ ಸಿಲುಕಿ ಜೀವನದುದ್ದಕ್ಕು ನೋವಿನ ಕಹಿ ಉಣ್ಣುತ್ತ ಬದುಕುವ ಸ್ಥಿತಿ ಮಾತ್ರ ಹೆಣ್ಣಿನದಾಗಿತ್ತು. ಪುರಾಣ ಕಾಲದ ಸ್ತ್ರೀಯರು ಹೆಚ್ಚಾಗಿ ಇಂಥ ಶಿಕ್ಷೆಗೆ ಗುರಿಯಾದವರೆ. ಎಂ.ಎಸ್.ವೇದಾರವರ ‘ಜಯ’ ಕಾದಂಬರಿಯಲ್ಲಿನ ಗಾಂಧಾರಿ, ಭಾನುಮತಿ ಸ್ವಇಚ್ಛೆಯಿಂದ ಸಂಗಾತಿಯನ್ನು ಆರಿಸಿಕೊಂಡವರಲ್ಲ. “ಭಾನುಮತಿ ಆ ವಂಶದ ಸೊಸೆಯಾಗುವುದರಲ್ಲಿ ಒಪ್ಪಿಗೆ, ಪ್ರೀತಿಯಂತಹ ಅಂಶಗಳಿಗಿಂತ ಅಪ್ಪನನ್ನು ಕಾಡಿದ್ದು ಭಯ, ಭೀತಿಗಳಾದರೆ, ಅವಳನ್ನು ಕಾಡಿದ್ದುದು ಅಪ್ಪನನ್ನು ಉಳಿಸುವ ಆತಂಕವಷ್ಟೆ”[೫೨] ಎನ್ನುವಲ್ಲಿ ತಂದೆಯನ್ನು ಸಾವಿನಿಂದ ಪಾರುಮಾಡಲು ಭಾನುಮತಿ ಜೀವಂತ ಶವವಾಗಿ ಉಳಿಯುವುದಾಗಿದೆ. ಗಾಂಧಾರಿ ತಂದೆ ಸುಬಲರಾಜನು ದುರ್ಬಲನಾಗಿದ್ದವನು. ಅದನ್ನರಿತು ಗಾಂಧಾರಿ ಧೃತರಾಷ್ಟ್ರನನ್ನು ನೋಡದೆಯೇ ಒಪ್ಪಿಕೊಳ್ಳುತ್ತಾಳೆ. ಗಾಂಧಾರಿ ಧೃತರಾಷ್ಟ್ರನನ್ನು ಮೊದಲು ನೋಡಿದ್ದು, ಮದುವೆ ಮಂಟಪದಲ್ಲಿ. ಕುರುಡಾಗಿರುವುದನ್ನು ಕಂಡರು ಸಹಿಸಿಕೊಳ್ಳುವುದು ‘ಜಯ’ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ಇಂತಹ ಸಂಧಿಗ್ದ ಪರಿಸ್ಥಿತಿಗೆ ಬಲಿಯಾಗಿ ನಲುಗುವ ಹೆಣ್ಣುಮಕ್ಕಳು ರಾಮಾಯಣ ಕಾಲದಲ್ಲು ಇದ್ದರು. ಅದನ್ನು ಎಚ್.ವಿ.ಸಾವಿತ್ರಮ್ಮನವರ ‘ಸೀತೆ–ರಾಮ–ರಾವಣ’ ಕಾದಂಬರಿಯಲ್ಲಿ ಕಾಣಬಹುದು. ತಂದೆಯ ಮಾನ–ಪ್ರಾಣಗಳಿಗಾಗಿ ಹೆದರಿ ವಿವಾಹವಾಗುವುದರಲ್ಲಿ ಎಂ.ಎಸ್.ವೇದಾರವರ ‘ಜಯ’, ಎಚ್.ವಿ.ಸಾವಿತ್ರಮ್ಮನವರ ‘ಸೀತೆ–ರಾಮ–ರಾವಣ’ ಕಾದಂಬರಿಗಳು ಸಾಮ್ಯತೆ ಪಡೆದಿವೆ. ದಶರಥನ ಮೊದಲ ಪತ್ನಿ ಕೌಸಲ್ಯೆಯನ್ನು ಹೊರತುಪಡಿಸಿ ಸುಮಿತ್ರೆ, ಕೈಕೆ ದಶರಥನನ್ನು ವಿವಾಹವಾಗುವಲ್ಲಿ ಇವರೂ ಬಲಿಯಾದವರೆ. “ದಶರಥ ರಾಜನ ಪರಾಕ್ರಮಕ್ಕೆ ಹೆದರಿದ ಮುದಿ ತಂದೆಯನ್ನು ಬಿಟ್ಟುಕೊಡಲಾರದೆ ಈ ಮದುವೆಗೆ ಒಪ್ಪಿದೆ ಅಕ್ಕಾ”[೫೩] ಎಂದು ಸುಮಿತ್ರೆ ಹೇಳುವಲ್ಲಿ ತಾನಾಗಿ ಸವತಿಯಾಗಲು ಬಯಸಿದವಳಲ್ಲ. ಎಂಬುದನ್ನು ಸಾರಿ

ಹೇಳುವಂತಿದೆ. ಒಬ್ಬ ರಾಜನಿಗೆ ಬಹುಪತ್ನಿಯರಿದ್ದರು ಆತನ ಶಕ್ತಿ, ಶೌರ್ಯಗಳಿಗೆ ಹೆದರಿ ಮದುವೆಯಾಗುವುದು ಹೆಣ್ಣಿನ ದೌರ್ಬಲ್ಯವಾಗಿತ್ತು. ಮತ್ತೊಬ್ಬ ಹೆಣ್ಣು ಅತೀ ಸುಂದರಿಯಾದ ವಯಸ್ಸಿನಲ್ಲಿ, ಚಿಕ್ಕವಳಾದರೂ ದಶರಥನನ್ನು ವಿವಾಹವಾಗುವುದು ಅನಿವಾರ್ಯವು, ವಿವಾಹದ ನಂತರ ಹೊಂದಿಕೊಳ್ಳುವುದು ಅವಶ್ಯಕವು ಎಂಬುದನ್ನು ಹೇಳುತ್ತದೆ.

ಸೀತೆ, ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರ ವಿವಾಹವು ಈ ನೆಲೆಯಲ್ಲಿಯೆ ಸಾಗಿದೆ. ಸೀತೆಯನ್ನು ವರಿಸಲು, ರಾಮ ಶಿವಧನುಸ್ಸು ಎತ್ತುತ್ತಾನೆ. ಅದರಲ್ಲಿ ಯಶಸ್ವಿಯೂ ಆಗುತ್ತಾನೆ. ರಾಮನ ಶೌರ್ಯಕ್ಕೆ ಮರುಳಾದ ಜನಕ ಮಹಾರಾಜ ಸಹೋದರನ ಮಕ್ಕಳಾದ ಮೂರು ಹೆಣ್ಣನ್ನು ರಾಮನಿಗೆ ಮದುವೆ ಮಾಡಲು ನಿರ್ಧರಿಸುತ್ತಾನೆ. ಬಹುಪತ್ನಿತ್ವ ಪದ್ಧತಿ ರೂಡಿಯಲ್ಲಿತ್ತಾದರು ಆ ಹೆಣ್ಣು ಮಕ್ಕಳಿಗೆ ಅಭಿಪ್ರಾಯ ಕೇಳದಿರುವುದು ಪುರುಷನ ನಿರ್ಧಾರವೆ ಅಂತಿಮ ಎಂಬುದನ್ನು ಹೇಳುತ್ತದೆ. ರಾಮ ಏಕಪತ್ನಿವ್ರತಸ್ಥನಾದ್ದರಿಂದ ಸೀತೆಯನ್ನು ರಾಮನಿಗೆ ಕೊಟ್ಟು, ರಾಮನ ಶೌರ್ಯಕ್ಕೆ ಮಾರುಹೋಗಿದ್ದರಿಂದ ಜನಕ ಮಹಾರಾಜ ಭರತನಿಗೆ–ಮಾಂಡವಿ, ಲಕ್ಷ್ಮಣನಿಗೆ–ಊರ್ಮಿಳೆ, ಶತ್ರುಘ್ನನಿಗೆ–ಶ್ರುತಕೀರ್ತಿಯರನ್ನು ವಿವಾಹ ಮಾಡುವ ನಿರ್ಧಾರಕ್ಕೆ ಬರುತ್ತಾನೆ. ದಶರಥನಿಂದ ಈ ತೀರ್ಮಾನ ಕೇಳಿದ ಕೌಸಲ್ಯೆ "ಭರತ–ಶತ್ರುಘ್ನರು ಹುಡುಗಿಯರನ್ನು ನೋಡದೆಯೇ, ಒಪ್ಪಿಗೆ ಸೂಚಿಸದೆಯೇ ನೀವು ಹೇಗೆ ಒಪ್ಪಿಗೆ ಕೊಟ್ಟಿರಿ?"[೫೪] ಎಂದು ಪುರುಷ ಪರವಾಗಿ ಹೇಳುವ ಮಾತುಗಳು ಪುರುಷರಂತೆ ಸ್ತ್ರೀಯರು ನೋಡದಿರುವುದನ್ನು ಪರಿಗಣಿಸುವುದಿಲ್ಲ. ವಿವಾಹದಲ್ಲಿ ಗಂಡಿಗೆ ಮಾನ್ಯತೆ ನೀಡಿರುವುದು ಮುಂದೆ ಹೆಂಡತಿಯಾದವಳನ್ನು ಹಿಂಸೆಗೆ ಗುರಿಪಡಿಸಬಹುದು ಎಂಬ ಆತಂಕ ಕಾಣುತ್ತದೆ.

ಮಹಾಭಾರತದ ಗಾಂಧಾರಿ–ಭಾನುಮತಿ, ರಾಮಾಯಣದ ಸುಮಿತ್ರೆ ಇವರೆಲ್ಲರು ದುರ್ಬಲ ತಂದೆಯ ರಕ್ಷಣೆಗಾಗಿ ಮದುವೆಯಾದವರು. ಇವರಿಗೆ ಇಷ್ಟವಿದೆಯೆ ಎಂಬ ಅಭಿಪ್ರಾಯವನ್ನು ಕೇಳುತ್ತಿರಲಿಲ್ಲ. ಪ್ರಬಲ ರಾಜನಾದವನು ಕೂಡ ತಿರಸ್ಕರಿಸುತ್ತಿರಲಿಲ್ಲ. ಬಹುಪತ್ನಿತ್ವ ಆಚರಣೆಯಲ್ಲಿದ್ದರಿಂದ ಹೆಚ್ಚು ಪತ್ನಿಯರನ್ನು ಪಡೆದಷ್ಟು ರಾಜರ ಕೀರ್ತಿ ಹೆಚ್ಚಾಗುತ್ತಿತ್ತು. ಇಂತಹವರ ಮನಸ್ಥಿತಿಯವರ ನಡುವೆ, ಮುದುಕ, ರೋಗಿಷ್ಟ, ದುರ್ಬಲ, ಅರಸಿಕ ರಾಜರನ್ನು ಕೈಹಿಡಿದು ಬಾಳುವುದು ಕಾದಂಬರಿಗಳಲ್ಲಿ ಕಂಡುಬಂದಿದೆ. 'ಸ್ವಯಂವರ' ಮೇಲುನೋಟಕ್ಕೆ ಸ್ತ್ರೀಪರವಾಗಿದ್ದರು, ಅಲ್ಲಿಯೂ ಹೆಣ್ಣು ಹೇಗೆ ಶೋಷಿತಳಾಗಿದ್ದಳು ಎಂಬುದನ್ನು ತಿಳಿದುಕೊಳ್ಳಬಹುದು.

ಮಹಾಭಾರತ ಕಥಾಧಾರಿತ ಎಸ್.ವಿ.ಪ್ರಭಾವತಿಯವರ 'ಕುಂತಿ' ಕಾದಂಬರಿಯಲ್ಲು ದ್ರೌಪದಿ 'ಸ್ವಯಂವರ' ಬಹುಪತ್ನಿತ್ವವನ್ನು ಒಳಗೊಂಡಿರುವುದನ್ನು ಹೇಳುತ್ತದೆ. ದ್ರೌಪದಿ 'ಸ್ವಯಂವರ'ದಲ್ಲಿ ಭಾಗವಹಿಸಿದವನು ಅರ್ಜುನ. ದ್ರೌಪದಿ ಸೇರಬೇಕಾದವಳು ಅರ್ಜುನನಿಗೆ. ಆದರೆ ಐವರೂ ಮದುವೆಯಾಗುವ ಸಂದರ್ಭ ಒದಗುತ್ತದೆ. ಮುಂದೆ ಒಬ್ಬೊಬ್ಬರೊಂದಿಗೆ ಒಂದೊಂದು ವರ್ಷ ಸಂಸಾರ ಹೂಡಲು ತೀರ್ಮಾನವಾಗುತ್ತದೆ. ಇಲ್ಲಿ ದ್ರೌಪದಿಗೆ ಮನಸ್ಸಿದ್ದದ್ದು ಅರ್ಜುನನ ಮೇಲೆ. ಧರ್ಮ, ನಂಬಿಕೆ, ಮಾತು ಇವುಗಳಿಗೆ ಕೊಡುವ ಪ್ರಾಧಾನ್ಯತೆ ಹೆಣ್ಣಿನ ಮನಸ್ಸಿಗೆ ಕೊಡದಿರುವುದು ವ್ಯಕ್ತವಾಗುತ್ತದೆ. ಬಹುಪತ್ನಿತ್ವದಿಂದಾಗಲಿ, ಬಹುಪತಿತ್ವದಿಂದಾಗಲಿ ಹೆಣ್ಣಿಗೆ ಮಾನ್ಯತೆ ಇಲ್ಲದಿರುವುದು ಇದರಿಂದ ತಿಳಿಯುತ್ತದೆ.

ಒಂದು ಹೆಣ್ಣು ಅವಿವಾಹಿತಳಾಗಿದ್ದರು ತಾಯಿಯಾಗಲು "ಆರ್ಥಿಕ ಮುಗ್ಗಟ್ಟು, ಅನಾರೋಗ್ಯಕರ ಕೌಟುಂಬಿಕ ಹಿನ್ನಲೆ, ನಿರ್ಲಕ್ಷತನ, ಪ್ರೇಮ–ಕಾಮಗಳ ಬಗ್ಗೆ ಸರಿಯಾದ ಅರಿವು ಇಲ್ಲದಿರುವುದು, ಕೌಟುಂಬಿಕ ಸಂಬಂಧಗಳು ಹಾರೀಕವಾಗಿಲ್ಲದಿರುವುದು, ಆಕ್ರಮಣಶೀಲತೆ, ಅಜ್ಞಾನ, ವಂಚನೆ ಹಾಗೂ ಲೈಂಗಿಕ ಹಲ್ಲೆ, ಕಾಮುಕತನ ಹಲವಾರು ಕಾರಣಗಳು"[೫೫] ಕಾಣಸಿಗುತ್ತವೆ. ಕಾದಂಬರಿಯ ನಾಯಕಿ ಹದಿಮೂರು ವರ್ಷದ ಕುಂತಿಯ ಅವಿವಾಹಿತ ತಾಯ್ತನಕ್ಕೆ ಕಾಮುಕತನ ಕಾರಣವಾಗಿದೆ. ದುರ್ವಾಸರ ಸೇವೆಯಲ್ಲಿ ನಿರತಳಾದ ಕುಂತಿ ಆತನೊಂದಿಗೆ ಮೈಮರೆಯುತ್ತಾಳೆ. ಕುಂತಿ ಬಯಸಿ ಬಂದವಳೆ ಆದರು ಲೋಕಜ್ಞಾನಿಗಳಾದ ದೂರ್ವಾಸರು ತಿಳುವಳಿಕೆ ನೀಡಿ ಸಮಾಜದ ನಿಂದನೆಯಿಂದ ತಪ್ಪಿಸಬಹುದಿತ್ತು. ಕುಂತಿ ವಯಸ್ಸು ಹುಡುಗಾಟಿಕೆಯದಾಗಿದ್ದರೆ, ದೂರ್ವಾಸರು ಅನುಭವಸ್ಥ ವಯಸ್ಸಿನವರು. ಬ್ರಹ್ಮಚಾರಿಗಳು, ತುಂಟ ಹೆಣ್ಣನ್ನು ತಿದ್ದಲಿಲ್ಲ ಬದಲಿಗೆ ದೂರ್ವಾಸರು ಸಂಯಮ ಕಳೆದುಕೊಂಡರು. "ಪ್ರಾಯ ತುಂಬಿದ ಪ್ರಗಲ್ಭ ಚಂಚಲ ಚೆಲುವೆಯನ್ನೇ ಅವರ ಕಣ್ಣು ಅರಸುತ್ತಿತ್ತು"[೫೬] ಎನ್ನುವಲ್ಲಿ ದೂರ್ವಾಸರು ಮೋಹಿತರಾಗಿದ್ದರೆಂಬುದು ಸಾಬೀತಾಗುತ್ತದೆ. ದೂರ್ವಾಸರು–ಕುಂತಿ ಇಬ್ಬರು ಮೈಮರೆಯುವಲ್ಲಿ ಸಹಭಾಗಿಗಳಾದರೆ, ದುಃಖಕ್ಕೆ ಕುಂತಿ ಮಾತ್ರ ಭಾಜನಳಾಗುತ್ತಾಳೆ. ಸಮಾಜದಲ್ಲಿ ಮಗುವಿನ ಆರೈಕೆ, ತಾಯಿಗೆ ಸೀಮಿತಗೊಳಿಸಿವೆ. ಮಗುವಿನ ಜನನಕ್ಕೆ ಹೆಣ್ಣು, ಗಂಡು ಕಾರಣಕರ್ತರಾದರು, ಅವಿವಾಹಿತ ಹೆಣ್ಣು ಇಂಥ ತಪ್ಪಿಗೆ ಒಳಗಾದರೆ ನಿಂದನೆಗೆ ಗುರಿಯಾಗುತ್ತಾಳೆ. ಗಂಡು ದೋಷಮುಕ್ತ–ಋಣಮುಕ್ತನಾದರೆ ಹೆಣ್ಣು ದೋಷವಂತಳಾಗುತ್ತಾಳೆ. ಅವಿವಾಹಿತ ಪುರುಷನಿಗಿಲ್ಲದ ಕಳಂಕವನ್ನು ಸ್ತ್ರೀ ಮೇಲೆ ಹೇರಿದೆ. ಇದನ್ನರಿತು ಹೆಂಗಳೆಯರು ಎಚ್ಚರಿಕೆಯಿಂದ ಬದುಕಬೇಕಾಗಿದೆ. ಸ್ವಇಚ್ಛೆಯಿಂದಲೊ, ಅತ್ಯಾಚಾರದಿಂದಲೊ ಲೈಂಗಿಕ ಸಂಪರ್ಕ ಹೊಂದುವ ದೂರ್ವಾಸರಂತಹವರು

ತಮ್ಮ ಬಯಕೆಗಳನ್ನು ಈಡೇರಿಸಿಕೊಂಡು ಸಮಾಜದಲ್ಲಿ ತಲೆ ಎತ್ತಿ ನಡೆದರೆ, ತಮ್ಮ ತಪ್ಪಿಲ್ಲದಿದ್ದರು ಪುರುಷ ದೌರ್ಜನ್ಯಕ್ಕೆ ಒಳಗಾಗಿ ಹೆಣ್ಣು ತಲೆತಗ್ಗಿಸಿ ನಡೆಯುವಂತಾಗಿದ್ದಾಳೆ. ಕುಂತಿ ಈ ವಿಷಯದಲ್ಲಿ ಮಗುವಿನ ತಾಯಿಯಾಗಿದ್ದನ್ನು ಮುಚ್ಚಿಡುವುದು ಮುಂದೆ ತಾಯಿಯಾದ ಹೆಣ್ಣನ್ನು ಯಾರೂ ಮದುವೆಯಾಗುವುದಿಲ್ಲ ಎಂಬ ಕಾರಣದಿಂದ. ಹಾಗೆಂದು ಮದುವೆಯಾಗದೆ ಏಕಾಂಗಿಯಾಗಿ ಬದುಕುವ ಸ್ಥಿತಿ ಸ್ತ್ರೀಗೆ ಇರಲಿಲ್ಲ. ಇಂಥ ಘಟನೆಗಳು ಇವತ್ತಿಗು ಜರುಗುತ್ತಿವೆ. ಈ ನಿಟ್ಟಿನಲ್ಲಿ ಸಮಾಜದ ಮನಃಸ್ಥಿತಿಗಳು ಬದಲಾಗಬೇಕಿದೆ. ಹೆಣ್ಣಿನ ಈ ಕೃತ್ಯಕ್ಕೆ ಪೂರ್ವಪರ ತಿಳಿದು ನ್ಯಾಯ ದೊರಕಿಸಬೇಕಾಗಿದೆ. ಸ್ತ್ರೀಯರೂ ಇದನ್ನರಿತು ತಮ್ಮ ರಕ್ಷಣೆಯನ್ನು ತಾವು ಮಾಡಿಕೊಳ್ಳುವತ್ತ ಗಮನ ಹರಿಸಬೇಕಿದೆ.

ಅವಿವಾಹಿತ ಹೆಣ್ಣು ತಾಯಿಯಾಗುವುದೆ ಮಹಾಪರಾಧವೆಂಬಂತೆ ಕಾಣುವ ಸಮಾಜ ತಮಗೆ ಹೇಗೆ ಬೇಕೊ ಹಾಗೆ ಹೆಣ್ಣನ್ನು ಬಳಸಿಕೊಳ್ಳುತ್ತಿತ್ತು. ಅನುಪಮಾ ನಿರಂಜನರವರ 'ಮಾಧವಿ' ಕಾದಂಬರಿ ಮೇಲಿನ ಮಾತಿಗೆ ಪೂರಕವಾಗಿ ರಚಿತವಾಗಿದೆ. ಹದಿಹರೆಯದ ವಯಸ್ಸಿನಲ್ಲಿದ್ದ ಮಾಧವಿ "ತಾನೇ ಮೆಚ್ಚಿದ ರಾಜಕುಮಾರನನ್ನು ಸ್ವಯಂವರದಲ್ಲಿ ಆರಿಸಿಕೊಳ್ಳುವ ಹಕ್ಕಿದೆ ತನಗೆ. ನಿಜವಾಗಿಯೂ ತಾನು ಒಪ್ಪಿ ಕೈ ಹಿಡಿದವನೊಡನೆ ಬಾಳುವುದು ಎಂಥ ಸೌಭಾಗ್ಯ! ತನ್ನನ್ನು ಮನ:ಪೂರ್ವಕ ಪ್ರೇಮಿಸುವ, ಆದರಿಸುವ, ಗೌರವಿಸುವ ರಾಜಕುಮಾರ. ಅವನಿಗಾಗಿ ಸರ್ವಸ್ವವನ್ನೂ ತ್ಯಾಗ ಮಾಡುವ ತಾನು! ಆಗ ಪ್ರಪಂಚದಲ್ಲಿ ತನಗಿಂತ ಹೆಚ್ಚು ಪುಣ್ಯಶಾಲಿಗಳಿಲ್ಲ"[೫೭] ಎಂದು ಕನಸು ಕಂಡವಳು. ಅವಳು ಆ ಕನಸಿನಲ್ಲಿಯೆ ತೃಪ್ತಿಯನ್ನು ಕಾಣಬೇಕಾಗಿತ್ತು. ಆ ಕನಸು ನನಸಾಗದಿರಲು ಆರು ಜನ ಪುರುಷರ ಕೈಗೆ ಸಿಲುಕಿ 'ಸ್ವಯಂವರ'ವನ್ನೆ ಧಿಕ್ಕರಿಸಿ ನಡೆಯುವ ಸ್ಥಿತಿಗೆ ತಲುಪುವುದು ಹೆಣ್ಣಿನ ನೋವಿನ ಒಳಪದರಗಳನ್ನು ಹೇಳುತ್ತದೆ.

ಗಾಲವನಿಂದ ಪ್ರಾರಂಭವಾಗಿ ತಂದೆಯೂ ಸೇರಿದಂತೆ ನಾಲ್ವರು ಕಾಮುಕರಿಂದ ಶೋಷಣೆಗೆ ಒಳಗಾಗುತ್ತಾಳೆ. ಮೊದಲು "ಗಾಲವನಿಗೆ ಬೇಕಾದ ಎಂಟುನೂರು ಕುದುರೆಗಳಿಲ್ಲದ ಹರ್ಯಶ್ವ ಒಂದು ವರ್ಷದವರೆಗೆ ತಾನು ಮಾಧವಿಯನ್ನು ಭೋಗಿಸುವುದಾಗಿಯೂ ಬದಲಾಗಿ ಇನ್ನೂರು ಕುದುರೆಗಳನ್ನು ಕೊಡುವುದಾಗಿಯೂ ಮಿಕ್ಕ ಕುದುರೆಗಳಿಗೆ ಪುನ: ಮಾಧವಿಯನ್ನು ಬೇರೊಬ್ಬ ರಾಜನಲ್ಲಿರಿಸಬಹುದೆಂದೂ ಸೂಚಿಸುತ್ತಾನೆ. ಪೃಥ್ವೀಪತಿಯೊಬ್ಬರ ಶೋಷಣೆಯ ರೀತಿ ಇದು"[೫೮] ಇವನ ಹಾದಿಯಲ್ಲಿ ಒಂದೊಂದು ವರ್ಷದ ಮಟ್ಟಿಗೆ ಗುರುದಕ್ಷಿಣೆಯ ಫಲವಾಗಿ ಶೋಷಣೆಗೊಳಪಡುತ್ತಾಳೆ.

ಕಾಶೀನಗರದ ದಿವೋದಾಸ “ನಾನು ಪರನಾರೀ ಸಹೋದರ ಅಗ್ನಿಸಾಕ್ಷಿಯಾಗಿ ಕೈಹಿಡಿದವಳು ಮಾತ್ರ ಮಡದಿ. ವಂಶಕ್ಕೆ ಪವಿತ್ರತೆ ಬರಬೇಕಾದ್ರೆ ಇಂಥ ಶಾಸ್ತ್ರೋಕ್ತ ಸಂಬಂಧವಾಗ್ಬೇಕು”[೫೯] ಇಂಥ ಮಾತುಗಳು ಪವಿತ್ರತೆಯ ಅರ್ಥವನ್ನೆ ಕಳೆದುಕೊಳ್ಳುತ್ತವೆ. ‘ಪರನಾರೀ ಸಹೋದರ’ ಎಂಬ ಹೆಸರಿನಲ್ಲಿ ಬಯಸಿದ ಹೆಂಗಳೆಯರನ್ನು ಸಂಭೋಗಿಸಲು ವಿವಾಹದ ಮೂಲಕ ಸ್ವಾತಂತ್ರ್ಯ ಕಂಡುಕೊಳ್ಳುವುದು ಸೂಕ್ಷ್ಮವಾಗಿ ಗ್ರಾಹ್ಯವಾಗುತ್ತದೆ. “ನೂರಾರು ಹೆಣ್ಣುಗಳೊಡನೆ ಸಂಭೋಗ ಮಾಡಿದ ಈ ಮಹಾರಾಜ ಪವಿತ್ರನೇ? ಹರ್ಯಶ್ವನೊಂದಿಗೆ ಮಲಗಿ ಈಗ ಇವನ ಜೊತೆ ಬಾಳಲು ಬಂದಿರುವ ತಾನು ಪವಿತ್ರಳೇ”[೬೦] ಎಂದು ಮಾಧವಿ ಹೇಳುವ ಮಾತುಗಳಲ್ಲಿ ಪುರುಷಪ್ರಧಾನ ಸಮಾಜ ಪಾವಿತ್ರತೆಗೆ ಕೊಡುವ ಅರ್ಥವನ್ನು ಹೇಳುತ್ತದೆ. ಪಾವಿತ್ರತೆ ಹೆಸರಲ್ಲಿ ಮದುವೆಯಾಗುವ–ಬಿಡುವ ಸಂಪ್ರದಾಯಗಳು ಕಂಡುಬಂದಿದೆ.

ಕಾದಂಬರಿಯಲ್ಲಿ ರಾಜರು, ಮುನಿ ವಿಶ್ವಾಮಿತ್ರನು ಪ್ರತಿಫಲಾಪೇಕ್ಷಿಗಳಾಗಿದ್ದಾರೆ. ತಲಾ ೨೦೦ ಕುದುರೆಗಳಿಗೆ ಹೆಣ್ಣನ್ನು ಅನುಭೋಗಿಸಿ ಅವಳಿಂದ ಮಗುವನ್ನು ಪಡೆಯುವುದು ಅವರ ಸ್ವಾರ್ಥವನ್ನು ಬಿಂಬಿಸಿದೆ. ಯಾರೊಬ್ಬರು ಆಕೆಯ ನೋವುಗಳಿಗೆ ಸ್ಪಂದಿಸುವುದಿಲ್ಲ. ಹರ್ಯಶ್ವ, ದಿವೋದಾಸ, ಉಶೀನರ, ವಿಶ್ವಾಮಿತ್ರ ಒಂದೊಂದು ಗಂಡು ಮಗು ಪಡೆದು ೮೦೦ ಕುದುರೆಗೆ ನಾಲ್ಕು ಗಂಡು ಮಕ್ಕಳನ್ನು ಪಡೆಯುತ್ತಾರೆ. ಪ್ರತಿಫಲಾಪೇಕ್ಷೆಯಿಲ್ಲದವಳು ಮಾಧವಿ ಎಲ್ಲವನ್ನು ಕಳೆದುಕೊಂಡು ಬರಿಗೈಯಾಗುತ್ತಾಳೆ. ತಾನು ಹೆತ್ತ ಮಕ್ಕಳು ಇಲ್ಲದೆ, ಪುರುಷ ರಾಜಕಾರಣದಲ್ಲಿ ಅನುಭವಿಸಿದ್ದ ಯಾತನೆಗಳಿಂದ ಕಂಡಿದ್ದ ಕನಸನ್ನು ನುಚ್ಚು ನೂರು ಮಾಡಿಕೊಳ್ಳುತ್ತ ನಿರ್ಭಾಗಿನಿಯಾಗುತ್ತಾಳೆ.

**ವಿವಾಹ ನಂತರ**

ಮದುವೆ ಒಂದು ದಿನದ ಸಂಭ್ರಮ. ಮುಂದೆ ಅರ್ಥಮಾಡಿಕೊಳ್ಳುವ ಗಂಡ, ಮನೆ, ಸಂಸಾರ ಸಿಕ್ಕಿದರೆ ಹೆಣ್ಣಿನ ಜೀವನ ಸುಖವಾಗಿರುತ್ತದೆ. ಇಲ್ಲವಾದರೆ ಅವಳು ಜೀವನಪರ್ಯಂತ ಕಣ್ಣೀರಿನಲ್ಲೇ ಕೈ ತೊಳೆಯಬೇಕಾಗುತ್ತದೆ. ಮದುವೆಯಾದ ನಂತರ ಹೆಣ್ಣಿನ ಮೊದಲ ಶೋಷಣೆ ಪ್ರಾರಂಭವಾಗುವುದೇ ಅವಳು ಸಂಸಾರಸ್ಥೆಯಾಗುವ ಮೊದಲ ದಿನದಿಂದಲೇ. ಅದನ್ನು ಗೀತಾ ನಾಗಭೂಷಣ ಅವರ ‘ಬದುಕು’ ಮತ್ತು ಸ.ಉಷಾರವರ ‘ಕಸೂತಿ’ ಕಾದಂಬರಿಯಲ್ಲಿ ಕಾಣಬಹುದು. ಆಗತಾನೇ ಮದುವೆಯಾಗಿ ಲಜ್ಜೆ, ಭಯಗಳಿಂದ ತುಂಬಿರುವವಳಿಗೆ ಹೇಳುವ ಮಾತುಗಳು ತಲಾತಲಾಂತರದಿಂದ ಹೆಣ್ಣಿಗೆ ಮಾತ್ರ ಹೇಳುವುದಾಗಿದೆ. ಬದುಕು ಕಾದಂಬರಿಯ

‘ಬೆಳ್ಳಿ’ಗೆ ಸಾವಕಾಶ ಹೇಳಿ ಗಂಡನೊಂದಿಗೆ ಹೊಂದಿಕೊಳ್ಳುವಂತೆ ಹೇಳುವ ಮಾತುಗಳಲ್ಲಿ “ಮಾಮಾ ಹೇಳ್ದಂಗ ಕೇಳ್ಬೇಕು. ಅವನ ಇಚ್ಛಾಕ್ಕ ಅಡ್ಡಿ ಮಾಡಬ್ಯಾಡ”[೬೧] ಎಂದೇಳುವಲ್ಲಿ ಮದುವೆ ನಂತರ ಹೆಣ್ಣು ಸಂಪೂರ್ಣ ಪುರುಷನ ಸ್ವತ್ತು ಎಂಬುದನ್ನು ಪರೋಕ್ಷವಾಗಿ ಹೇಳುವುದಾಗಿದೆ. ಹೆಣ್ಣಿಗೆ ಹೇಳುವ ಬುದ್ಧಿ ಮಾತುಗಳನ್ನು ಗಂಡಿಗು ಹೇಳುವ ಪದ್ಧತಿ ಯಾಕೆ ಸೃಷ್ಟಿಯಾಗಿಲ್ಲ? ಬೆಳ್ಳಿ ಮನೆಯವರು ಅನಕ್ಷರಸ್ಥರು ಹಾಗೆಯೇ ಹೇಳಿರುವುದು ಅವರ ಅಜ್ಞಾನವನ್ನು ತೋರಿಸುತ್ತದೆ ಎಂದುಕೊಂಡರೆ, ಸ.ಉಷಾರವರ ‘ಕಸೂತಿ’ ಕಾದಂಬರಿಯಲ್ಲಿ ಸುಶಿಕ್ಷಿತರಾದವರು ಸ್ವರ್ಣಾಳನ್ನು ಕುರಿತು ‘ಗಂಡ ಹೇಳಿದ ಹಾಗೆ ಕೇಳು’ ಎಂಬ ಮಾತು ಶಿಕ್ಷಿತ-ಅನಕ್ಷರಸ್ಥ ಎನ್ನುವುದಕ್ಕಿಂತಲು ಹೆಣ್ಣು ಗಂಡನಿಗೆ ಅಧೀನಳಾಗಿರಬೇಕು ಎಂಬುದು ಬೇರೂರಿಬಿಟ್ಟಿದೆ. ಲೇಖಕಿಯೇ ಹೇಳುವಂತೆ ಸ್ವರ್ಣಾಳ ಮೊದಲ ರಾತ್ರಿಯಲ್ಲಿ ಸ್ವರ್ಣಾಳಿಗೆ ಹೇಳಿಕೊಟ್ಟವರು, “ಶಂಕರನಿಗೆ ಏನು ಹೇಳಬೇಕು? ಹೇಗೆ ಹೇಳಿದ ಹಾಗೆ ಕೇಳಿಸಿಕೊಳ್ಳಬೇಕು ಎಂದು ಹೇಳಿಕೊಟ್ಟಿರಲಿಲ್ಲ”[೬೨] ಎನ್ನುವಲ್ಲಿ ಹೆಣ್ಣಿನ ಭಾವನೆಗೆ ಬೆಲೆ ಇಲ್ಲ. ಇಷ್ಟವಿರಲಿ ಇಲ್ಲದಿರಲಿ ಜೀವನಪರ್ಯಂತ ಗಂಡಿನ ಅಧಿಪತ್ಯಕ್ಕೆ ಒಳಗಾಗಬೇಕು. ಈ ವಿಷಯದಲ್ಲಿ ‘ಹೆಂಡತಿ ಹೇಳಿದಂತೆ ಕೇಳು’ ಎಂಬ ಮಾತು ಬಹಳ ದೂರದಲ್ಲಿಯೇ ಇದೆ.

ಬೆಳ್ಳಿ, ಸ್ವರ್ಣಾ ಮುಂದಿನ ಜೀವನಕ್ಕೆ ಹೊಂದಿಕೊಂಡರೆ, ‘ಕಸೂತಿ’ ಕಾದಂಬರಿಯ ಜಯಳ ಜೀವನ ಗಂಡನಿದ್ದು ವಿಧವೆಯ ಬಾಳು ಬಾಳಬೇಕಾಗುತ್ತದೆ. ಬಾಲ್ಯವಿವಾಹ ರೂಢಿಯಲ್ಲಿದ್ದರಿಂದ ಜಯಳು ಈ ವಿವಾಹಕ್ಕೆ ಒಳಗಾಗುತ್ತಾಳೆ. ಮಕ್ಕಳ ಮದುವೆಯ ನಿಶ್ಚಯ ಹಿರಿಯರಿಗೆ ಸಂಬಂಧಿಸಿದಾಗಿದ್ದು ಯೋಗ್ಯ ವರ ಹುಡುಕಬೇಕಾದದ್ದು ಅವರ ಜವಾಬ್ದಾರಿಯೂ ಆಗಿರುತ್ತದೆ. ಅದಕ್ಕೆ ಹಿರಿಯರು ಮದುವೆ ಜವಾಬ್ದಾರಿ ಕಳೆದುಕೊಳ್ಳುವುದನ್ನು ಬಿಟ್ಟರೆ ಅವಳ ಸುಖ-ಸಂತೋಷಕ್ಕೆ ಮನ್ನಣೆ ಕೊಡುವುದಿಲ್ಲ. ಜಯ ವಿಷಯದಲ್ಲಿ ಆದದ್ದು ಇದೆ. ಜಯಮ್ಮಳನ್ನು ಮದುವೆಯಾಗುವ ಹುಡುಗನ ಮನೆತನ, ಆಸ್ತಿ ನೋಡಿದರು. ಆತನ ರೂಪ ಪರಿಗಣಿಸಲಿಲ್ಲ. ಮದುಮಗ ಮಾತ್ರ “ಪೀಚು, ಚಟುವಟಿಕೆ ಇಲ್ಲ. ಹತ್ತುಸಾರಿ ಮಾತನಾಡಿದರೆ ಒಂದು ಸಾರಿ ‘ಓ’ ಅನ್ನುತ್ತಾನೆ. ಕಟುವಾಯಲ್ಲಿ ಸಣ್ಣಗೆ ಜೊಲ್ಲಿನ ಧಾರೆ ಹರಿಯುತ್ತಿರುತ್ತದೆ”.[೬೩] ಇಂತಹ ಮನಃಸ್ಥಿತಿಯವನೊಂದಿಗಿನ ವಿವಾಹ ಬಾಲ್ಯವಿವಾಹದ ಹೆಸರಿನಲ್ಲಿ ಹೆಣ್ಣಿಗೆ ನೀಡುತ್ತಿದ್ದ ಶಿಕ್ಷೆಯಂತೆ ತೋರುತ್ತದೆ. ಮುಂದೆ ಸಂಸಾರದ ಹೆಸರಿಗೆ ಬಲಿಪಶುವಾಗುತ್ತಾಳೆ. ಮೊದಲ ರಾತ್ರಿಯಲ್ಲಿ ‘ಹೆಂಡತಿ ಹೇಳಿದ ಹಾಗೆ ಕೇಳುವ’ ಗಂಡ ಜಯಮ್ಮಳ ಪಾಲಿಗೆ ಸಿಕ್ಕಿರುತ್ತಾನೆ. ಇದು ಅದೃಷ್ಟವಲ್ಲ, ದುರಾದೃಷ್ಟದ ಸಂಗತಿ. ಹೆಂಡತಿ, ಸಂಸಾರದ ಅರ್ಥ ತಿಳಿಯದ ಜಯಮ್ಮಳ ಗಂಡ ಅರೆಹುಚ್ಚ. ಆತನಿಗೆ ಬಿಸ್ಕತ್ತು ಕೊಟ್ಟು, ಕಥೆ ಹೇಳಿ ಮಲಗಿಸುತ್ತಾಳೆ. ಹೆಂಡತಿ ಹೇಳಿದಂತೆ ಕೇಳುವ ಪುರುಷ

ಮಾನಸಿಕವಾಗಿ ಸ್ವಸ್ಥವಾಗಿರುವುದಿಲ್ಲ. ಮಾನಸಿಕ, ದೈಹಿಕ ಸ್ವಸ್ಥವಾಗಿದ್ದರೆ ಆತನು ಇತರರಂತೆ ತನ್ನ ಪೌರುಷ ತೋರಿಸುವವನೆ ಆಗಿರುತ್ತಿದ್ದ. ಜಯಮ್ಮಳು ಅರೆಹುಚ್ಚನೊಂದಿಗಿನ ಜೀವನ ಗಂಡ ಇದ್ದು, ವಿಧವೆಯಂತೆ ಏಕಾಂಗಿಯಾಗಿ, ಗಂಡ ಸತ್ತ ನಂತರವು ಏಕಾಂಗಿಯಾಗಿ ಜೀವನಪರ್ಯಂತ ಸಂಸಾರದ ಸುಖವಿಲ್ಲದೆ ಬದುಕುತ್ತಾಳೆ. ಹೆಣ್ಣು ಜಯಮ್ಮಳ ಗಂಡನ ಸ್ಥಿತಿಯಲ್ಲಿದಿದ್ದರೆ, ಹುಡುಗನಿಗೆ ಮರುಮದುವೆಯ ಆಲೋಚನೆ ಮಾಡುತ್ತಿದ್ದರೆಂಬ ಖಚಿತ ಅಭಿಪ್ರಾಯಕ್ಕೆ ಬರಬಹುದು. ಜಯಮ್ಮ ಇಲ್ಲಿ ಜೀವನಪರ್ಯಂತ ಹಿರಿಯರ ದುಡುಕು ಸ್ವಭಾವದಿಂದ ಹೋರಾಟದ ಬದುಕು ನಡೆಸುತ್ತಾಳೆ.

ವಿವಾಹದ ಪ್ರಾರಂಭದ ಹೆಜ್ಜೆಗಳಲ್ಲೆ ಹೆಣ್ಣು ಪರಾಧೀನಳಾಗಿ ಬದುಕುವುದು ಅನಿವಾರ್ಯವಾಗಿ ತೋರುತ್ತದೆ. ಮುಂದೆ ಮಕ್ಕಳು, ಅವರ ವಿವಾಹ, ಮೊಮ್ಮಕ್ಕಳು ಹೀಗೆ ಪ್ರತೀ ಹಂತದಲ್ಲು ಪುರುಷನ ಅಧೀನಳಾಗಿಯೆ ಬದುಕುತ್ತಿದ್ದಾಳೆ. ಸ್ವರ್ಣಾ ಮದುವೆಯಾಗಿ ಮೈಸೂರಿನಿಂದ ಬೆಂಗಳೂರಿಗೆ ಹೋಗುವ ಮನೆಯಲ್ಲಿ ನಾದಿನಿ ಶಶಿ, ಮೈದ ಸೋಮಣ್ಣ ಇವರಿಬ್ಬರು ಅವಳಿ ಮಕ್ಕಳಾಗಿದ್ದರು. 'ಗಂಡುಮಗನಿಗೆ ಗಟ್ಟಿ ಮೊಸರು, ಹೆಣ್ಣು ಮಗಳಿಗೆ ನೀರು ಮಜ್ಜಿಗೆ, ಮಗನಿಗೆ ಮೂರು ಮಿಳ್ಳೆ ತುಪ್ಪ, ಇನ್ನೊಬ್ಬರಿಗೆ ಬರೀ ಮಿಳ್ಳೆ' ಹೀಗೆ ಗಂಡು ಮಗನಿಗೆ ಅತಿಯಾದ ಉಪಚಾರ ಮಾಡುತ್ತ' ಬೆಳೆಯುವ ಪ್ರಾರಂಭಿಕ ಹಂತದಲ್ಲಿಯೆ ತಾರತಮ್ಯ ಕಂಡುಬರುತ್ತದೆ. ಇದು ಮುಂದೆ ಹೆಮ್ಮರವಾಗಿ ಬೆಳೆದು ಹೆಣ್ಣಿನ ಎಲ್ಲಾ ವೈಯಕ್ತಿಕ ನಿರ್ಣಯಗಳನ್ನು ಕಸಿದುಕೊಳ್ಳುವುದನ್ನು ಸ್ವರ್ಣಾಳ ಬದುಕಲ್ಲೇ ಕಾಣಬಹುದು.

ಜನಸಂಖ್ಯೆಯಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ಮೊದಲ ಸ್ಥಾನಕ್ಕೆ ಬರುವ ಸಾಧ್ಯತೆಯು ಇದೆ. ಇದನ್ನರಿತು ಸರ್ಕಾರ ಮಕ್ಕಳ ಸಂಖ್ಯೆಯನ್ನು 'ಆರ್ತಿಗೊಬ್ಬ, ಕೀರ್ತಿಗೊಬ್ಬ' ಎಂಬಂತೆ ಎರಡಕ್ಕೆ ಇಳಿಸಿದೆ. ಇಂದು ಆರತಿಗೆ ಕೀರುತಿಗೆ ಒಬ್ಬರೆ ಸಾಕು ಎಂಬ ನಿರ್ಧಾರಕ್ಕೆ ಕೆಲವು ತಂದೆತಾಯಿಗಳು ಬಂದಿದ್ದಾರೆ. ಕೆಲವರಲ್ಲಿ ಹೆಚ್ಚು ಮಕ್ಕಳಿನ ಆಸೆಯಿಂದ, ಗಂಡು ಮಗುವಿನ ವ್ಯಾಮೋಹದಿಂದ ಜನಸಂಖ್ಯೆ ಹೆಚ್ಚುತ್ತಿದೆ. ಅದನ್ನು ಲೇಖಕಿ ಮಕ್ಕಳು ಮಾಡಿಕೊಳ್ಳುವುದರ ಹಿಂದಿನ ರಹಸ್ಯವನ್ನು ಹೇಳಿದ್ದಾರೆ. ಸ್ವರ್ಣಾ ಮೂರು ಮಕ್ಕಳ ತಾಯಿಯಾಗಿರುತ್ತಾಳೆ. ಗಂಡನ, ಗಂಡು ಮಗುವಿನ ವ್ಯಾಮೋಹದಿಂದ ನಾಲ್ಕನೆ ಮಗುವಿನವರೆವಿಗು ಕಾಯುತ್ತಾಳೆ. ಈ ಮೊದಲು ಎರಡು ಬಾರಿ ಸ್ವರ್ಣಾಳ ಮಡಿಲ ಹಣ್ಣು ಕರಗಿ ಮೂರನೇ ಬಾರಿಗೆ ಮಗ ಹುಟ್ಟುತ್ತಾನೆ. ಮುಂದೆ ಗರ್ಭ ಧರಿಸುವುದು ಕಷ್ಟಕರವಾಗಿರುತ್ತದೆ. ಸ್ವರ್ಣಾ ಮಕ್ಕಳಾಗದಂತೆ ಆಪರೇಷನ್ನಿಗೆ ಸಿದ್ಧಳಾದರೆ, ಪತಿ ಒಪ್ಪಿಗೆ ಕೊಡುವುದಿಲ್ಲ. ಸ್ವರ್ಣಾಳ

ಗರ್ಭ ತೂತುಬಿದ್ದಿರುವುದರ ಅರಿವು ಮೂಡಿಸಿದಾಗ ಶಂಕರ ಒಪ್ಪುತ್ತಾನೆ. ಆ ಸಂದರ್ಭದಲ್ಲಿ ಸ್ವರ್ಣಾ "ಶಂಕರ ನನ್ನ ನೆರವಿಗೆ ಬಂದು ತನಗೆ ಚಿಕ್ಕ ಸಂಸಾರ ಸಾಕು ಎಂದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು"?[೬೪] ಎಂದುಕೊಳ್ಳುವಲ್ಲಿಯೆ ಪುರುಷನ ಪುತ್ರ ವ್ಯಾಮೋಹದ ಹಿನ್ನೆಲೆಯಲ್ಲಿ ಸ್ತ್ರೀ ಬಗ್ಗೆ ಯೋಚಿಸದಿರುವುದನ್ನು ಹೇಳುತ್ತದೆ. ಹೆರುವವಳು ಹೆಣ್ಣೇ ಆದರೂ ಮಕ್ಕಳು ಆಕೆಗೆ ಸಾಕೆಂದು ಹೇಳುವ ಅಧಿಕಾರ ಇಲ್ಲದಿರುವುದು ಕಂಡು ಬರುತ್ತದೆ. ಎಷ್ಟೆ ವಿದ್ಯಾವಂತಾದರು ಶಂಕರನಂತಹವರು ಆಪರೇಷನ್ನಿನ ಹಿಂದಿರುವ ಪೂರ್ವಗ್ರಹ ಪೀಡನೆಗೆ ಒಳಗಾಗುತ್ತಾರೆ.

ಅಂದಿನ ಕಾಲದಲ್ಲಿ ಆಪರೇಷನ್ ಮಾಡಿಸಿಕೊಳ್ಳದೆ ಗರ್ಭನಿಲ್ಲುವವರೆಗು ಮಕ್ಕಳನ್ನು ಹೆರುವುದು ಹೆಣ್ಣಿನ ಕರ್ತವ್ಯವೆಂಬಂತೆ ಸ್ಥಿತಿಯಿತ್ತು. ಆಪರೇಷನ್ ಮಾಡಿಸಿಕೊಳ್ಳುವುದು ಒಂದು ರೀತಿಯಲ್ಲಿ ಗಂಡನ ಮರ್ಯಾದೆ ಕಳೆದಂತೆ ಎಂಬ ಭಾವ ಉಂಟಾದಂತೆ ತೋರುತ್ತದೆ. ನಮ್ಮ ಹಿಂದಿನ ಕಾಲಕ್ಕೆ ಹೋದರೆ ಆಪರೇಷನ್ ಮಾಡಿಸಿಕೊಳ್ಳದ ಅಜ್ಜಿಯಂದಿರು ಸಾಕಷ್ಟು ಸಿಗುತ್ತಾರೆ. ಕೆಲವರು ಅತ್ತೆ, ಗಂಡನಿಗೆ ತಿಳಿಸದೆ ಗುಪ್ತವಾಗಿ ಆಪರೇಷನ್ ಮಾಡಿಸಿಕೊಂಡಿರುವ ಉದಾಹರಣೆಗಳು ಸಿಗುತ್ತವೆ. ಸಮಾಜಕ್ಕೆ ಅವರು ತೋರ್ಪಡಿಸಿಕೊಳ್ಳುತ್ತಿರಲಿಲ್ಲ. ಕಾದಂಬರಿಯಲ್ಲಿ ಈ ಉದಾಹರಣೆಗೆ ಸಾಕ್ಷಿಯಾಗಿ ಸೀತೆ ನಿಲ್ಲುತ್ತಾಳೆ. ಮೂರ್ತಿಗೆ ಹೇಳಬಾರದು ಎಂಬ ಯಾವ ದುರುದ್ದೇಶ ಇಲ್ಲದಿದ್ದರು, ಮೂರ್ತಿ ಹತ್ತಿರದಲ್ಲಿ ಇಲ್ಲದ ಕಾರಣ ಆತನಿಗೆ ಹೇಳದೆಯೆ ಆಪರೇಷನ್ ಮಾಡಿಸಿಕೊಂಡಿರುತ್ತಾಳೆ. ಇದು ಅವಳ ವಿವೇಕತನವನ್ನು ಹೇಳುತ್ತದೆ. ಮೂರ್ತಿಗೆ ಸೀತೆಯೇ ವಿಷಯ ತಿಳಿಸಿದಾಗ "ಈ..... ಈ..... ಇದನ್ನು ನೀನು ಮಾಡಿಸಿಕೊಂಡಿದ್ದೀ ಅಂತ ಯಾರಿಗೂ ಹೇಳಬಾರದು"[೬೫] ಎಂದು ತೊದಲಿಸುತ್ತ ಹೇಳುವ ಮಾತುಗಳು ಸಮಾಜಕ್ಕೆ ತೋರ್ಪಡಿಸಿಕೊಳ್ಳಲು ಹಿಂಜರಿಯುವುದನ್ನು ಹೇಳುತ್ತದೆ. ಗಾಂಧೀವಾದಿಯಾದ ಮೂರ್ತಿಯಲ್ಲು ಇಂಥ ಭಾವನೆಗಳಿವೆ ಎಂದರೆ ಪುರುಷ ಎಲ್ಲಾ ವಿಷಯಗಳಲ್ಲು ಹೋರಾಡಿದರು ಹೆಣ್ಣಿನ ವಿಷಯದಲ್ಲಿ ಮಾತ್ರ ತನ್ನಂತೆಯೆ ಬಯಸುತ್ತಾನೆ. ಮಕ್ಕಳಾಗದಂತೆ ತಡೆಯುವ ಶಸ್ತ್ರಚಿಕಿತ್ಸೆ ವೈಯಕ್ತಿಕ ನೆಲೆಗಟ್ಟಿನದು ಎಂಬುದನ್ನು ಅರ್ಥೈಸಿಕೊಂಡು ಸ್ವಜೀವನಕ್ಕೆ ಅವಶ್ಯಕವಾಗುವಂತೆ ಬದುಕಬೇಕಿದೆ. ಅಂದಿನಿಂದ ಇಂದಿನವರೆಗು ಮಹಿಳೆಯರೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಅವಳ ದೇಹಸ್ಥಿತಿ ಸರಿಯಿಲ್ಲದಿದ್ದರು ಗರ್ಭ ತಡೆಯುವ ಆಪರೇಷನ್ ಹೆಣ್ಣಿಗೆ ಮೀಸಲಾಗಿಬಿಟ್ಟಿದೆ. ಇದು ಕೇವಲ ಹೆಂಗಳೆಯರಿಗೆ ಮಾಡುವಂಥದಲ್ಲ. ಪುರುಷರು ಆಪರೇಷನ್ ಮಾಡಿಸಿಕೊಳ್ಳಬಹುದು. ಅಂಥ ಉದಾರ ಮನಸ್ಸಿನವರು ತೀರಾ ಕಡಿಮೆ. ಪುರುಷರು ನೋವನ್ನು ಸ್ವೀಕರಿಸಲು ನಿರಾಕರಿಸುತ್ತಾರೆ. ಅದೇ ಹೆಣ್ಣು ನೋವಲ್ಲೆ ಹುಟ್ಟಿ ಜೀವನಪರ್ಯಂತ ದೈಹಿಕ ಮಾನಸಿಕ ಹಿಂಸೆಗೆ ಒಳಪಟ್ಟಿದ್ದಾಳೆ.

ಹೆಣ್ಣಿಗೆ ಸ್ವನಿರ್ಧಾರಗಳೆ ಇಲ್ಲ ಎಂಬುದು ಖಚಿತವಾಗುತ್ತದೆ. ವೈಯಕ್ತಿಕ ವಿಷಯವಾದ ಮದುವೆ, ಮಕ್ಕಳು ಈ ವಿಚಾರಗಳು ಮಾತ್ರವಲ್ಲದೆ, ಸ್ವಂತವಾಗಿ ಮನೆಯಲ್ಲಿ ಅಡುಗೆಯನ್ನು ಮಾಡುವಂತಿಲ್ಲ. ಗಂಡನ ಮನಸ್ಸನ್ನು ಗೆಲ್ಲಲು ರುಚಿ-ರುಚಿಯಾದ ಅಡುಗೆ ಮಾಡುವುದರಲ್ಲಿ ಜೀವನ ಕಳೆಯುತ್ತಿದ್ದಾರೆ. ಅವರಿಗೆ ಮನೆಯ ನೀತಿ ಪಾಠಗಳೆ ಕಾರಣವಾಗಿವೆ. ವಿವಾಹನಂತರ ವಿವಾಹವಾದ ಹೆಣ್ಣು ಸಂಪೂರ್ಣ ಗಂಡನ ಕೈ ಕೆಳಗಿರುವಂತೆ ತವರು ಮನೆಯವರು ಬೋಧಿಸುತ್ತಾರೆ. ಹೆಂಡತಿ ಮೇಲೆ 'ವಿವಾಹ' ಹೆಸರಿನಲ್ಲಿ ಹಕ್ಕು ಪಡೆದವನಾಗಿ ತನ್ನ ಹದ್ದು ಬಸ್ತಿನಲ್ಲಿಟ್ಟುಕೊಳ್ಳುವುದನ್ನೆ ಪುರಸ್ಕರಿಸುವ ಪುರುಷ ಷಾಹಿ ಸಮಾಜದ ತಾರತಮ್ಯವನ್ನು ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯಲ್ಲಿ ಕಾಣಬಹುದಾಗಿದೆ. ಹಳೆಯ ಸಂಪ್ರದಾಯಗಳಿಗೆ ಒಗ್ಗಿ ಹೋಗಿರುವ ಪಾರ್ತಕ್ಕ, ಗೌರಮ್ಮನಂತಹವರು ಹೊರ ಪ್ರಪಂಚ ಜ್ಞಾನವಿಲ್ಲದವರು. ಹೆಣ್ಣೆಂದರೆ ಗಂಡ ಹೇಳಿದಂತೆ ಕೇಳಿಕೊಂಡಿರಬೇಕೆಂಬ ಹಳೆಯ ಆಚಾರಣೆಗಳಿಗೆ ತಲೆಬಾಗಿದವರ ಇವರು ಬೆಳೆದ ವಾತಾವರಣ ಪುರುಷಪ್ರಧಾನತೆಯದ್ದಾಗಿದ್ದು ಅಮಾನವೀಯ ಮೌಲ್ಯಗಳನ್ನು ಪಾಲಿಸಿಕೊಂಡು ಬಂದವರು. ಮುಂದಿನ ಪೀಳಿಗೆಗೆ ಅದನ್ನೇ ಹೇಳಿಕೊಡುವಂತವರಾಗಿದ್ದಾರೆ. ಇವರ ಆದರ್ಶಗಳಲ್ಲಿ ಬದುಕುತ್ತಿರುವ ಸರೋಜಳ ಅಕ್ಕ ರತ್ನ ಗಂಡನ ಎದುರು ಮಾತನಾಡುವ ಧೈರ್ಯವಿಲ್ಲದವಳು.

ರತ್ನಳ ಗಂಡ ಸ್ವಲ್ಪವೂ ಭಾವನೆಗಳಿಲ್ಲದೆ ಮನುಷ್ಯ ತಾನುದುಡಿಯುವವ ಎಂಬ ಅಹಮ್ಮಿಕೆಯಿಂದ ಹೆಂಡತಿ ಮೇಲೆ ಅಧಿಕಾರ ಚಲಾಯಿಸುತ್ತಾನೆ. "ಚಪಾತಿಗೆ ಚಟ್ನಿ ಯಾಕೆ ಮಾಡಿದ್ದು? ಪಲ್ಯ ಮಾಡಲಿಲ್ಲ ಯಾಕೆ? ತರಕಾರಿ ತಂದದ್ದು ನಿನ್ನ ತಲೆಗೆ ತಟ್ಟಿಕೊಳ್ಳಲಿಕ್ಕ?"[೬೬] ಎಂದು ಅಧಿಕಾರವಾಣಿಯಿಂದ ಪ್ಲೇಟನ್ನು ರತ್ನ ತಲೆಗೆ ಬೀಸಿ ಕೆಲಸಕ್ಕೆ ಹೊರಟು ಹೋಗುತ್ತಾನೆ. ಈ ರೀತಿ ದಿನನಿತ್ಯದ ನೋವುಗಳನ್ನು ಅನುಭವಿಸುವ ರತ್ನ ಗಂಡನ ವಿರುದ್ಧ ಮಾತನಾಡಿದವಳಲ್ಲ. ಹೆಂಡತಿಯಾದವಳು ಗಂಡನಿಂದ ಆಗುವ ಅವಮಾನಗಳನ್ನು ಸಹಿಸಿಕೊಳ್ಳುವುದೆ ಕರ್ತವ್ಯವೆಂಬಂತೆ ಬದುಕುವುದು ಅವಳ ಅಸಮಾನತೆಯನ್ನು ತೋರಿಸುತ್ತದೆ. ತಾನಾಯಿತು ತನ್ನ ಪಾಡಾಯಿತು. ಎಂದು ಬದುಕುವ ರತ್ನಾಳ ಗಂಡನಂತವನನ್ನು ಹೊಗಳುವ ಮಂದಿ ಪುರುಷನನ್ನು ಎತ್ತಿಕೂರಿಸುತ್ತಿದೆ. ಹೆಂಡತಿಯನ್ನು ಹದ್ದು ಬಸ್ತಿನಲ್ಲಿಟ್ಟುಕೊಂಡ ಗಂಡನ ದರ್ಪ ಅರಿಯದೆ ಹೇಗೆ ಹೆಂಡತಿಯನ್ನು ತನ್ನ ಮುಷ್ಠಿಯೊಳಗೆ ಇರಿಸಿಕೊಂಡಿದ್ದಾನೆ. "ಹೆಣ್ಣು ಮಕ್ಕಳು ಹಾಗೆ ಗಂಡನ ಮುಷ್ಠಿಯೊಳಗೆ ಇದ್ದರೇನೇ ಒಂದು ಮನೆ ಅಲ್ಲವಾದರೆ ಅದು ಮನೆಯ? 'ಹೊಟೆಲು'

ಆಗುತ್ತದೆ"[೬೭] ಎಂಬ ಪಾರ್ತಕ್ಕನ ಮಾತುಗಳು ರತ್ನಾಳ ಆದರ್ಶಕ್ಕೆ ಮತ್ತಷ್ಟು ಇಂಬುಕೊಡುತ್ತವೆ. ಪ್ರತಿಯೊಬ್ಬ ಗೃಹಿಣಿಯ ಪಾಡು ಇದೇ ಆಗಿದೆ.

ಪುರುಷ ಸಮಾಜದಲ್ಲಿ ಹೆಣ್ಣಿನ ಸ್ಥಾನ ಕೀಳು ಎಂಬುದನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ಪಾರ್ತಕ್ಕ, ಗೌರಮ್ಮನಂತಹವರು ತಾವು ಪಾಲಿಸಿರುವುದನ್ನೆ, ಅನುಭವಿಸಿದ್ದನ್ನೆ ಮಕ್ಕಳಿಗೆ ಹೇಳಿಕೊಡುತ್ತಾರೆ. ಅದೇ ಹೆಣ್ಣಿನ ಜೀವನ ಎಂದು ನಂಬಿದ್ದಾರೆ. ಗಂಡು ದುಡಿದು ತಂದರೆ, ಹೆಣ್ಣು ಮನೆಯನ್ನು ಓರಣವಾಗಿಟ್ಟು ಗಂಡನಿಗೆ ಬೇಕಾದ್ದನ್ನು ಬಡಿಸುವವಳು ಇದರಲ್ಲಿ ಸ್ವಲ್ಪವೂ ವ್ಯತ್ಯಾಸವಾಗದಂತೆ ವ್ಯವಸ್ಥೆಯ ವಿರುದ್ಧ ಬಾಳದೆ ಅವುಗಳಲ್ಲೆ ನೆಮ್ಮದಿ ಕಾಣುತ್ತಿರುತ್ತಾರೆ. "ಗಂಡಸು ಅಡಿಗೆ ಮಾಡುವುದಂತಾದರೆ ಪ್ರಪಂಚದಲ್ಲಿ ಹೆಣ್ಣು ಜನ್ಮ ಅಂತ ಯಾಕೆ ಬೇಕು? ಗಂಡನೇ ಅಡುಗೆ ಕಲಿಸುವುದಾದರೆ ಕಲಿಯುಗ ಮುಗಿಯುತ್ತಲೆ ಬಂತಂತಲೇ ಅರ್ಥ"[೬೮] ಎನ್ನುವ ಪಾರ್ತಕ್ಕ ಕೆಳಜಾತಿಯೆನಿಸಿದ ಸೊಸೆಯ ವಿರುದ್ಧ ಮಾತನಾಡುವುದರಲ್ಲೆ ಗಂಡಿನ ಶ್ರೇಷ್ಠತೆಯನ್ನು ಹೇಳಿದ್ದಾರೆ.

ವ್ಯವಹಾರಿಕವಾಗಿ ಪುರುಷ ಅಡುಗೆ ಮಾಡಿ 'ನಳಪಾಕ'ಎಂದೆ ಗುರುತಿಸಿಕೊಂಡಿದ್ದರು. ಅವನನ್ನು ಹೆಮ್ಮೆಯಿಂದ ಹೊಗಳುವವರು, ಮನೆಯಲ್ಲಿ ಹೆಂಡತಿಗೆ ಸಹಾಯ ಮಾಡಿದರೆ ಹಿಯಾಳಿಸುತ್ತಾರೆ. ಮನೆ, ಮಕ್ಕಳ ಸಂಪೂರ್ಣ ಜವಾಬ್ದಾರಿ ಹೆಣ್ಣಿನ ಮೇಲೆ ಹಾಕಿ 'ಗಂಡಸು' ಎಂಬ ಅಧಿಕಾರ ಚಲಾಯಿಸುತ್ತಾನೆ. ಈತನ ಅಧಿಕಾರಗಳಿಗೆ ಬಲಿಯಾಗಬೇಕಾದವಳು ಹೆಣ್ಣು. ಗಂಡನ ಮನೆಯಿಂದ ಆಗುವ ಅನ್ಯಾಯಗಳನ್ನು ಸಹಿಸಿಕೊಂಡ ರತ್ನಾಳ ನೋವು ಅವಳ ತಾಯಿಗೆ ಅರಿವಾಗುವುದು ತಾನು ಅದನ್ನೆಲ್ಲ ಅನುಭವಿಸಿದ್ದರಿಂದ ಅದು ಹೆಣ್ಣಿಗೆ ಸಹಜವಾದದ್ದು, ಅನುಭವಿಸಲೇಬೇಕಾಗಿರುವಂಥದ್ದು "ಹೆಣ್ಣೇ ಹಾಗೆ. ಹೆಣ್ಣಾಗಿ ಹುಟ್ಟಿದ ಮೇಲೆ ಅದನ್ನೆಲ್ಲ ಒಟ್ಟಿಗೇ ಹೊತ್ತು ತಂದಂತೆ"[೬೯] 'ಅವರವರ ಕರ್ಮ'ಕ್ಕೆ ಹಾಕಿ ಸಮಾಧಾನ ಪಟ್ಟುಕೊಳ್ಳುತ್ತಾರೆ. ರತ್ನಾಳ ಜೀವನಕ್ಕಿಂತ ಹೀನ ಜೀವನ ನಡೆಸುತ್ತಿರುವವರೊಂದಿಗೆ ಹೋಲಿಸಿಕೊಳ್ಳುವ ಗೌರಮ್ಮ ಸಮಾಧಾನ ತಂದುಕೊಳ್ಳುತ್ತಾರೆ. ಈ ಪರಿಕಲ್ಪನೆ ಬದಲಾಗಬೇಕಿದೆ. ಹುಟ್ಟುತ್ತ ಯಾರೂ ಜೊತೆಗೆ ತರುವುದಿಲ್ಲ. ಸಮಾಜದಲ್ಲಿರುವ ತಪ್ಪು ಕಲ್ಪನೆಗಳನ್ನು ತಿದ್ದುವ ಕೆಲಸ ತುರ್ತಾಗಿ ಆಗಬೇಕಿದೆ. ಇಲ್ಲಿನ ಹೆಂಗಳೆಯರು ಪುರುಷಪ್ರಧಾನ ವ್ಯವಸ್ಥೆಯ ಕಪಿಮುಷ್ಠಿಗೆ ಸಿಲುಕಿದವರಾಗಿದ್ದಾರೆ. ಮದುವೆ ಮಾಡಿಕೊಟ್ಟ ನಂತರ 'ಅವನ ಹೆಂಡತಿ, ಅವನ ವಸ್ತು' ಎಂಬ ನಿರ್ಣಯಕ್ಕೆ ಅಂಟಿಕೊಂಡವರಾಗಿದ್ದು ಭಾವನೆಗಳಿಲ್ಲದೆ ಬದುಕುತ್ತಿದ್ದಾರೆ. ಗಂಡನನ್ನು ಕನ್ನಡಿಯಾಗಿಟ್ಟುಕೊಂಡು ಆತನ ಮಾತುಗಳಿಂದ ತಮ್ಮ ರೂಪವನ್ನು ಕಾಣುತ್ತಿದ್ದಾರೆ. ಮದುವೆ ಎಂಬ ಬೇಲಿಯೊಳಗೆ ಗಂಡ

ಎಂಬ ಯಜಮಾನನ ಪರಿಪಾಲಕರಾಗಿ ಬದುಕುತ್ತಿರುವುದು ವ್ಯವಸ್ಥೆಯನ್ನು ಮೀರಿ ನಡೆದರೆ ಸಮಾಜ ಅಂಥ ಹೆಣ್ಣನ್ನು ಬಾಳ್ವೆ ಮಾಡಲು ಬಿಡುವುದಿಲ್ಲವೆಂಬ ಒಳತಿರುಳು ಅರಿವಾಗುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ ಪತಿಯೊಂದಿಗೆ ಇದ್ದುಕೊಂಡೆ ಹೆಜ್ಜೆ–ಹೆಜ್ಜೆಗೂ ಯಾತನೆ ಅನುಭವಿಸುತ್ತಿದ್ದಾಳೆ. ಇಂದು ಸ್ವಲ್ಪಮಟ್ಟಿಗೆ ಸುಧಾರಣೆ ಕಂಡುಬರುತ್ತಿದೆಯಾದರು ವ್ಯವಸ್ಥೆಯೊಳಗೆ ತಲೆ ಎತ್ತಿನಿಲ್ಲುವ ಸ್ಥಾನಮಾನ ದೊರಕಿಲ್ಲ. ಕಾನೂನು ರೀತ್ಯ ದೊರೆಯುತ್ತಿದೆಯಾದರು, ಮನಸ್ಸಿನ ಒಳಗೆ ಸ್ತ್ರೀಸ್ವಾತಂತ್ರ್ಯ ವಿರೋಧ ಭಾವನೆಗಳೆ ಮನೆ ಮಾಡಿಕೊಂಡಿವೆ. ಅವು ನಾಶವಾದಾಗ ಮಾತ್ರ ಸಮಾನತೆಯ ಭಾವ ಬೆಳೆಯಲು ಸಾಧ್ಯ. ಇಂದು ದಾಂಪತ್ಯದಲ್ಲಿ ಬಿರುಕು ಕಾಣಿಸಿಕೊಳ್ಳುತ್ತಿವೆ. ಹೊಂದಾಣಿಕೆಯ ಕೊರತೆ, ಅಹಂಗಾರಿಕೆ ಇವುಗಳಿಂದ ಸ್ತ್ರೀ–ಪುರುಷರಲ್ಲಿ ಅಪನಂಬಿಕೆ, ಅವಿಶ್ವಾಸಗಳು ಮನೆಮಾಡಿಕೊಳ್ಳುತ್ತಿವೆ. ಇದಕ್ಕೆ ಸ್ತ್ರೀ–ಪುರುಷರಿಬ್ಬರು ಕಾರಣಕರ್ತರಾಗುತ್ತಾರೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಬಹುಪತ್ನಿತ್ವದ ಪದ್ಧತಿಯಿಂದ ಹೆಣ್ಣು ಇವತ್ತಿಗು ಶೋಷಿತಳಾಗುತ್ತಿದ್ದಾಳೆ. ಪುರಾಣ ಕಾಲದಲ್ಲಿ ಬಹುಪತಿತ್ವ, ಬಹುಪತ್ನಿತ್ವದಂತಹ ಆಚರಣೆಗಳು ರೂಢಿಯಲ್ಲಿದ್ದವು. ಮಹಾಭಾರತದ ಕುಂತಿ, ಅಂಬೆ, ಅಂಬಾಲಿಕೆಯರು ನಿಯೋಗದಿಂದ ಬಹುಪತಿತ್ವ ಆಚರಣೆಗೆ ಒಳಗಾದವರೆ. ಇವರು ಎಲ್ಲರ ಸಮ್ಮತಿ ಪಡೆದು ಜೀವಿಸುತ್ತಿದ್ದರಾದರು ಮುಖ್ಯ ಉದ್ದೇಶ ಮಕ್ಕಳನ್ನು ಪಡೆಯುವುದಾಗಿತ್ತು. ರಾಮಾಯಣದ ದಶರಥನಂತೆ, ಮಹಾಭಾರತದ ಪಾಂಡುವಿನಂತೆ ಬಹುಪತ್ನಿಯರೊಂದಿಗೆ ಬದುಕು ನಡೆಸುವುದರಲ್ಲಿ ದ್ರೌಪದಿ ಮಾತ್ರ ಕಾಣಸಿಗುತ್ತಾಳೆ. ಕಾಲಕ್ರಮೇಣ ಪುರುಷಪ್ರಧಾನ ವ್ಯವಸ್ಥೆಯ ಅತಿಕ್ರಮಣದಿಂದ ಬಹುಪತಿತ್ವ ನಾಶವಾಗುತ್ತ ಬಂದಿದೆ. ಬಹುಪತ್ನಿತ್ವ ಹಾಗೆಯೆ ನೆಲೆ ನಿಂತುಕೊಂಡಿದೆ. ಕೆಲವು ಬುಡಕಟ್ಟು ಜನಾಂಗಗಳಲ್ಲಿ ಮಾತ್ರ ಈ ಎರಡು ಪದ್ಧತಿಗಳು ಇಂದಿಗು ಇವೆ. ೧೯೫೫ರಲ್ಲಿ ಹಿಂದೂ ವಿವಾಹ ಕಾಯ್ದೆಯ ಅಡಿಯಲ್ಲಿ ಏಕ ವಿವಾಹ ಪದ್ಧತಿ ಜಾರಿಗೆ ತರಲಾಗಿದೆ. ಅದನ್ನು ಮೀರಿ ನಡೆದವರಿಗೆ ಶಿಕ್ಷೆಯು ಕಾನೂನಿನ ಹೆಸರಿನಲ್ಲಿ ಸೃಷ್ಟಿಯಾಗಿದೆ. ಕಾಲಕಾಲಕ್ಕೆ ಶಿಕ್ಷೆಯ ಮಟ್ಟ, ನಿಯಮಗಳು ಬದಲಾಗುತ್ತಿವೆಯಾದರು ತಪ್ಪಿಸಲು ಸಾಧ್ಯವಾಗುತ್ತಿಲ್ಲ. ಏನೇ ಕಾನೂನುಗಳು ಬಂದರು ಸಮಾಜದಲ್ಲಿ ಅವ್ಯವಸ್ಥೆ ತಪ್ಪಿಲ್ಲ. ಬಹುಪತ್ನಿತ್ವಕ್ಕೆ ಕೊಡುವ ಕಾರಣಗಳು ಅಂದಿನಿಂದ ಇಂದಿನವರೆಗು ಒಂದೇ ಆಗಿವೆ. ಬಂಜೆತನ, ಹುಟ್ಟಿದ ಮಕ್ಕಳೆಲ್ಲ ಸತ್ತರೆ, ಹೆಣ್ಣುಮಕ್ಕಳೆ ಇದ್ದರೆ ಗಂಡುಮಗನ ಬಯಕೆಯಿಂದ. ಹೀಗೆ ಪುರುಷ ಮರುಮದುವೆಯಾಗುವಲ್ಲಿಯು ಹೆಣ್ಣನ್ನು ದೂಷಿಸುತ್ತ ತಮ್ಮ ಕಾರ್ಯಗಳನ್ನು ಸಿದ್ಧಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ.

ಇಂದು ಆಧುನೀಕರಣದ ಹೆಸರಿನಲ್ಲಿ ಫ್ಯಾಷನ್ ಯುಗವಾಗುತ್ತಿದೆ. ಸಿನಿಮಾ ತಾರೆಗಳು, ರಾಜಕಾರಣಿಗಳು, ಗಣ್ಯವ್ಯಕ್ತಿಗ್ಳೆಂದು ಹೆಸರು ಪಡೆದವರು, ಶ್ರೀಮಂತರು ಬಹುಪತ್ನಿಯರನ್ನು ಹೊಂದಿದ್ದಾರೆ, ಹೊಂದುತ್ತಿದ್ದಾರೆ. ಇವು ಮೇಲ್ನೋಟಕ್ಕೆ ಕಾಣಸಿಗುವ ಸತ್ಯವಾದರೆ ಸಾಮಾನ್ಯ ಜನರಲ್ಲಿ ಹೆಣ್ಣು ಹೇಗೆ ನಲುಗುತ್ತಿದ್ದಾಳೆ ಎಂಬುದು ತಿಳಿಯುತ್ತದೆ. ಬಡವರು, ಅವಿದ್ಯಾವಂತರು ಹೆಣ್ಣಿನ ಮೇಲೆ ಬೆದರಿಕೆಯೇರಿ ಅನೇಕರನ್ನು ಮದುವೆಯಾಗುವ ಅಚಾತುರ್ಯಗಳು ನಡೆಯುತ್ತಿವೆ. ಒಟ್ಟಾರೆ ಪುರುಷ ಅರಿಷಡ್ವರ್ಗಗಳಿಗೆ ಒಳಗಾಗಿ ಹೆಣ್ಣನ್ನು ಹಿಂಸಿಸುತ್ತಿದ್ದಾನೆ. ಅದನ್ನು ಗೀತಾ ನಾಗಭೂಷಣರವರ 'ಬದುಕು' ಕಾದಂಬರಿಯಲ್ಲಿ ಕಾಣುತ್ತೇವೆ. ಈ ಕಾದಂಬರಿಯಲ್ಲಿ ಅಸಮ–ವಿಷಮ ದಾಂಪತ್ಯಗಳೆರಡು ಕಂಡುಬರುತ್ತವೆ. ಬೆಳ್ಳಿ–ಕಲ್ಯಾಣಿಯದು ಅಸಮ ದಾಂಪತ್ಯವಾದರೆ, ಕಾಶಮ್ಮ–ಮಾರ್ತಂಡ, ನೀಲಮ್ಮ–ಲಿಂಗರಾಜ ಇವರದು ವಿಷಮ ದಾಂಪತ್ಯವಾಗಿದೆ. ಹಿರಿಯರ ಸ್ವಾರ್ಥದಿಂದ ಕಾಶಮ್ಮ, ಲಿಂಗರಾಜ, ನೀಲಮ್ಮ, ಮಾರ್ತಂಡರ ಬದುಕು ಹಾಳಾಗುತ್ತದೆ. ಈ ನಡುವೆ ಕಾಶಮ್ಮ–ಲಿಂಗರಾಜ ಮದುವೆ ಎಂಬ ಯಾವುದೆ ಸಂಪ್ರದಾಯಕ್ಕೆ ಒಳಗಾಗದೆ ಸಂಸಾರಸ್ಥರಾಗುತ್ತಾರೆ. ಇವರಿಬ್ಬರಲ್ಲು ಪ್ರಾಮಾಣಿಕ ಪ್ರೇಮದ ಒರತೆ ಕಂಡುಬಂದರೆ, ಲಿಂಗರಾಜನ ಪತ್ನಿ ನೀಲಮ್ಮಳ ಬದುಕು ಅರ್ಥಹೀನವಾಗುತ್ತದೆ. ಲಿಂಗರಾಜ ಇಬ್ಬರ ನಡುವೆ ಸಿಲುಕಿದ ವ್ಯಕ್ತಿಯಾಗಿ ಕಂಡುಬಂದರು, ಹೆಂಡತಿಗೆ ಯಾವುದೆ ವಿಷಯವನ್ನು ಅರುಹದೆ "ಗಂಡ ಬೇಕು ಅಂದ್ರ ಎಲ್ಲಾ ತಾಳ್ಕೊಂಡಿರು. ಇಲ್ಲಂದ್ರ ನಿನ್ನ ದಾರಿ ನಿನಗ. ನನ್ನ ದಾರಿ ನನಗ"[೨೦] ಎಂದು ಹೇಳುವಲ್ಲಿ ಸುಲಭವಾಗಿ ಸಂಬಂಧ ಕಡಿದುಕೊಳ್ಳುವಂತಹ ಮಾತುಗಳನ್ನಾಡುತ್ತಾನೆ. ಲಿಂಗರಾಜನ ಸಂಧಿಗ್ದ ಪರಿಸ್ಥಿತಿ ಅರಿವಾದರು ಮೊದಲೆ ಹೆಂಡತಿಗೆ ಹೇಳುವ ಪ್ರಯತ್ನ ಮಾಡದಿರುವುದು ಆಕೆಯ ಮೇಲಿನ ತಿರಸ್ಕಾರ ಭಾವನೆಯನ್ನು ಹೇಳುತ್ತದೆ. ನೀಲಮ್ಮ ಮಗನಿಗಾಗಿ ಗಂಡನ ಮನೆಯಲ್ಲಿಯೆ ಉಳಿಯುತ್ತಾಳೆ.

ಇವನ ಹಾದಿಯಲ್ಲಿಯೆ ಮತ್ತೊಂದು ಪಾತ್ರ ಕಾಣಸಿಗುತ್ತದೆ. ಕಮಲ ಎಂಬುವಳ ಗಂಡ ಮತ್ತೊಬ್ಬಳೊಂದಿಗೆ ಸಂಬಂಧ ಇಟ್ಟುಕೊಂಡಿದ್ದನು. ಅನೈತಿಕ ಸಂಬಂಧ ಕುರಿತು ಪ್ರಶ್ನಿಸಿದ ಕಮಲಳಿಗೆ "ನಾ ಹೇಳ್ದಂಗ ಕೇಳ್ಕೋತ ನಾಯಿಬಿದ್ದಂಗ ಬಿದ್ದಿರು ನನ್ನ ಮನ್ಯಾಗ ನಾ ಮನಸ್ಸು ಬಂದಾಗ ಬರ್ತೀನಿ, ಬರಲಾರ್ದಾಗ ಇಲ್ಲ. ನಾ ಹಾಕ್ಕೊಟ್ಟು ತಿಂದು ಹೇಳ್ದೋಟು ಕೇಳ್ಕೊಂಡು ಇರುಂಗಿದ್ದರ ಇರು. ಬ್ಯಾಡಂದ್ರ ನಾ ಕಟ್ಟಿದ ತಾಳಿ ನಾ ಹರ್ಕೋತ್ತೀನಿ"[೨೧] ಎಂದು ಜವಾಬು ಕೊಡುತ್ತಾನೆ. ಕಮಲ ಆತನನ್ನು ಬಿಟ್ಟು ಏಕಾಂಗಿಯಾಗಿ ಬದುಕುತ್ತಾಳೆ.

ಹಿಂದೂ ಸಂಸ್ಕೃತಿಯಲ್ಲಿ ತಾಳಿ ಪವಿತ್ರ ಸ್ಥಾನ ಪಡೆದಿದೆ. ಪುರುಷ ಪ್ರಧಾನ ವ್ಯವಸ್ಥೆಯ ಪಾಲಕರು ಅದನ್ನೇ ಗುರಿಯಾಗಿಸಿಕೊಂಡು ಸ್ತ್ರೀಯರನ್ನು ಶೋಷಿಸುತ್ತಿದ್ದಾರೆ. ಒಂದು ರೀತಿಯಲ್ಲಿ 'ಬ್ಲಾಕ್‌ಮೇಲ್' ಮಾಡುತ್ತಿದ್ದಾರೆ. ಹೆಣ್ಣು ತಾಳಿ ವಿಷಯ ತೆಗೆದರೆ ಮೌನವಹಿಸುತ್ತಾಳೆ ಎಂದು ಮನಬಂದಂತೆ ವರ್ತಿಸುತ್ತಿದ್ದಾರೆ. ಅದನ್ನು ಇದೇ ಕಾದಂಬರಿಯ ಹಣಮಪ್ಪನ ಕಪಟತನದಿಂದ ತಿಳಿಯಬಹುದು. ಹಣಮಪ್ಪ-ಸಾಬವ್ವ ಗಂಡ ಹೆಂಡತಿ. ಸಾಬವ್ವಳಿಗೆ ಮಕ್ಕಳಾಗಿಲ್ಲವೆಂದು, ಹಣಮಪ್ಪ ಮಲಕವ್ವಳನ್ನು ಉಡಕಿ ಮಾಡಿಕೊಳ್ಳುತ್ತಾನೆ. ಸಾಬವ್ವಳಿಗೆ ಕೋಪ ಬಂದು ಪಂಚಾಯ್ತಿ ಸೇರಿಸುತ್ತಾಳೆ. ಹಣಮಪ್ಪ ಇಬ್ಬರೊಂದಿಗೆ ಕೂಡಿ ಬಾಳುವುದನ್ನು ನಿರಾಕರಿಸಿ, ಸಾಬವ್ವ ಗಂಡನಿಂದ ದೂರಾಗುವ ತೀರ್ಪು ಹೊರಬೀಳುತ್ತದೆ. "ಹಣಮಪ್ಪ ಸಾಬವ್ವನ ಕುತಗ್ಯಾಗ ಕಟ್ಟಿದ್ದ ತಾಳಿ ಕರಿಮಣಿ ಹರ್‍ಕೊಂಡು ಆಕೀಗಿ ತನ್ನಲಿಂದ ಬಿಡುಗಡಿ ಮಾಡ್ಬೇಕು. ಮತ್ತು ಪಂಚರ ಸಮಕ್ಷಮ ಕಾಗದದ ಮ್ಯಾಲ 'ಫಾರಿಕತಿ' ಬರಸಿ, ಹೆಬ್ಬಟ್ಟೊತ್ತಿ, ಅಕೆಗಿ ಸೋಡಾ ಚೀಟಿ ಕುಡ್ಬೇಕಂತ ಫೈಸಲಾ ಆಯ್ತು"[೭] ತೀರ್ಮಾನವಾಗುತ್ತಿದ್ದಂತೆ ಹಣಮಪ್ಪ ಸಾಬವ್ವಳಿಂದ ತಾಳಿ ಕಿತ್ತುಕೊಳ್ಳುತ್ತಾನೆ.

'ಬದುಕು' ಕಾದಂಬರಿ ಮೂವರು ಹೆಂಗಳೆಯರ ದುಃಸ್ಥಿತಿಯನ್ನು ಹೇಳಿದೆ. ಹೆಣ್ಣು ಶ್ರೀಮಂತ, ಬಡವ, ವಯಸ್ಸು ಚಿಕ್ಕದಾಗಿರಲಿ, ದೊಡ್ಡದಾಗಿರಲಿ ಒಂದೇ ಸ್ಥಿತಿಯಲ್ಲಿರುತ್ತಾಳೆ. ಪುರುಷ ಬೇರೆ ಹೆಣ್ಣಿನೊಂದಿಗೆ ಅನೈತಿಕವಾಗಿ ವರ್ತಿಸಿದರು ಸ್ತ್ರೀ ಮೌನವಹಿಸಬೇಕಿದೆ. ಅವನ ವಿರುದ್ಧ ಪ್ರತಿಭಟಿಸಿದರೆ ಸಂಬಂಧ ಹರಿದುಕೊಳ್ಳುವ ಸ್ಥಿತಿ ಹೆಣ್ಣಿಗಿದೆ. ಅದೇ ಒಂದು ಹೆಣ್ಣು ಗಂಡನನ್ನು ದೂರಮಾಡಲು ಕಸಿದುಕೊಳ್ಳಲು ಗಂಡನಾಗುವವನಿಗೆ ಏನನ್ನು ಕಟ್ಟಿರುವುದಿಲ್ಲವಲ್ಲ. ತಾಳಿ ಎಂಬ ವಿಧಿವಿಧಾನಗಳು ಹೆಣ್ಣಿಗೆ ಮಾತ್ರ ಸೀಮಿತವಾಗಿರುವಂಥವು. ಅದನ್ನು ಕಸಿದುಕೊಂಡುಬಿಟ್ಟರೆ, ಸಮಾಜದಲ್ಲಿ ಆಕೆಯನ್ನು ಹೀನವಾಗಿ ಕಾಣುವ ದೃಷ್ಟಿಕೋನಗಳು ಉಂಟಾಗುತ್ತವೆ. ಹೆಣ್ಣು ಇದರಿಂದ ತಪ್ಪಿಸಿಕೊಳ್ಳಲು ಪುರುಷನ ದೌರ್ಜನ್ಯಗಳನ್ನು ಸಹಿಸಿಕೊಳ್ಳುತ್ತಿದ್ದಾಳೆ. ಇವೆಲ್ಲಕ್ಕು ಮಿಗಿಲಾಗಿ, ಪುರುಷಪ್ರಧಾನ ವ್ಯವಸ್ಥೆಯಲ್ಲಿ ಪುರುಷ ಇಬ್ಬರು, ಮೂವರನ್ನು ವಿವಾಹ ಮಾಡಿಕೊಂಡು ಹೆಂಡತಿಯ ಮುಂದೆಯೇ ಜೀವನ ನಡೆಸುತ್ತಿದ್ದಾನೆ. ಅದೇ ರೀತಿ ಹೆಣ್ಣು ಗಂಡನೊಟ್ಟಿಗೆ ಇದ್ದುಕೊಂಡೆ ಮತ್ತೊಬ್ಬನೊಂದಿಗೆ ಸಂಸಾರ ಮಾಡುವುದನ್ನು ಸಮಾಜ ಸ್ವೀಕರಿಸುವುದಿಲ್ಲ. ಕದ್ದು-ಮುಚ್ಚಿ ಇಂತಹ ದುರ್ಘಟನೆಗಳು ನಡೆಯುತ್ತಿರಬಹುದು. ರಾಜಾರೋಷವಾಗಿ ಪುರುಷನಂತೆ ಸಮಾಜಕ್ಕೆ ತೋರ್ಪಡಿಸಿಕೊಂಡು ಗಂಡನೊಂದಿಗೆ ನೆಮ್ಮದಿಯಿಂದ ಬಾಳಲು ಸಾಧ್ಯವಿಲ್ಲ. ಪುರುಷನೆ ಆಗಲಿ, ಸ್ತ್ರೀಯರೆ ಆಗಲಿ ಮಾಡುವ ಇಂಥ

ಕಾರ್ಯ ಸಮಾಜ ಒಪ್ಪಿತವಾದುದಲ್ಲ. ಆದರೂ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪತಿಯ ಬಹುಪತ್ನಿತ್ವಕ್ಕೆ ತುತ್ತಾಗಿ ಸ್ತ್ರೀ ಶೋಷಿತಳಾಗುತ್ತಿದ್ದಾಳೆ.

ಸ್ತ್ರೀಯರ ಬದುಕಿನಲ್ಲಿ ಆರ್ಥಿಕನೆಲೆ ಬಹುಮುಖ್ಯವಾದ ವಿಚಾರ. ಹೆಣ್ಣು ಒಂದು ಜೀವಿ. ಅಕೆ ಬೌದ್ಧಿಕ, ಜೈವಿಕವಾಗಿ ಪುರುಷನಷ್ಟೇ ಸರಿಸಮಾನಳು. ಕಾಲಕ್ರಮ ಸರಿದು ಇತಿಹಾಸ ಸೇರಿದಂತೆ, ಹೆಣ್ಣು ಅನುಭವಿಸುವ ಅನೇಕ ಮೂಕ ಸಂಕಟಗಳನ್ನು ಮಹಿಳಾ ಬರಹಗಾರ್ತಿಯರು ಅನೇಕ ಚಾರಿತ್ರಿಕ ಅಂಶಗಳ ಹಿನ್ನೆಲೆಯಲ್ಲಿ ಕಾದಂಬರಿಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ಹೆಣ್ಣಿಗೆ ಶಿಕ್ಷಣ, ಉದ್ಯೋಗ, ಆರೋಗ್ಯ, ಪ್ರೀತಿ, ಒಲುಮೆ, ಸಹನೆ, ಸಹಬಾಳ್ವ ಮೂಲಕ ಸಮಾನತೆ ಸಿಗಬೇಕೆಂಬ ಆಶಯಗಳನ್ನು ಈ ಲೇಖಕಿಯರ ಕಾದಂಬರಿಯ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಎಲ್ಲಾ ಸಾಮಾಜಿಕ ನೆಲೆಗಳಲ್ಲಿ ಸ್ತ್ರೀಯರ ಸಂಕಷ್ಟಕರ ಆಶಯಗಳನ್ನು ತಿಳಿಯಲಾಗಿದೆ.

## ಕೊನೆಟಿಪ್ಪಣಿಗಳು

೧. ಎಂ.ಎಸ್.ವೇದಾ, ಆರ್ದ್ರಗರ್ವದ ಹುಡುಗಿ, ಪು. ೧೪೧

೨. ಡಾ. ಜ್ಯೋತಿ ಶಶಿಕುಮರ್, ಮಹಿಳಾ ಸಾಮಾಜಿಕತೆ, ಪು. ೫೦

೩. ಡಾ. ಶಿವಾನಂದ ಎಸ್.ವಿರಕ್ತಮಠ, ಮಹಿಳೆ ಮತ್ತು ಧರ್ಮ, ಪು. ೬೧

೪. ಉಷಾ.ಪಿ.ರೈ, ಅನನ್ಯ ಮಹಿಳಾ ಚೇತನ ಮಾಲಿಕೆ ಎಂ.ಕೆ.ಇಂದಿರಾ, ಪು. ೨೦

೫. ಎಂ.ಕೆ.ಇಂದಿರಾ, ಫಣಿಯಮ್ಮ, ಪು. ೩೯

೬. ಅದೇ, ಪು. ೪೦

೭. ಸ.ಉಷಾ, ಕಸೂತಿ, ಪು. ೫೯

೮. ತ್ರಿವೇಣಿ, ಹಣ್ಣೆಲೆ ಚಿಗುರಿದಾಗ, ಪು. ೧೦೫

೯. ಅದೇ, ಪು. ೧೦೬

೧೦. ಅದೇ, ಪು. ೧೦೩

೧೧. ಅದೇ, ಪು. ೧೦೮

೧೨. ಉತ್ತಮ ಕಾಂಬಳೆ (ಮೂಲಮರಾಠಿ), ಡಾ. ಸಿದ್ರಾಮ ಕಾರಣಿಕ (ಕನ್ನಡಕ್ಕೆ), ದೇವದಾಸಿ ಮತ್ತು ಬೆತ್ತಲೆ ಸೇವೆ, ಪು. ೫೩

೧೩. ಗೀತಾ ನಾಗಭೂಷಣ, ಬದುಕು, ಪು. ೨೦೫

೧೪. ಅದೇ, ಪು. ೩೪

೧೫. ಅದೇ, ಪು. ೨೦೬

೧೬. ಅದೇ, ಪು. ೨೧೨

೧೭. ಅದೇ, ಪು. ೨೨೪–೨೨೫

೧೮. ಅದೇ, ಪು. ೨೧೩

೧೯. ವನಜ ಎಸ್.ಕುಮಾರ್, ಮಹಿಳೆ ಒಂದು ಚಿಂತನೆ, ಪು. ೨೨೨

೨೦. ಎಚ್.ಎಸ್.ಪಾರ್ವತಿ, ಜಬಾಲಾ, ಪು. ೮೨

೨೧. ಅದೇ, ಪು. ೮೭

೨೨. ಅದೇ, ಪು. ೯೮

೨೩. ಬಿ.ಟಿ.ಲಲಿತಾ ನಾಯಕ್, ನೆಲೆ-ಬೆಲೆ, ಪು. ೩೯

೨೪. ಅದೇ, ಪು. ೮೪

೨೫. ಅದೇ, ಪು. ೮೬

೨೬. ಗೀತಾ ನಾಗಭೂಷಣ, ಬದುಕು, ಪು. ೨೦೧

೨೭. ಡಾ. ಜ್ಯೋತಿ ಶಶಿಕುಮರ್, ಮಹಿಳಾ ಸಾಮಾಜಿಕತೆ, ಪು. ೧೨೩

೨೮. ಡಾ. ಶಿವಾನಂದ ಎಸ್.ವಿರಕ್ತಮಠ, ಮಹಿಳೆ ಮತ್ತು ಧರ್ಮ, ಪು. ೫೩

೨೯. ದೇವಿಕಾ ನಾಗೇಶ್, ಅನನ್ಯ ಮಹಿಳಾ ಚೇತನ ಮಾಲಿಕೆ ಸಾರಾ ಅಬೂಬಕ್ಕರ್, ಪು. ೩೬

೩೦. ಸಾರಾ ಅಬೂಬಕ್ಕರ್, ಚಂದ್ರಗಿರಿಯ ತೀರದಲ್ಲಿ, ಪು. ೩೨

೩೧. ಅದೇ, ಪು. ೪೯

೩೨. ಅದೇ, ಪು. ೫೧

೩೩. ಅದೇ, ಪು. ೭೫

೩೪. ಅದೇ, ಪು. ೭೫

೩೫. ವೀಣಾ ಶಾಂತೇಶ್ವರ, ನಡೆದದ್ದೇ ದಾರಿ, ಪು. ೩೮೦

೩೬. ಅದೇ, ಪು. ೩೮೧

೩೭. ಎಂ.ಕೆ.ಇಂದಿರಾ, ಫಣಿಯಮ್ಮ, ಪು. ೩೮

೩೮. ಅದೇ, ಪು. ೯೬

೩೯. ಸಾರಾ ಅಬೂಬಕ್ಕರ್, ಚಂದ್ರಗಿರಿಯ ತೀರದಲ್ಲಿ, ಪು. ೩೨

೪೦. ವೈದೇಹಿ, ಅಸ್ಪೃಶ್ಯರು, ಪು. ೮೮-೮೯

೪೧. ಎಚ್.ಎಸ್.ಪಾರ್ವತಿ, ಜಬಾಲಾ, ಪು. ೫೭

೪೨. ಬಿ.ಟಿ.ಲಲಿತಾ ನಾಯಕ್, ನೆಲೆ-ಬೆಲೆ, ಪು. ೬೬

೪೩. ಅದೇ, ಪು. ೩೭

೪೪. ಡಾ. ಜ್ಯೋತಿ ಶಶಿಕುಮರ್, ಮಹಿಳಾ ಸಾಮಾಜಿಕತೆ, ಪು. ೩೧

೪೫. ಡಾ. ಸರಸ್ವತಿ ಚಿಮ್ಮಲಗಿ (ಪೂಜಾರ) ಮಹಿಳೆ ಮದುವೆ ಮತ್ತು ವಿಚ್ಛೇದನ, ಪು. ೧೦

೪೬. ಎಚ್.ಎಸ್.ಪಾರ್ವತಿ, ಜಬಾಲಾ, ಪು. ೪೯

೪೭. ಸ.ಉಷಾ, ಕಸೂತಿ, ಪು. ೭೭

೪೮. ಗೀತಾ ನಾಗಭೂಷಣ, ಬದುಕು, ಪು. ೯೪

೪೯. ಅದೇ, ಪು. ೧೦೫

೫೦. ವೀಣಾ ಶಾಂತೇಶ್ವರ, ನಡೆದದ್ದೇ ದಾರಿ, ಪು. ೩೪೦

೫೧. ಎಂ.ಎಸ್.ವೇದಾ, ಜಯ, ಪು. ೪೦

೫೨. ಅದೇ, ಪು. ೯೧

೫೩. ಎಚ್.ವಿ.ಸಾವಿತ್ರಮ್ಮ, ಸೀತೆ–ರಾಮ–ರಾವಣ, ಪು. ೬

೫೪. ಅದೇ, ಪು. ೪೯

೫೫. ಡಾ. ಜ್ಯೋತಿ ಶಶಿಕುಮಾರ್, ಮಹಿಳಾ ಸಾಮಾಜಿಕತೆ, ಪು. ೭೧

೫೬. ಎಸ್.ವಿ.ಪ್ರಭಾವತಿ, ಕುಂತಿ, ಪು. ೫

೫೭. ಅನುಪಮಾ ನಿರಂಜನ, ಮಾಧವಿ, ಪು. ೨೩

೫೮. ಬೋಳಂತಕೋಡಿ ಈಶ್ವರಭಟ್ಟ (ಪ್ರ.ಸಂ), ವಿ.ಬಿ.ಮೊಳೆಯಾರ, ವಿ.ಬಿ.ಅರ್ತಿಕಜೆ (ಸ.ಸಂ), ಅನುಪಮಾ ಅಭಿನಂದನ, ಪು. ೨೪೪

೫೯. ಅನುಪಮಾ ನಿರಂಜನ, ಮಾಧವಿ, ಪು. ೮೬

೬೦. ಅದೇ, ಪು. ೮೬

೬೧. ಗೀತಾ ನಾಗಭೂಷಣ, ಬದುಕು, ಪು. ೨೭೪

೬೨. ಸ.ಉಷಾ, ಕಸೂತಿ, ೮೩

೬೩. ಅದೇ, ಪು. ೪೮

೬೪. ಅದೇ, ಪು. ೯೭

೬೫. ಅದೇ, ಪು. ೧೦೨

೬೬. ವೈದೇಹಿ, ಅಸ್ಪೃಶ್ಯರು, ಪು. ೪೭

೬೭. ಅದೇ, ಪು. ೪೬

೬೮. ಅದೇ, ಪು. ೫೧

೬೯. ಅದೇ, ಪು. ೪೬

೭೦. ಗೀತಾ ನಾಗಭೂಷಣ, ಬದುಕು, ಪು. ೩೦೮

೭೧. ಅದೇ, ಪು. ೧೩೭

೭೨. ಅದೇ, ಪು. ೩೫೩